ಸಂಪುಟ: 13 Volume | ಸಂಚಿಕೆ: 280 Issue | ಪುಟಗಳು 08 Pages | ಗುರುವಾರ 25 ಡಿಸೆಂಬರ್ 2025 | ₹6 | PRGINO.120927 (RNINO:KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

**ಬೆಳಗು**

ಇರುವೆಗಳು ಸಂಗ್ರಹಿಸಿದ ಕಾಳು, ಜೇನುನೊಣಗಳು ಕೂಡಿಟ್ಟ ಜೇನು ತುಪ್ಪ, ಜಿಪುಣನ ಸಂಪತ್ತು ಇವೆಲ್ಲಾ ಸಂಪೂರ್ಣ ನಾಶವಾಗುವವು.

–ಸುಭಾಷಿತ

ಪ್ರವಚನದಿಂದ ಜೀವನದಲ್ಲಿ ಹೊಸ ಬೆಳಕು 6

ಸಾಂಸ್ಕೃತಿಕ ಭವನ ಕಾಮಗಾರಿಗೆ ಭೂಮಿ ಪೂಜೆ 7

ಡಾ. ಶಾಮನೂರು ಶಿವಶಂಕರಪ್ಪಗೆ ನುಡಿ ನಮನ 8

## ಚಿನ್ನದ ರಾಮನ ಮೂರ್ತಿ ಕೊಡುಗೆ

**ಅಯೋಧ್ಯೆ:** ಅಯೋಧ್ಯೆಯ ರಾಮಲಲ್ಲಾ ದೇವಾಲಯ ಆವರಣದಲ್ಲಿ ಭವ್ಯವಾದ ಚಿನ್ನದ ವರ್ಣದ ಪ್ರತಿಮೆಯ ಸ್ಥಾಪನೆಗೆ ಅಯೋದ–್ಯ ಸಾಕ್ಷಿಯಾಗಲಿದೆ. ವಜ್ರಗಳು, ಪಚ್ಚೆಗಳು ಮತ್ತು ಇತರ ಅಮೂಲ್ಯ ರತ್ನಗಳಿಂದ ಕೂಡಿದ 10 ಅಡಿ ಎತ್ತರ, 8 ಅಡಿ ಅಗಲದ ಪ್ರತಿಮೆಯನ್ನು ಕರ್ನಾಟಕದ ಭಕ್ತರೊಬ್ಬರು ದಾನ ಮಾಡಿದ್ದಾರೆ. ಕರ್ನಾಟಕ ಮೂಲದ ದಾನಿಯೊಬ್ಬರು ಅಯೋಧ್ಯೆಯ ಶ್ರೀರಾಮ ಮಂದಿರಕ್ಕೆ 30 ಕೋಟಿ ಮೌಲ್ಯದ ಚಿನ್ನದ ರಾಮನ ಮೂರ್ತಿಯನ್ನು ಕೊಡುಗೆ ನೀಡಿದ್ದಾರೆ ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಡಾ. ಅನಿಲ್ ಮಿಶ್ರಾ ಹೇಳಿದ್ದಾರೆ.

## ಸ್ಯಾನ್ಸನ್ ಗ್ರೂಪ್‌ಗೆ 100 ಎಕರೆ

**ಬೆಂಗಳೂರು:** ಅಮೆರಿಕ ಮೂಲದ ಸೆಮಿಕಂಡಕ್ಟರ್ ಕಂಪನಿ ಸ್ಯಾನ್ಸನ್ ಗ್ರೂಪ್ ಗೆ ತನ್ನ ಘಟಕ ಸ್ಥಾಪಿಸಲು ಮಂಡ್ಯ ಜಿಲ್ಲೆಯಲ್ಲಿ 100 ಎಕರೆ ಭೂಮಿ ನೀಡಲು ರಾಜ್ಯ ಸರಕಾರ ಉತ್ಸುಕವಾಗಿದೆ. ಆದರೆ ಈ ಸಂಬಂಧವಾಗಿ ಆ ಕಂಪನಿಯ ಉನ್ನತಾಧಿಕಾರಿಗಳನ್ನು ಸಂಪರ್ಕಿಸಲು ಸಾಕಷ್ಟು ಪ್ರಯತ್ನಿಸಿದರೂ ಅವರು ಸಿಕ್ಕಿಲ್ಲ.



ಈ ಯೋಜನೆ ರಾಜ್ಯಕ್ಕೆ ಬಂದು ನೆಲೆಯೂರಬೇಕು ಎನ್ನುವುದು ನಮ್ಮ ಆಸಕ್ತಿಯಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಅವರು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಪತ್ರ ಬರೆದಿದ್ದಾರೆ.

ಈ ಸಂಬಂಧ ಮಾಹಿತಿ ನೀಡಿ, ಕುಮಾರಸ್ವಾಮಿ ಈ ಬಗ್ಗೆ ಅ.31ರಂದು ನಮಗೆ ಪತ್ರ ಬರೆದಿದ್ದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ನಾವು ನ.24ರಂದು ಪ್ರತ್ಯುತ್ತರ ಬರೆದಿದ್ದೆವು ಎಂದಿದ್ದಾರೆ.

## ಪಾಲಿಕೆ ಆಯುಕ್ತರ ಪಾದಯಾತ್ರೆ

**ಬೆಂಗಳೂರು:** ಪಾಲಿಕೆಯ ಆಯುಕ್ತ–ರಿಂದ 3 ಕಿ.ಮೀ ಪಾದಯಾತ್ರೆ ನಡೆಸಲಿದ್ದು, ಸ್ಥಳದಲ್ಲೇ ಸಾರ್ವಜನಿಕರ ಕುಂದುಕೊರತೆಗಳ ಪರಿಹಾರಕ್ಕೆ ಸೂಚನೆ ನೀಡಲಿದ್ದಾರೆ. ಜನಸಾಮಾನ್ಯರ ಸಮಸ್ಯೆಗಳನ್ನು ಆಲಿಸಲು ಮತ್ತು ಸ್ಥಳದಲ್ಲೇ ಪರಿಹಾರ ಕಂಡುಕೊಳ್ಳಲು ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತರು, ನಾಗರೀಕರೊಡನೆ ಇಂದು ಬ್ರಿಗೇಡ್ ಮಿಲೇನಿಯಂನಿಂದ ಯಲಚೇನಹಳ್ಳಿ ಮೆಟ್ರೋ ನಿಲ್ದಾಣದವರೆಗೆ ಸುದೀರ್ಘ ಪಾದಯಾತ್ರೆ ನಡೆಸಿದ್ದರು. ಸ್ಥಳೀಯ ಶಾಸಕರಾದ ಶ್ರೀ ಎಂ. ಕೃಷ್ಣಪ್ಪ ಅವರು ಪಾದಯಾತ್ರೆಗೆ ಜೊತೆಗೂಡಿದ್ದು ವಿಶೇಷವಾಗಿತ್ತು.

## 4 ಪ.ಪಂ.ಗಳಲ್ಲಿ ಬಿಜೆಪಿ ಜಯ ಭೇರಿ

**ಬೆಂಗಳೂರು:** ರಾಜ್ಯದ ಒಟ್ಟು 4 ಪಟ್ಟಣ ಪಂಚಾಯಿತಿಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿದ ಬಗ್ಗೆ ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಸಂತಸ ವ್ಯಕ್ತಪಡಿಸಿದ್ದಾರೆ. ದೊಡ್ಡಬಳ್ಳಾಪುರ ತಾಲ್ಲೂಕಿನ ಬಾಶೆಟ್ಟಿಹಳ್ಳಿ ಪಟ್ಟಣ ಪಂಚಾಯಿತಿಯ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದಿದೆ. ಇದಲ್ಲದೇ ದೊಡ್ಡಬಳ್ಳಾಪುರ ನಗರಸಭೆಯ ಒಂದು ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಿದ್ದಾರೆ ಎಂದು ತಿಳಿಸಿದ್ದಾರೆ.



ದಕ್ಷಿಣ ಕನ್ನಡ ಜಿಲ್ಲೆಯ ಬಜಪೆ, ಕಿನ್ನಿಗೋಳಿ, ಉತ್ತರ ಕನ್ನಡ ಜಿಲ್ಲೆಯ ಮಂಕಿ ಪಟ್ಟಣ ಪಂಚಾಯಿತಿ ಚುನಾವಣೆಯಲ್ಲೂ ಬಿಜೆಪಿ ಬಹುಮತ ಸಾಧಿಸಿದೆ.

## ಕ್ಷಪಣಿ ವ್ಯವಸ್ಥೆಯ ಪರೀಕ್ಷೆ ಸಕ್ಸಸ್

**ನವದೆಹಲಿ:** ಮುಂದಿನ ತಲೆಮಾರಿನ ಆಕಾಶ್–ಎನ್ ಜಿಕ್ಷಿಪಣಿ ವ್ಯವಸ್ಥೆಯ ಪರೀಕ್ಷೆಯನ್ನು ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯಶಸ್ವಿಯಾಗಿ ನಡೆಸಿದೆ. ಇದರಿಂದ ಭಾರತೀಯ ಸಶಸ್ತ್ರ ಪಡೆಗೆ ಮತ್ತಷ್ಟು ಬಲ ಬಂದಿದೆ.

ಈ ಸಂಬಂಧ ವಿಡಿಯೋವೊಂದನ್ನು ಹಂಚಿಕೊಂಡಿದ್ದು, ಹೆಚ್ಚಿನ ವೇಗದಲ್ಲಿ, ಕಡಿಮೆ ಎತ್ತರ ಹಾಗೂ ದೀರ್ಘ ಶ್ರೇಣಿ ಸೇರಿದಂತೆ ವಿವಿಧ ವೈಮಾನಿಕ ಗುರಿಗಳನ್ನು ಅತ್ಯಂತ ನಿಖರತೆಯಿಂದ ನಾಶಪಡಿಸಲಾಗಿದೆ ಎಂದು ಹೇಳಿದೆ.


ದೇಶೀಯವಾಗಿ ಅಭಿವೃದ್ಧಿಪಡಿಸಿದ ರೇಡಿಯೊ ಫ್ರೀಕ್ವೆನ್ಸಿ ಅನ್ವೇಷಕ, ಡ್ಯುಯಲ್ ಪಲ್ಸ್ ಸಾಲಿಡ್ ರಾ–ಕೆಟ್ ಮೋಟಾರ್, ಸ್ವದೇಶಿ ರಾಡಾರ್ ಮತ್ತು ಸಿ2



ವ್ಯವಸ್ಥೆಯನ್ನು ಹೊಂದಿರುವ ಆಕಾಶ್ ಎನ್ ಜಿ ಕ್ಷಿಪಣಿ ವಿವಿಧ ಶ್ರೇಣಿಯ ವೈಮಾನಿಕ ಬೆದರಿಕೆಗಳ ವಿರುದ್ಧ ವಾಯು ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಪ್ರಬಲ ವ್ಯವಸ್ಥೆಯಾಗಿದೆ ಎಂದು ತಿಳಿಸಿದೆ.

## ಎಚ್‌ಡಿಡಿ ಪಾರ್ಟಿ ಮಾಡಿ ಸುಪ್ರೀಂಗೆ ರಿಟ್

**ಬೆಂಗಳೂರು:** ಬೆಂಗಳೂರು– ಮೈಸೂರು ಇನ್ಫ್ರಾಸ್ಟ್ರಕ್ಚರ್ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ರಿಟ್ ಅರ್ಜಿ ಒಂದು ಸಲ್ಲಿಕೆಯಾಗಿದೆ ಅದರಲ್ಲಿ ನನ್ನನ್ನು ಕೂಡ ಪಾರ್ಟಿ ಮಾಡಿದ್ದಾರೆ ಎಂದು ಮಾಜಿ ಪ್ರಧಾನಿಗಳಾದ ಎಚ್.ಡಿ. ದೇವೇಗೌಡರು ತಿಳಿಸಿದರು.



ಪಕ್ಷದ ರಾಜ್ಯ ಕಚೇರಿ ಜೆಪಿ ಭವನದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿ; ಈ ಅರ್ಜಿಯಲ್ಲಿ ರಾಜ್ಯ ಸರ್ಕಾರ, ಕೆಲವು ರೈತರು ಹಾಗೂ ನನ್ನನ್ನೂ ಸೇರಿಸಿ ಪಾರ್ಟಿ ಮಾಡಲಾಗಿದೆ. ನಾನು ಈ ರಾಜ್ಯದಲ್ಲಿ ಮುಖ್ಯಮಂತ್ರಿ ಆಗಿದ್ದಾಗ ಸಿದ್ದರಾಮಯ್ಯ ಅವರು ಹಣಕಾಸು ಸಚಿವರಾಗಿದ್ದರು. ಬಿಎಂಐಸಿ ಯೋಜನೆಗೆ ಹಣಕಾಸು ಇಲಾಖೆಯ ಸಹಮತಿಯೂ ಇತ್ತು. ಆಗ ಯೋಜನೆಗೆ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆ ಒಪ್ಪಂದದ ಎಲ್ಲಾ ಮಾಹಿತಿಯೂ ಅವರಿಗೆ ಕೂಡ ಇದೆ ಎಂದಿದ್ದಾರೆ.

ಈ ಇಳಿವಯಸ್ಸಿನಲ್ಲೂ ನಾನು ವಕೀಲರಿಗೆ ಶುಲ್ಕ ಕೊಟ್ಟು ನ್ಯಾಯಾಲಯದಲ್ಲಿ ಹೋರಾಟ ಮಾಡಬೇಕಾಗಿದೆ. ನನಗೆ ಇನ್ನೂ ಹೋರಾಟದ ಕೆಚ್ಚಿದೆ. ಹೋರಾಟ ಮಾಡುವ ಶಕ್ತಿ ಇದೆ. ಒಂದು ಲಕ್ಷಕ್ಕೂ ಹೆಚ್ಚು ನೌಕರರು ಹೊರಗುತ್ತಿಗೆ ಮೂಲಕ ಕೆಲಸ ಮಾಡುತ್ತಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದರೆ ಎಷ್ಟು ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಾಗುತ್ತದೆ ಎಂದು ದೂರಿದ್ದಾರೆ.

# ಬಿಜೆಪಿ ಭರ್ಜರಿ ಬಜೆಟ್

### 2026–27ನೇ ಸಾಲಿನ ಕೇಂದ್ರ ಆಯವ್ಯಯ ಮಂಡನೆಗೆ ಸಿದ್ಧತೆ | ವಿತ್ತ ಸಚಿವೆಯತ್ತ ಜನತೆ ಚಿತ್ತ

• ಮಲ್ಲಮ್ಮ ನುಡಿ ವಾರ್ತೆ ಹೊಸದಿಲ್ಲಿ

2026–27ನೇ ಸಾಲಿನ ಕೇಂದ್ರ ಬಜೆಟ್ ಮಂಡನೆಗೆ ಭರ್ಜರಿ ಸಿದ್ಧತೆಗಳು ನಡೆದಿವೆ. ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಬಾರಿ ಆರ್ಥಿಕ ರಂಗಕ್ಕೆ ಸಿಹಿ ಸುದ್ದಿ ನೀಡಲಿದ್ದಾರೆ. ಭಾರತೀಯ ರಿಸರ್ವ್ ಬ್ಯಾಂಕ್ ಮಾರುಕಟ್ಟೆಯಲ್ಲಿ ಹಣದ ಹರಿವನ್ನು (ಲಿಕ್ವಿಡಿಟಿ) ಹೆಚ್ಚಿಸಿರುವುದು ಮತ್ತು ಜಿಡಿಪಿ ಲೆಕ್ಕಾಚಾರದ ಮೂಲ ವರ್ಷದ ಪರಿಷ್ಕರಣೆಯು ವಿತ್ತ ಸಚಿವರಿಗೆ ಬಜೆಟ್ ರಚನೆಯಲ್ಲಿ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಿದೆ.

**ಬಡ್ಡಿ ದರ ಕಡಿತ:** ಈ ವರ್ಷ ವಿತ್ತ ಸಚಿವಾಲಯವು ಐತಿಹಾಸಿಕ ನಾರ್ತ್ ಬ್ಲಾಕ್‌ನಿಂದ ಹೊಸದಾಗಿ ನಿರ್ಮಿಸಲಾದ ಕರ್ತವ್ಯ ಭವನಕ್ಕೆ ಸ್ಥಳಾಂತರಗೊಂಡಿದೆ. ಹೊಸ ಕಚೇರಿಯಲ್ಲಿ ಬಜೆಟ್ ತಯಾರಿ ನಡೆಸುತ್ತಿರುವ ಸಚಿವರಿಗೆ ಸ್ಥೂಲ ಆರ್ಥಿಕ ಪರಿಸ್ಥಿತಿ ವರದಾನವಾಗಿ ಪರಿಣಮಿಸಿದೆ.

2025ರಲ್ಲಿ ಆರ್‌ಬಿಐ ರೆಪೋ ದರವನ್ನು ಒಟ್ಟು 125 ಮೂಲಾಂಶಗಳಷ್ಟು ಕಡಿತಗೊಳಿಸಿದ್ದು, ಬಡ್ಡಿ ದರವನ್ನು ಶೇ. 6.50 ರಿಂದ ಶೇ. 5.25ಕ್ಕೆ ಇಳಿಸಿದೆ.





**ನಗದು ಲಭ್ಯತೆ 2.6 ಲಕ್ಷ ಕೋಟಿ ರೂ.**

ಮುಕ್ತ ಮಾರುಕಟ್ಟೆ ಕಾರ್ಯಾಚರಣೆಗಳ ಮೂಲಕ ಸರ್ಕಾರಿ ಸೆಕ್ಯುರಿಟಿಗಳ ಖರೀದಿಗೆ 1 ಲಕ್ಷ ಕೋಟಿ ರೂ., ಫಾರೆಕ್ಸ್ ಸ್ವಾಪ್ ಮೂಲಕ 5 ಬಿಲಿಯನ್ ಡಾಲರ್ ಮೌಲ್ಯದ ಹಣವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಡಿಸೆಂಬರ್ ಆರಂಭದ ವೇಳೆಗೆ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಹೆಚ್ಚುವರಿ ನಗದು ಲಭ್ಯತೆ 2.6 ಲಕ್ಷ ಕೋಟಿ ಇತ್ತು ಎಂದು ಮೂಲಗಳು ಖಚಿತ ಪಡಿಸಿವೆ.

**ಜಿಡಿಪಿ ಮೌಲ್ಯ 2–3 ರಷ್ಟು ಏರಿಕೆ?**

ಜಿಡಿಪಿ ಮೂಲ ವರ್ಷ ಬದಲಾವಣೆ ಮತ್ತು ಆದಾಯದ ಲೆಕ್ಕಾಚಾರ ಇನ್ನೊಂದು ಪ್ರಮುಖ ಬೆಳವಣಿಗೆಯೆಂದರೆ, 2026ರ ಫೆಬ್ರವರಿ 27ರಿಂದ ಜಿಡಿಪಿ ಲೆಕ್ಕಾಚಾರದ ಮೂಲ ವರ್ಷವನ್ನು 2022–23ಕ್ಕೆ ಬದಲಾಯಿಸಲಾಗುತ್ತಿದೆ. ಈ ಪರಿಷ್ಕರಣೆಯಿಂದಾಗಿ ನಾಮಿನಲ್ ಜಿಡಿಪಿ ಮೌಲ್ಯದಲ್ಲಿ ಶೇ. 2–3 ರಷ್ಟು ಏರಿಕೆಯಾಗುವ ಸಾಧ್ಯತೆಯಿದೆ.

**ಬ್ಯಾಂಕಿಂಗ್ ರಂಗಕ್ಕೆ ನೂತನ ಟಾನಿಕ್**

2025ರಲ್ಲಿ ಠೇವಣಿ ಬೆಳವಣಿಗೆಗಿಂತ ಸಾಲದ ಬೇಡಿಕೆ ಹೆಚ್ಚಾಗಿತ್ತು. ಆರ್‌ಬಿಐನ ಹಣಕಾಸು ಬೆಂಬಲವಿಲ್ಲದಿದ್ದರೆ ಬ್ಯಾಂಕುಗಳ ಮೇಲೆ ಒತ್ತಡ ಬೀಳುತ್ತಿತ್ತು. ಆದರೆ, ಆರ್‌ಬಿಐನ ಸಕಾಲಿಕ ನೆರವಿನಿಂದಾಗಿ ಬಡ್ಡಿ ದರಗಳು ಇಳಿಕೆಯಾಗಿ, ಗೃಹ ಮತ್ತು ಕಾರ್ಪೊರೇಟ್ ಸಾಲಗಾರರಿಗೆ ಅನುಕೂಲವಾಗಿದೆ ಎಂದು ಅಂದಾಜಿಸಲಾಗಿದೆ.

**ಪ್ರಗತಿಗೆ ಆದ್ಯತೆ**

2026–27ರ ಬಜೆಟ್ ಕೇವಲ ಅಂಕಿ–ಅಂಶಗಳ ಕಸರತ್ತಾಗಿರದೆ ಆರ್‌ಬಿಐನ ವಿವೇಚನಾಯುಕ್ತ ನೀತಿಗಳು ಮತ್ತು ಜಿಡಿಪಿ ಪರಿಷ್ಕರಣೆಯ ಲಾಭವನ್ನು ಬಳಸಿಕೊಂಡು ಆರ್ಥಿಕ ಅಭಿವೃದ್ಧಿಗೆ ಒತ್ತು ನೀಡುವ ಬಜೆಟ್ ಆಗುವ ಸಾಧ್ಯತೆ ದಟ್ಟವಾಗಿದ್ದು, ಕೇಂದ್ರದ ಬಜೆಟ್‌ಗಾಗಿ ಭಾರತ ಮಾತ್ರವಲ್ಲ, ಇಡೀ ವಿಶ್ವವೇ ಎದುರು ನೋಡುತ್ತಿದೆ.

**10 ವರ್ಷದ ಬಾಂಡ್ ಇಳುವರಿ 7.35**

ಆರ್‌ಬಿಐ ಕ್ರಮದಿಂದಾಗಿ ಸರ್ಕಾರದ 10 ವರ್ಷದ ಬಾಂಡ್ ಇಳುವರಿ ಶೇ. 7.35 ರಿಂದ ಶೇ. 7ಕ್ಕೆ ಇಳಿದಿದೆ. ಇದರಿಂದ ಸರ್ಕಾರದ ಬಡ್ಡಿ ಪಾವತಿಯ ಹೊರೆ 25,000 ದಿಂದ 30,000 ಕೋಟಿ ರೂ. ಕಡಿಮೆಯಾಗುವ ನಿರೀಕ್ಷೆಯಿದೆ. ಈ ಉಳಿತಾಯದ ಹಣವನ್ನು ನಿರ್ಮಲಾ ಸೀತಾರಾಮನ್ ಅವರು ಮೂಲಸೌಕರ್ಯ, ರೈಲ್ವೆ, ಯೋಜನೆ ಬಳಸಿಕೊಳ್ಳುವ ಸಾಧ್ಯತೆ ಇದೆ.

## ರಾಜ್ಯಕ್ಕೆ 40-45 ಟಿಎಂಸಿ ಬೇಕು

• ಮಲ್ಲಮ್ಮ ನುಡಿ ವಾರ್ತೆ ದೆಹಲಿ

ನದಿ ಜೋಡಣೆ ಯೋಜನೆಯಡಿ ನಮ್ಮ ರಾಜ್ಯಕ್ಕೆ ಕನಿಷ್ಠ 40–45 ಟಿಎಂಸಿ ನೀರನ್ನು ನೀಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.



ದೆಹಲಿಯ ಕರ್ನಾಟಕ ಭವನದಲ್ಲಿ ಬುಧವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಡಿ, ಗೋದಾವರಿ–ಕಾವೇರಿ ನದಿ ಜೋಡಣೆ ಯೋಜನೆಯಲ್ಲಿ ಹೆಚ್ಚುವರಿ 5 ಟಿಎಂಸಿ ನೀರನ್ನು ಭೀಮಾ ನದಿ ಪ್ರದೇಶಕ್ಕೆ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದಿದ್ದಾರೆ. ಗೋದಾವರಿ ಹಾಗೂ ಕಾವೇರಿ ನದಿ ಜೋಡಣೆ ಯೋಜನೆಯ ಮೊದಲ ಹಂತದಲ್ಲಿ 148 ಟಿಎಂಸಿ ನೀರನ್ನು ತಿರುಗಿಸಲಾಗುತ್ತಿದ್ದು, ಇದರಲ್ಲಿ ಕರ್ನಾಟಕಕ್ಕೆ ನಿಗದಿ ಮಾಡಿರುವುದು ಕೇವಲ 15.90 ಟಿಎಂಸಿ ನೀರು ಮಾತ್ರ. ನೀರನ್ನು ಯಾವ ಕಡೆ ನೀಡುತ್ತೀರಿ ಹಾಗೂ ಅದನ್ನು ಹೇಗೆ ಉಪಯೋಗಿಸಬೇಕು ಎಂಬ ಬೇಡಿಕೆ ಸಭೆಯ ಮುಂದಿಟ್ಟಿದ್ದೇವೆ.

## ಪೂಜಾ ವಿಚಾರಕ್ಕೆ ಶ್ರೀಗಳ ಜಗಳ

**ಕೊಪ್ಪಳ:** ಗಂಗಾವತಿ ತಾಲೂಕಿನ ಅಂಜನಾದ್ರಿ ದೇವಸ್ಥಾನದಲ್ಲಿ ಪೂಜಾ ವಿಚಾರಕ್ಕೆ ಸಂಬಂಧಿಸಿ ಸ್ವಾಮೀಜಿಗಳ ನಡುವೆ ಗಲಾಟೆ ನಡೆದಿರುವುದಾಗಿ ಮೂಲಗಳು ತಿಳಿಸಿವೆ.

ಅಂಜನಾದ್ರಿಗೆ ಆಗಮಿಸಿದ್ದ ಗೋವಿಂದನಾಂದ ಸರಸ್ವತಿ ಸ್ವಾಮೀಜಿ, ದೇವಸ್ಥಾನದ ಆರ್ಚಕರಾಗಿರುವ ವಿದ್ಯಾದಾಸಬಾಬಾ ವಿರುದ್ಧ ಅವಾಚ್ಯ ಶಬ್ದಗಳನ್ನು ಬಳಸಿ ಗಲಾಟೆ ನಡೆಸಿದ ಆರೋಪ ಕೇಳಿಬಂದಿದೆ.

ಅಂಜನಾದ್ರಿ ದೇವಸ್ಥಾನದ ಆವರಣದ ಒಳಭಾಗದಲ್ಲೇ, ಆಂಜನೇಯ ಸ್ವಾಮಿಯ ಗರ್ಭಗುಡಿಯ ಸಮೀಪದಲ್ಲಿ ಗಲಾಟೆ ನಡೆದಿದ್ದು, ಈ ವೇಳೆ ಪೂಜಾ ಕಾರ್ಯ–ಕ್ಕೆ ಅಡ್ಡಿಪಡಿಸಲಾಗಿದೆ ಎಂದು ವಿದ್ಯಾದಾಸಬಾಬಾ ಆರೋಪಿಸಿದ್ದಾರೆ. ಹಂಪಿಯ ಗೋವಿಂದನಾಂದ ಸರಸ್ವತಿ ಸ್ವಾಮೀಜಿ ಹಲ್ಲೆ ಮಾಡಿದ್ದಾರೆ ಎಂಬ ಆರೋಪವೂ ಇದೆ. ಗ್ರಾಮೀಣ ಪೊಲೀಸ್ ಠಾಣೆ–ಯ ಪೊಲೀಸರು ಇಬ್ಬರನ್ನೂ ಸಮಾಧಾನಪಡಿಸಿ ಗಲಾಟೆಯನ್ನು ತಾತ್ಕಾಲಿಕವಾಗಿ ಶಮನಗೊಳಿಸಿದ್ದು ಪ್ರಕರಣ ದಾಖಲಿಸಿದ್ದಾರೆ.

## ಮ್ಯಾಚಿಂಗ್ ಗ್ರ್ಯಾಂಟ್ ವಿಳಂಬವೇಕೆ..?

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿಗೆ ಸಂವಿಧಾನಕ್ಕೆ ತಿದ್ದುಪಡಿ ತಂದು 371ಜೆ ಕಾಯ್ದೆ ವಿಶೇಷ ಮೀಸಲಾತಿ ತಂದು ಆರೋಗ್ಯ, ಶಿಕ್ಷಣ ಸೇರಿದಂತೆ ಮೂಲಸೌಕರ್ಯ ಅಭಿವೃದ್ಧಿಗೆ ರಾಜ್ಯ ಸರ್ಕಾರ ಒಂದೆಡೆ ಪಣ ತೊಟ್ಟಿದೆ ಆದರೆ ಕೇಂದ್ರ ಸರ್ಕಾರ ಮ್ಯಾಚಿಂಗ್ ಗ್ರ್ಯಾಂಟ್ ನೀಡದೆ ವಿಳಂಬ ಧೋರಣೆ ತೋರುತ್ತಿದೆ ಎಂದು ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ.ಅಜಯ್ ಸಿಂಗ್ ತಿಳಿಸಿದ್ದಾರೆ.

ಕೆಕೆಆರ್‌ಡಿಬಿ ಮಂಡಳಿ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಷ್ಟ್ರಪತಿ, ಪ್ರಧಾನಮಂತ್ರಿ, ಹಣಕಾಸು ಸಚಿವರಿಗೆ ಹಲವಾರು ಬಾರಿ ಸಿ.ಎಂ. ಅವರು ಪತ್ರ ಬರೆದಿದ್ದಾರೆ. ಖುದ್ದಾಗಿ ಭೇಟಿಯಾಗಿ ಮನವರಿಕೆ ಮಾಡಿದ್ದರು. ಇದುರೆಗೆ ಅನುದಾನ ಬಂದಿಲ್ಲ. ಹೀಗಾಗಿ

**5,530 ಸಮಶಿಕ್ಷಕರ ಭರ್ತಿ ಕಾರ್ಯ**

ರಾಜ್ಯದಲ್ಲಿ 247 ಕೆ.ಪಿ.ಎಸ್. ಶಾಲೆಯಲ್ಲಿ ಕಲ್ಯಾಣದಲ್ಲಿರುವುದು ಕೇವಲ 60 ಶಾಲೆ. ಒಂದು ವರ್ಷದಲ್ಲಿ ಮಂಡಳಿಯಿಂದ 200, ಶಿಕ್ಷಣ ಇಲಾಖೆಯಿಂದ 100 ಶಾಲೆ ತಲೆ ಎತ್ತಲಿವೆ. ಎಸ್ಸೆಸ್ಸೆಲ್ಸಿ ಪರೀಕ್ಷೆ ಸುಧಾರಣೆಗೆ 3.44 ಕೋಟಿ ಖರ್ಚು ಮಾಡಲಾಗುತ್ತಿದೆ. ಇದರಲ್ಲಿ ಪ್ರತಿ ತಾಲೂಕಿಗೆ 25 ಲಕ್ಷ ವ್ಯಯ ಮಾಡಲಾಗುತ್ತಿದೆ. 5,530 ಸಮಶಿಕ್ಷಕರ ಭರ್ತಿ ಕಾರ್ಯ ನಡೆದಿದೆ ಎಂದು ಅಜಯ್‌ಸಿಂಗ್ ತಿಳಿಸಿದ್ದಾರೆ.

24,878 ಕೋಟಿ ಅನುದಾನ ಹಂಚಿಕೆ: 2013–14 ರಿಂದ 2025–26ನೇ ಸಾಲಿನ ವರೆಗೆ ರಾಜ್ಯ ಸರ್ಕಾರದಿಂದ ಕೆ.ಕೆ. ಆರ್.ಡಿ.ಬಿ ಮಂಡಳಿಗೆ 24,878 ಕೋಟಿ ರೂ. ಅನುದಾನ ಹಂಚಿಕೆ ಮಾಡಿದ್ದು, ಇದೇ ಮೊತ್ತವನ್ನು ಮಹಾರಾಷ್ಟ್ರದ ವಿದರ್ಭ ಮಾದರಿಯಲ್ಲಿ ಕೇಂದ್ರ ಸರ್ಕಾರ ಕೆ.ಕೆ.ಆರ್.ಡಿ.ಬಿ. ಮಂಡಳಿಗೆ ನೀಡಬೇಕು. ಕೇಂದ್ರದಿಂದ ಅನುದಾನ ಬಂದಲ್ಲಿ ಪ್ರದೇಶದಲ್ಲಿ ಇನ್ನು ಹಚ್ಚಿನ ಅಭಿವೃದ್ಧಿ ಕೆಲಸ ಕಾರ್ಯಗಳು ಮಾಡಲು ಸಾಧ್ಯವಾಗಲಿದೆ ಎಂದಿದ್ದಾರೆ.



## 28ರವರೆಗೆ ಸಿಎಂ ಸಿದ್ರಾಮಯ್ಯ

• ಮಲ್ಲಮ್ಮ ನುಡಿ ವಾರ್ತೆ ಮೈಸೂರು

ಸಿಎಂ ಬದಲಾವಣೆಯ ಚರ್ಚೆಗಳ ನಡುವೆಯೇ ಸಚಿವ ಜಮೀರ್ ಅಹಮದ್ ಖಾನ್ ಅವರು ಸಿದ್ದರಾಮಯ್ಯ ಪರವಾಗಿ ಬ್ಯಾಟಿಂಗ್ ಮಾಡಿದ್ದಾರೆ. ಇಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರೇ 2028ರವರೆಗೆ ಸಿಎಂ ಆಗಿರುತ್ತಾರೆ. ಅವರನ್ನು ಕುರ್ಚಿಯಿಂದ ಕೆಳಗಿಳಿಸಲು ಯಾರ ಕೈಯಲ್ಲೂ ಸಾಧ್ಯವಿಲ್ಲ ಎಂದು ಪುನರುಚ್ಚರಿಸಿದ್ದಾರೆ.

**ರಾಜಣ್ಣ ಪತ್ರ, ಪ್ರತಿಕ್ರಿಯೆಗೆ ಡಿ.ಕೆ.ಶಿ ನಿರಾಕರಣೆ**

ಮತಗಳ್ಳತನ ಕುರಿತ ತಮ್ಮ ಹೇಳಿಕೆಯನ್ನು ತಿರುಚಿ ತಪ್ಪಾದ ಅರ್ಥದಲ್ಲಿ ವರದಿ ನೀಡಿದವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೆ.ಎನ್. ರಾಜಣ್ಣ ಅವರು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರಿಗೆ ಪತ್ರ ಬರೆದಿದ್ದು, ಈ ಬೆಳವಣಿಗೆ ಕುರಿತು ಪ್ರತಿಕ್ರಿಯೆ ನೀಡಲು ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ನಿರಾಕರಿಸಿದ್ದಾರೆ.



**ಪಕ್ಷದ ಪ್ರಗತಿಯೇ ನನ್ನ ಗುರಿ**

**ಹೈಕಮಾಂಡ್ ನಿರ್ಧಾರವೇ ಅಂತಿಮ**

ಹೈಕಮಾಂಡ್ ಮಾತ್ರ ಸಿಎಂ ಸ್ಥಾನ ಬದಲಾವಣೆ ಬಗ್ಗೆ ಬಗ್ಗೆ ತೀರ್ಮಾನ ಮಾಡಬಹುದು. ಹೈಕಮಾಂಡ್ ಬಿಟ್ಟು ಬೇರೆ ಇನ್ಯಾರ ಕೈಯಲ್ಲೂ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಲು ಸಾಧ್ಯವಿಲ್ಲ. ಅವರು ಸಿಎಂ ಕುರ್ಚಿಯಲ್ಲಿ ಭದ್ರವಾಗಿ ಕುಳಿತಿದ್ದಾರೆ. ಸ್ವತಃ ಸಿದ್ದರಾಮಯ್ಯ ಅವರೇ ಸ್ಪಷ್ಟಪಡಿದ್ದು, ಮತ್ತೆ ಆ ಮಾತು ಯಾಕೆ ಎಂದು ಜಮೀರ್ ಪ್ರಶ್ನಿಸಿದ್ದಾರೆ.

**ಮುಖ್ಯ ಮಂತ್ರಿಯ ಬದಲಾವಣೆ ಕೇವಲ ಮಾಧ್ಯಮಗಳ ಸೃಷ್ಟಿ. ನಾನು ಕೇವಲ ಕಾರ್ಯಕರ್ತನಾಗಿರಲು ಬಯಸುತ್ತೇನೆ: ಡಿಸಿಎಂ ಡಿಕೆಶಿವಕುಮಾರ್**

# ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವದ ಭಾಗವೇ ಪುಸ್ತಕ ಸಂತೆ



**• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ಯ ವರ್ಷಪೂರ್ತಿ 75 ಕಾರ್ಯಕ್ರಮಗಳು ನಡೆಸಲಾಗುತ್ತಿದ್ದು, ಇದೇ ಜ.24 ರಿಂದ 26 ರ ವರೆಗೆ ಜಿಲ್ಲಾ ಕಸಾಪ ವತಿಯಿಂದ ಬೀದರನಲ್ಲಿ ಪುಸ್ತಕ ಸಂತೆ ಕಾರ್ಯಕ್ರಮ ನಡೆಸಲಾಗುತ್ತಿದೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಸುರೇಶ ಚನಶೆಟ್ಟಿ ಹೇಳಿದರು.

ಪಟ್ಟಣದ ಹಿರೇಮಠ ಸಂಸ್ಥಾನದಲ್ಲಿ ಬುಧವಾರ ಜಿಲ್ಲಾ ಕಸಾಪ ಪದಾಧಿಕಾರಿಗಳು, ಬೀದರನಲ್ಲಿ ಜ.24 ರಿಂದ ನಡೆಯಲಿರುವ ಪುಸ್ತಕ ಸಂತೆ ಕಾರ್ಯಕ್ರಮಕ್ಕೆ ಹಿರೇಮಠದ ಪೂಜ್ಯರಿಗೆ ಅಧಿಕೃತ ಆಹ್ವಾನ ನೀಡಿ ಅವರು ಮಾತನಾಡಿದರು. ದಕ್ಷಿಣ ಕರ್ನಾಟಕದ ಬೆಂಗಳೂರು, ಮೈಸೂರು ಭಾಗಕ್ಕೆ ಸೀಮಿತವಾದ ಪುಸ್ತಕ ಸಂತೆಯಂತಹ ಕಾರ್ಯಕ್ರಮಗಳು ಕರ್ನಾಟಕದ ಕಿರೀಟ ಬೀದರ ಜಿಲ್ಲೆಯಲ್ಲಿ ಆಯೋಜಿಸುವ ನಿಟ್ಟಿನಲ್ಲಿ ವೀರಲೋಕ ಪ್ರಕಾಶನ ಸಂಸ್ಥೆಯ ಸಹಯೋಗದಲ್ಲಿ, ಜಿಲ್ಲಾ ಕಸಾಪ ಸಹಕಾರದಿಂದ ಭಾಲ್ಕಿ ಹಿರೇಮಠ ಅರ್ಪಿಸುವ, ವೀರಲೋಕ ಪುಸ್ತಕ ಸಂತೆ ಬೀದರಿನ ಸಾಯಿ ಶಾಲಾ ಮೈದಾನದಲ್ಲಿ ನಡೆಸಲು ನಿರ್ಧರಿಸಲಾಗಿದೆ. ಕಾರ್ಯಕ್ರಮವು ಪುಸ್ತಕ ಕೇಂದ್ರವಾಗಿರುತ್ತದೆ. ಪುಸ್ತಕ ಸಂತೆ ಕಾರ್ಯಕ್ರಮವು ಮೂರು ದಿನಗಳಕಾಲ ಯುವಗೋಷ್ಠಿ, ಸಾಹಿತ್ಯ ಗೋಷ್ಠಿ, ಮಕ್ಕಳ ಗೋಷ್ಠಿ, ಮಹಿಳಾ ಗೋಷ್ಠಿ, ಕೃಷಿ ಗೋಷ್ಠಿ ಸೇರಿದಂತೆ ಹಲವು ಗೋಷ್ಠಿಗಳನ್ನು ಆಯೋಜಿಸಲಾಗುವುದು ಎಂದು ಹೇಳಿದರು.

> ಹಿರೇಮಠ ಸಂಸ್ಥಾನ ಪ್ರಕಾಶನದ ವತಿಯಿಂದ ಪ್ರತಿವರ್ಷ ಸಾಕಷ್ಟು ಪುಸ್ತಕಗಳನ್ನು ಪ್ರಕಟಿಸಲಾಗುತ್ತಿದೆ. ಈ ಎಲ್ಲಾ ಪುಸ್ತಕಗಳು ಓದುಗರ ಮನಸ್ಸನ್ನು ಹಿಡಿದಿಟ್ಟುಕೊಳ್ಳುವುದರೊಂದಿಗೆ ಅವರಲ್ಲಿ ಅಧ್ಯಾತ್ಮಿಕ ಮತ್ತು ಭಕ್ತಿಭಾವ ಮೂಡಿಸುವ ಕಾರ್ಯಮಾಡುತ್ತಿವೆ.
> ಶ್ರೀ ಗುರುಬಸವ ಪಟ್ಟದ್ದೇವರು, ಹಿರೇಮಠ ಸಂಸ್ಥಾನ ಭಾಲ್ಕಿ.

> ಪುಸ್ತಕಗಳು ನಮ್ಮ ಗೆಳೆಯರನ್ನಾಗಿಸಿಕೊಳ್ಳಬೇಕು, ಯುವಕರು, ಮಕ್ಕಳು ಮೊಬೈಲ್ ಗೀಳಲ್ಲಿ ಬಾಳನ್ನು ಹಾಳುಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಪುಸ್ತಕಗಳ ಸ್ನೇಹ ಬೆಳೆಸುವುದು ಉತ್ತಮ ಬೆಳವಣಿಗೆಯಾಗಿದೆ. ಈ ನಟ್ಟಿನಲ್ಲಿ ಪುಸ್ತಕ ಸಂತೆ ಉತ್ತಮ ಕಾರ್ಯಮಾಡಬೇಕು.
> ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು, ಹಿರೇಮಠ ಸಂಸ್ಥಾನ ಭಾಲ್ಕಿ.

ಪುಸ್ತಕ ಸಂತೆ ಆಯೋಜಕ ಗುರನಾಥ ರಾಜಗೀರಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಹಿರೇಮಠದ ಹಿರಿಯ ಸ್ವಾಮೀಜಿ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು, ಹಿರೇಮಠದ ಪೀಠಾದಿಪತಿ ಶ್ರೀ ಗುರುಬಸವ ಪಟ್ಟದ್ದೇವರು ಆಹ್ವಾನ ಸ್ವೀಕರಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಕಸಾಪ ತಾಲೂಕು ಅಧ್ಯಕ್ಷ ನಾಗಭೂಷಣ ಮಾಮಡಿ, ಜಿಲ್ಲಾ ಕಸಾಪ ಮುಖಂಡರಾದ ಶಿವಶಂಕರ ಟೋಕರೆ, ಸಂಗಮೇಶ ಜ್ಯಾಂತೆ, ಕಸಾಪ ನಗರ ಘಟಕದ ಅಧ್ಯಕ್ಷ ಸಂತೋಷ ಬಿಜಿಪಾಟೀಲ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ತಾಲೂಕು ಅಧ್ಯಕ್ಷ ಜಯರಾಜ ದಾಬಶೆಟ್ಟಿ, ಎಬಿವಿಪಿ ಮುಖಂಡ ಈಶ್ವರ ರುಮ್ಮಾ, ಉಪನ್ಯಾಸಕ ಶೇಖ್ ಸಾಬೇರ ಪಟೇಲ ಉಪಸ್ಥಿತರಿದ್ದರು.

ಶಾಂತಯ್ಯಾ ಸ್ವಾಮಿ ನಿರೂಪಿಸಿದರು.

# ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಸಮರ್ಪಕ ಔಷಧಿಗಳು ದೊರಕಿಸಿಕೊಡಿ: ಪ್ರಕಾಶ ಹಳ್ಳಿಖೇಡ

**• ಮಲ್ಲಮ್ಮ ನುಡಿ ವಾರ್ತೆ ಬೀದರ್:**



ಜಿಲ್ಲೆಯ ಸುಮಾರು ಸರ್ಕಾರಿ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಸಮರ್ಪಕವಾಗಿ ಚಿಕಿತ್ಸೆ ದೊರೆಯುತ್ತಿಲ್ಲ. ವಿಶೇಷವಾಗಿ ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಹಳ್ಳಿಖೇಡ (ಬಿ) ನಗರದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಅನೇಕ ಬಡ ರೋಗಿಗಳು ಚಿಕಿತ್ಸೆಗಾಗಿ ಬರುತಿದ್ದಾರೆ ಆದರೆ ಬರುವಂತರ ರೋಗಿಗಳಿಗೆ ಸಮರ್ಪಕ ಚಿಕಿತ್ಸೆ ಹಾಗೂ ಔಷಧಿಗಳು ದೊರೆಯುತ್ತಿಲ್ಲ, ವಿಶೇಷವಾಗಿ (IVFLOODGLUCOSE)ದೊರೆಯದಂತಾಗಿದೆ ಇದು ಕೇವಲ ತಾತ್ಕಾಲಿಕವಾಗಿ ಅಲ್ಲದೆ ಸುಮಾರು 1 ವರ್ಷಕ್ಕಿಂತ ಹೆಚ್ಚಿನ ಅವಧಿಯಿಂದ ರೋಗಿಗಳಿಗೆ ದೊರೆಯದಂತಾಗಿದೆ.

ಇದರಿಂದ ಬಡ ರೋಗಿಗಳು ಚಿಕಿತ್ಸೆಸಿಗದೆ ಅನಾರೋಗ್ಯದಿಂದ ಬಳಲಿ ಸಾಯುವಂತಾಗಿದೆ. ಸದರಿ ಸಮುದಾಯ ಆರೋಗ್ಯ ಕೇಂದ್ರದ ಅಡಿಯಲ್ಲಿ ಸುಮಾರು 30ಕ್ಕು ಹೆಚ್ಚಿನ ಹಳ್ಳಿಗಳ ವ್ಯಾಪ್ತಿಯಿದ್ದು ಎಲ್ಲಾ ಹಳ್ಳಿಗಳ ಬಡ ನಿವಾಸಿಗಳಿಗೆ ಹಳ್ಳಿಖೇಡ (ಬಿ) ಸಮುದಾಯ ಆರೋಗ್ಯ ಕೇಂದ್ರ ಒಂದೇ ಆಸರೆಯಾಗಿದೆ ಆದರೆ ಇಲ್ಲೆ ಸಮರ್ಪಕ ಔಷಧಿಗಳು ದೊರೆಯದಿರುವುದು ತುಂಬಾ ದುರದೃಷ್ಟಕರವಾಗಿದೆ.

ಆದ್ದರಿಂದ ತಾವುಗಳು ಸದರಿ ಸಮಸ್ಯೆಯನ್ನು ಗಂಭಿರವಾಗಿ ಪರಿಗಣಿಸಿ ಆದಷ್ಟು ಬೇಗನೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಮರ್ಪಕ ಔಷಧಿಗಳು ದೊರೆಯುವಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಂಸ್ಥಾಪಕ ರಾಜ್ಯಾಧ್ಯಕ್ಷರಾದ ಪ್ರಕಾಶ ಹಳ್ಳಿಖೇಡ ಅವರು ಜಿಲ್ಲಾಧಿಕಾರಿ ಮೂಲಕ ಸರ್ಕಾರದ ಅಧಿನ ಮುಖ್ಯ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಮನವಿ ಪತ್ರ ವಿತರಿಸಿದರು,ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ ಹಂತ ಹಂತವಾಗಿ ವಿವಿಧ ರೂಪಗಳಲ್ಲಿ ನಮ್ಮ ಸಂಘಟನೆ ವತಿಯಿಂದ ಹೋರಾಟ ಮಾಡಲಾಗುವುದು ಎಂದು ಈ ಮೂಲಕ ಎಚ್ಚರಿಸಿದ್ದಾರೆ,

# ರೈತ ದಿನಾಚರಣೆ ಬೀದರ್‌ನಲ್ಲಿ ಜ್ವಲಂತ ಸಮಸ್ಯೆಗಳ ಕುರಿತು ದುಂಡು ಮೇಜಿನ ಸಭೆ

**• ಮಲ್ಲಮ್ಮ ನುಡಿ ವಾರ್ತೆ ಬೀದರ:**



ವಿಶ್ವ ರೈತ ದಿನಾಚರಣೆಯ ಅಂಗವಾಗಿ ಕಾರಂಜ ಮುಳುಗಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿ ಹಾಗೂ ಬೀದರ್ ಜಿಲ್ಲಾ ಸಮಗ್ರ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿ, ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ದುಂಡು ಮೇಜಿನ ಸಭೆ ಆಯೋಜಿಸಲಾಗಿತ್ತು.

ಸಭೆಯಲ್ಲಿ ಚಿಂತಕರು, ಹಿರಿಯ ಹೋರಾಟಗಾರರು ಹಾಗೂ ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷರಾದ ಲಕ್ಷ್ಮಣ ದಸ್ತಿ ಮಾತನಾಡಿ, ಬೀದರ್ ಜಿಲ್ಲೆಯ ಜ್ವಲಂತ ಸಮಸ್ಯೆಗಳಲ್ಲಿ ಕಾರಂಜ ಯೋಜನೆಯಡಿ ಭೂಮಿ ಕಳೆದುಕೊಂಡ ರೈತರಿಗೆ ಇನ್ನೂ ಸರಿಯಾದ ಪರಿಹಾರ ದೊರಕದಿರುವುದು ಅತ್ಯಂತ ಗಂಭೀರ ವಿಷಯ ಎಂದು ಹೇಳಿದರು.

2024ರ ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರ ಉಪಸ್ಥಿತಿಯಲ್ಲಿ ಕಲಬುರಗಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವ ನಿರ್ಣಯ ಕೈಗೊಳ್ಳಲಾಗಿತ್ತು.ಮೂರು ತಿಂಗಳೊಳಗೆ ವರದಿ ಸಲ್ಲಿಸಬೇಕಿದ್ದರೂ ವಿಳಂಬವಾಗಿದೆ. ಆದರೂ ಡಿಸೆಂಬರ್ ಅಂತ್ಯದೊಳಗೆ ವರದಿ ಸರ್ಕಾರ-ಕ್ಕೆ ಸಲ್ಲಿಸಲಾಗುವುದು ಎಂದು ಪ್ರಾದೇಶಿಕ ಆಯುಕ್ತರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.ಈ ವರದಿ ಸಲ್ಲಿಕೆಯಾದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ಇದನ್ನು ಸವಾಲಾಗಿ ತೆಗೆದುಕೊಂಡು ಹೊಸ ವರ್ಷದ ಆರಂಭದಲ್ಲಿಯೇ ರೈತರಿಗೆ ಸಿಹಿ ಸುದ್ದಿ ನೀಡಬೇಕು ಎಂದು ಅವರು ಒತ್ತಾಯಿಸಿದರು.ಸಭೆಯಲ್ಲಿ ಸಕ್ಕರೆ ಕಾರ್ಖಾನೆಯ ಪುನರಾರಂಭ, ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿ ಹಾಗೂ ರೈತರು ಪಕ್ಷಾತೀತವಾಗಿ ಒಂದಾಗುವ ಅಗತ್ಯವಿದೆ ಎಂಬ ಮೂರು ಪ್ರಮುಖ ನಿರ್ಣಯಗಳನ್ನು ಮಂಡಿಸಿ ಎಲ್ಲ ರೈತರು ಕೈ ಎತ್ತಿ ಅಂಗೀಕರಿಸಿದರು.ಹಿರಿಯ ನ್ಯಾಯವಾದಿ ಹಾಗೂ ರೈತ ಹೋರಾಟಗಾರ ಶ್ರೀ ಬಾಬು ಹೊನ್ನನಾಯಕ ಮಾತನಾಡಿ, ಜನವರಿ 16ರಂದು ನಡೆಯುವ ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ರೈತರಿಗೆ ಮಾಸಿಕ ಗೌರವಧನ ನೀಡುವ ವಿಷಯದಲ್ಲೂ ಧ್ವನಿ ಎತ್ತುವ ಅಗತ್ಯವಿದೆ ಎಂದರು.

ಕಾರಂಜ ಮುಳುಗಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ಶ್ರೀ ಚಂದ್ರಶೇಖರ್ ಪಾಟೀಲ್ ಮಾತನಾಡಿ, ಬರುವ ವರ್ಷದ ಮೊದಲ ತಿಂಗಳಲ್ಲೇ ಸರ್ಕಾರ ಸೂಕ್ತ ಪರಿಹಾರ ನೀಡದಿದ್ದರೆ ಹೋರಾಟ ಪುನರಾರಂಭವಾಗಲಿದೆ ಎಂದು ಎಚ್ಚರಿಸಿದರು.ರೈತಹೋರಾಟಗಾರರಾದ ರಾಜಪ್ಪ ಕೋಸಂ,ಡಾ. ರಾಜಶೇಖರ, ಜ್ಞಾನೋದಯ ಶಿಕ್ಷಣ ಸಂಸ್ಥೆ ಬೀದರಿನ ಅಧ್ಯಕ್ಷ ದಶರಥ ಗುರು, ಕರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸದಸ್ಯ ವಿನಯ್ ಕುಮಾರ್ ಮಾಳಗೆ, ಹರ್ಷವರ್ಧನ್ ರಾಥೋಡ್, ಸಂಗಾರೆಡ್ಡಿ ಮೊಹಮ್ಮದ್ ಸೋಲಾಪುರಿ, ಎಂ.ಡಿ. ಯೂಸುಫ್, ಲಕ್ಷ್ಮೀಬಾಯಿ ಖೌದೇ, ತೇಜಮ್ಮ ಹಿಲಾಲ್ಪುರ್, ಶಂಕರ ರಾವ್ ಮನ್ನಳ್ಳಿ, ಶಿವ ಬಗದಲ, ಮಾದಪ್ಪ ಬಸವರಾಜ ಹಿಂದಾ ಸೇರಿದಂತೆ ನೂರಕ್ಕೂ ಹೆಚ್ಚು ರೈತರು ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಂಡು ಚರ್ಚೆ ನಡೆಸಿ ಮಹತ್ವದ ನಿರ್ಣಯಗಳನ್ನು ಕೈಗೊಂಡರು. ಸಭೆಯನ್ನು ಹಿರಿಯ ಹೋರಾಟಗಾರ ವೀರಭದ್ರಪ್ಪ ಉಪ್ಪಿನ ಅವರು ನಿರೂಪಿಸಿ.

# ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ



**ಮಲ್ಲಮ್ಮ ನುಡಿ ವಾರ್ತೆ ಬೀದರ:**

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ ಹಾಗೂ ಕ್ಷೇತ್ರ ಶಿಕ್ಷಣಅಧಿಕಾರಿಗಳ ಕಛೇರಿ ಶಾಲಾ ಶಿಕ್ಷಣ ಇಲಾಖೆ ಬೀದರ ಅವರ ಸಂಯುಕ್ತಾಶ್ರಯದಲ್ಲಿಂದು ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮಂದಕನಳ್ಳಿಯಲ್ಲಿ ರಾಷ್ಟ್ರೀಯಾ ಗ್ರಾಹಕ ದಿನ ಅಂಗವಾಗಿ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಬೀದರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಕಾಶ ಅರ್ಜುನ ಬನಸೋಡೆ ಅವರು ಸಸೀಗೆ ನೀರೆವುದರ ಮೂಲಕ ಕಾರ್ಯಕ್ರಮ ಉದ್ಘಾಟನೆಯನ್ನು ಮಾಡಿ ರಾಷ್ಟ್ರೀಯಾ ಗ್ರಾಹಕ ದಿನ ಮತ್ತು ಪೋಕ್ಸೋ ಕಾಯ್ದೆ ಕುರಿತು ಮಕ್ಕಳಿಗೆ ತಿಳಿಸಿದ್ದರು ಹಾಗೂ ಮಂದಕನಳ್ಳಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯನ್ನು ಭೇಟಿ ನೀಡಿ ಅಲ್ಲಿನ ಮಕ್ಕಳ ಜೋತೆ ವಿಧ್ಯಾಭ್ಯಾಸ ಕುರಿತು ಚರ್ಚೆ ಮಾಡಿದರು.


ಕೇಶವ ಶ್ರೀಮಾಳೆ ವಿಶೇಷ ಅಭಿಯೋಜಕರು ಲೋಕಾಯುಕ್ತ ಬೀದರ ಅವರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸವಲತ್ತುಗಳ ಕುರಿತು ಮಾತನಾಡಿದ್ದರು.

ಈ ಕಾರ್ಯಕ್ರಮದಲ್ಲಿ ಬೀದರ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇ-ರಿಯ ಶಿಕ್ಷಣ ಸಂಯೋಜಕರಾದ ಸಂಜೀವಕುಮಾರ ಮೇಟಿ, ದಶರಥ ಎಸ್ ಕೋಟಿಕರ, ಬಾಬರ ಹುಸೇನ, ಮುಖ್ಯಗುರುಗಳು ಸರ್ಕಾರಿ ಹಿರಿಯ ಪ್ರೌಢ ಶಾಲೆ ಮಂದಕನಳ್ಳಿ ಮತ್ತು ಶಿವಪುತ್ರ ಪಾಟೀಲ್ ಮುಖ್ಯ ಗುರುಗಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಂದಕನಳ್ಳಿ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢ ಶಾಲೆ ಮಂದಕನಳ್ಳಿ ಶಾಲೆಯ ಸಿಬ್ಬಂಧಿ ವರ್ಗದವರು ಹಾಗೂ ಮಕ್ಕಳು ಉಪಸ್ಥಿತರಿದ್ದರು.

# ಇಂದು ವಿದ್ಯುತ್ ವ್ಯತ್ಯಯ

**ಮಲ್ಲಮ್ಮ ನುಡಿ ವಾರ್ತೆ ಬೀದರ:** ಬೀದರ ಕಾರ್ಯ ಮತ್ತು ಪಾಲನೆ ವಿಭಾಗದ ವ್ಯಾಪ್ತಿಯಲ್ಲಿ ಔರಾದ (ಬಾ) ಉಪ ವಿಭಾಗದ ಸಂತಪೂರ ಉಪ ಕೇಂದ್ರದಲ್ಲಿ ತುರ್ತು ಕೆಲಸದ ಪ್ರಯುಕ್ತ ಡಿಸೆಂಬರ್.26 ರಂದು ಬೆಳಿಗ್ಗೆ 10 ರಿಂದ ಸಾಯಂಕಾಲ 4 ಗಂಟೆಯವರೆಗೆ 1ಕೆವಿ ಸಂತಪೂರ, 11ಕೆವಿ ಕೌಠಾ, 11ಕೆವಿ ಬಲ್ಲೂರ, 11ಕೆವಿ ಚಾಂದೂರಿ, 11ಕೆವಿ ಜೋನಿಕೇರಿ, 11ಕೆವಿ ಹಿಪ್ಪಳಗಾಂವ ಮತ್ತು 33ಕೆವಿ ವಡಗಾಂವ, 33ಕೆವಿ ಮುಧೋಳ ಫೀಡರಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಕಾರಣ ಗ್ರಾಹಕರು ಸಹಕರಿಸಬೇಕೆಂದು ಭಾಲ್ಕಿ 110ಕೆವಿ ವಿದ್ಯುತ್ ಉಪ ಕೇಂದ್ರದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೂರು ಕಿಶೋರ ಕಾರ್ಮಿಕ ಮಕ್ಕಳ ಪತ್ತೆ



**• ಮಲ್ಲಮ್ಮ ನುಡಿ ವಾರ್ತೆ ಬೀದರ:**

ಹುಮನಾಬಾದ ಪಟ್ಟಣದಲ್ಲಿರುವ ವಿವಿಧ ಅಂಗಡಿ, ಗ್ಯಾರೇಜ್, ಹೋಟೆಲ್, ಬೇಕರಿ ಮತ್ತು ಬಸ್ ನಿಲ್ದಾಣದೊಳಗಿರುವ ಅಂಗಡಿಗಳ ಮೇಲೆ ಡಿಸೆಂಬರ್.23 ರಂದು ತಹಶೀಲ್ದಾರ ಹುಮನಾಬಾದ ಹಾಗೂ ಟಾಸ್ಕ ಫೋರ್ಸ್ ಸಮಿತಿಯವರು ಹಠಾತ ದಾಳಿ ನಡೆಸಿ 3 ಕಿಶೋರ ಕಾರ್ಮಿಕ ಮಕ್ಕಳನ್ನು ರಕ್ಷಿಸಲಾಗಿದೆ.

ಮಕ್ಕಳ ಶಾಲಾ ದಾಖಲಾತಿಯನ್ನು ಪರಿಶೀಲಿಸಿ ಅಂಗಡಿ ಮಾಲೀಕರ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲಾಗುವುದು.ಬಾಲಕಾರ್ಮಿಕರನ್ನು ಮತ್ತು ಕಿಶೋರ ಕಾರ್ಮಿಕರನ್ನು ನೇಮಿಸಿಕೊಳ್ಳಬಾರದೆಂದು ಅಂಗಡಿಗಳ ಮಾಲೀಕರಲ್ಲಿ ಅರಿವು ಮೂಡಿಸಿ ಕರ ಪತ್ರ ಹಂಚಲಾಯಿತು. ಕಾರ್ಮಿಕ ಆಯುಕ್ತರು ಬೆಂಗಳೂರು ಹಾಗೂ ಬೀದರ ಜಿಲ್ಲಾಧಿಕಾರಿಗಳು, ಕಾರ್ಮಿಕ ಅಧಿಕಾರಿಗಳು ಬೀದರವರ ಆದೇಶದಂತೆ ತಹಶೀಲ್ದಾರ ಹುಮನಾಬಾದ ರವರ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕ ಹಾಗೂ ಕಿಶೋರ್ ಕಾರ್ಮಿಕ ಪದ್ಧತಿ ನಿರ್ಮೂಲನೆ ಕುರಿತು 2ನೇ ತ್ರೈಮಾಸಿಕ ಕಾರ್ಯಪಡೆ ಸಮಿತಿ ಸಭೆ ಮತ್ತು ಕಾರ್ಯಕಾರಿಣಿ ಸಮಿತಿ ಹಾಗೂ ಪುನರ್ವಸತಿ ಸಮಿತಿ ಸಭೆ ನಡೆಸಿ ಈ ದಾಳಿ ನಡೆಸಲಾಗಿದೆ.

ಈ ಸಂದರ್ಭದಲ್ಲಿ ಕಾರ್ಮಿಕ ನಿರೀಕ್ಷಕರು ಹುಮನಾಬಾದ, ರಾಹುಲ ಹಾಗೂ ಯೋಜನಾ ನಿರ್ದೇಶಕರು ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಕಾರ್ಮಿಕ ಇಲಾಖೆ ಬೀದರ್, ಅರ್ಜುನ್, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಸಿಬ್ಬಂದಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹುಮನಾಬಾದ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಸಿಬ್ಬಂದಿ, ಪುರಸಭೆ ಹುಮನಾಬಾದ ಸಿಬ್ಬಂದಿ, ಜಿ ಎಸ್ ನಿಂಗರಾಜ್ ಅರಸ್ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳು, ತಾಲೂಕು ಆರೋಗ್ಯ ಅಧಿಕಾರಿ ಆರೋಗ್ಯ ಇಲಾಖೆ, ಪೊಲೀಸ್ ಠಾಣೆ ಅಧಿಕಾರಿ ವೃತ್ತ ನಿರೀಕ್ಷಕರು ಹುಮನಾಬಾದ, ಪರಿಶಿಷ್ಟವರ್ಗಗಳ ಕಲ್ಯಾಣ ಅಧಿಕಾರಿ ಹುಮನಾಬಾದ, ಬಿಸಿಎಂ ಇಲಾಖೆ ಸಿಬಂದಿ, ಮಕ್ಕಳ ಕ್ಷೇತ್ರ ಕಾರ್ಯ ನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆ ಸೇವಕರು ಹುಮನಾಬಾದ, ಹಾಗೂ ಮಕ್ಕಳ ಸಹಾಯವಾಣಿ ಸಿಬ್ಬಂದಿಯವರು ಭಾಗವಹಿಸಿದ್ದರು.

# ಅಖಿಲ ಭಾರತ ಬ್ರಾಹ್ಮಣ ಮಹಾಸಂಘದ ವಿಪ್ರೋತ್ಸವ

**• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:**

ಅಖಿಲ ಭಾರತ ಬ್ರಾಹ್ಮಣ ಮಹಾಸಂಘ ವತಿಯಿಂದ ಬ್ರಾಹ್ಮಣ ಸಮುದಾಯದ ಏಕತೆ, ಸ್ವಾಭಿಮಾನ, ಸಾಂಸ್ಕೃತಿಕ ಗುರುತು ಹಾಗೂ ಸಮಾಜೋನ್ನತಿಗೆ ಮೀಸಲಾದ ಮಹತ್ವದ ಕಾರ್ಯಕ್ರಮವಾದ 'ವಿಪ್ರೋತ್ಸವ-2026' ಅನ್ನು ದಿನಾಂಕ ಜನವರಿ 4, 2026 (ಭಾನುವಾರ) ಮಧ್ಯಾಹ್ನ 3.00 ರಿಂದ ಸಂಜೆ 8.00 ಗಂಟೆಯವರೆಗೆ, ಗಾಯನ ಸಮಾಜ, ಕೃಷ್ಣರಾಜೇಂದ್ರ ರಸ್ತೆ, ಬಸವನಗುಡಿ, ಬೆಂಗಳೂರು ಇಲ್ಲಿ ಭವ್ಯವಾಗಿ ಆಯೋಜಿಸಲಾಗಿದೆ.

ಈ ವಿಪ್ರೋತ್ಸವವು ಕೇವಲ ಆಚರಣೆಯಲ್ಲ; ಇದು ಬ್ರಾಹ್ಮಣ ಸಮಾಜದ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಅಭಿವೃದ್ಧಿಯ ಕುರಿತು ಚಿಂತನೆ ನಡೆಸುವ ಮಹಾಸಂಗಮವಾಗಿದ್ದು, ಸಮಾಜ ಎದುರಿಸುತ್ತಿರುವ ಸವಾಲುಗಳಿಗೆ ಒಗ್ಗಟ್ಟಿನ ಪರಿಹಾರ ಹುಡುಕುವ ವೇದಿಕೆಯಾಗಲಿದೆ.ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ ಶ್ರೀ ಅರ್ಜುನ ಅವಧೂತ ಗುರುಜೀ ವಹಿಸಲಿದ್ದು, ಉದ್ಘಾಟನೆಯನ್ನು ಶ್ರೀ ಆರ್.ವಿ. ದೇಶಪಾಂಡೆ (ಮಾಜಿ ಸಚಿವರು ಹಾಗೂ ಪ್ರಸ್ತುತ ಶಾಸಕರು) ನೆರವೇರಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ಬ್ರಾಹ್ಮಣ ಮಹಾಸಂಘದ ಅಖಿಲ ಭಾರತ ಅಧ್ಯಕ್ಷರಾದ ಡಾ. ಗೋವಿಂದ ಕುಲಕರ್ಣಿ ವಹಿಸಲಿದ್ದಾರೆ. ಈ ಮಹೋತ್ಸವದಲ್ಲಿ ಕರ್ನಾಟಕದ ವಿವಿಧ ಜಿಲ್ಲೆಗಳ ಅಧ್ಯಕ್ಷರು ಹಾಗೂ ಅವರ ಜಿಲ್ಲಾ ತಂಡಗಳು ಭಾಗವಹಿಸಲಿದ್ದು, ಬ್ರಾಹ್ಮಣ ಸಮಾಜದ ಸಂಘಟನಾ ಶಕ್ತಿ, ಒಗ್ಗಟ್ಟು ಮತ್ತು ಸಕ್ರಿಯತೆಯನ್ನು ಪ್ರದರ್ಶಿಸಲಿದ್ದಾರೆ. ಗಣ್ಯ ಅತಿಥಿಗಳು ಕಾರ್ಯಕ್ರಮದಲ್ಲಿ ಕನ್ನಡ ಚಿತ್ರರಂಗದ ಹಿರಿಯ ನಟ ಶ್ರೀ ಶ್ರೀನಾಥ್, ಶಾಸಕರಾದ ಶ್ರೀ ಸಿ.ಕೆ. ರಾಮಮೂರ್ತಿ, ಶ್ರೀ ವಿಶ್ವಾಸ್ ವಿದ್ಯಾ,ಶ್ರೀ ತ್ರಿವಿಕ್ರಮ್ ಜೋಶಿ, ಶ್ರೀ ಗಿರೀಶ್ ನಿಲಗುಂದ್, ಶ್ರೀಮತಿ ರೇವತಿ ಕಾಮತ್, ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಜೈಸಿಂಹ, ರಾಜ್ಯಾಧ್ಯಕ್ಷ ಶ್ರೀ ಜಿ.ಆರ್. ಪ್ರದೀಪ್, ರಾಜ್ಯ ಉಪಾಧ್ಯಕ್ಷ ಶ್ರೀ ರಾಘವೇಂದ್ರ ಆಲೂರು, ರಾಜ್ಯ ಕಾರ್ಯದರ್ಶಿ ಶ್ರೀ ವಿಶ್ವನಾಥ ಜೋಶಿ ಸೇರಿದಂತೆ ವಿವಿಧ ಕ್ಷೇತ್ರಗಳ ಅನೇಕ ಗಣ್ಯರು ಭಾಗವಹಿಸಲಿದ್ದಾರೆ. ಗೌರವ ಮತ್ತು ಪ್ರಶಸ್ತಿಗಳು ವಿಪ್ರೋತ್ಸವ-2026ರ ವಿಶೇಷ ಆಕರ್ಷಣೆಯಾಗಿ ಸಮಾಜಸೇವೆ, ಶಿಕ್ಷಣ, ಸಂಸ್ಕೃತಿ ಹಾಗೂ ರಾಷ್ಟ್ರಸೇವೆಯಲ್ಲಿ ವಿಶಿಷ್ಟ ಸಾಧನೆ ಮಾಡಿದ ಖ್ಯಾತ ಬ್ರಾಹ್ಮಣರಿಗೆ 'ಭಾರ್ಗವ ಭೂಷಣ ಪ್ರಶಸ್ತಿ' ಪ್ರದಾನ ಮಾಡಲಾಗುವುದು.ಇದಕ್ಕೆ ಜೊತೆಗೆ ಭಾರತೀಯ ಕ್ರೀಡಾ ಕ್ಷೇತ್ರದಲ್ಲಿ ದೇಶಕ್ಕೆ ಹೆಮ್ಮೆ ತಂದಿರುವ ಭಾರತೀಯ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಕುಮಾರಿ ರಾಜಿತಾ ಹಟ್ವಾರ್ ಅವರಿಗೆ ವಿಶೇಷ ಗೌರವ ಸನ್ಮಾನ ನೀಡಲಾಗುವುದು. **ಸಮಾಜಮುಖಿ ಚಿಂತನೆ**

ಈ ವೇದಿಕೆಯಲ್ಲಿ ಬ್ರಾಹ್ಮಣ ಸಮಾಜದೊಳಗಿನ ಬಡ, ನಿರ್ಗತಿಕ ಹಾಗೂ ಅಸಹಾಯಕ ಕುಟುಂಬಗಳ ಸಮಸ್ಯೆಗಳು, ಶೈಕ್ಷಣಿಕ ಸಹಾಯ, ಉದ್ಯೋಗಾವಕಾಶ, ಆರ್ಥಿಕ ಭದ್ರತೆ ಹಾಗೂ ಸಾಮಾಜಿಕ ರಕ್ಷಣೆಯ ಕುರಿತು ಗಂಭೀರ ಚರ್ಚೆ ನಡೆಯಲಿದೆ.ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣ ಸಮುದಾಯವನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಅಪಪ್ರಚಾರ ಹಾಗೂ ದೌರ್ಜನ್ಯಗಳ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಬೇಕೆಂಬ ಆಗ್ರಹವೂ ವ್ಯಕ್ತವಾಗಲಿದೆ.

# ಫೇಲೋಶಿಗಾಗಿ ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಬೀದರ:**

2025-26ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿ.ಎಚ್.ಡಿ ಅಧ್ಯಯನ ಪ್ರಾರಂಭಿಸಿರುವ (ದಿನಾಂಕ:10-02-2025 ಮತ್ತು ಅದರ ನಂತರ ಪ್ರಥಮ ವರ್ಷದ ಪಿ.ಎಚ್.ಡಿ ಪ್ರಾರಂಭಿಸಿರಬೇಕು) ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಹಾಗೂ 3ಬಿ ಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ/ಫೇಲೋಶಿಗಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ ಎಂದು ಬೀದರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳಲ್ಲಿ/ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪ್ರಥಮ ವರ್ಷದ ಪಿ.ಎಚ್.ಡಿ.ಅಧ್ಯಯನ ಮಾಡುತ್ತಿರುವ ಹೊಸ ಅಭ್ಯರ್ಥಿಗಳು ಮಾತ್ರ ಆಫ್-ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09-01-2026 ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖಾ ವೆಸೈಟ್ https://www.bcwd.karnataka.gov.in ನಲ್ಲಿ ವೀಕ್ಷಿಸಬಹುದಾಗಿದೆ ಅಥವಾ ದೂರವಾಣಿ ಸಂಖ್ಯೆ: 8050770004 (ಕಛೇರಿಕಾರ್ಯನಿರ್ವಹಿಸುವ ಸಮಯ ಬೆಳಿಗ್ಗೆ 10.00 ರಿಂದ ಸಂಜೆ 05.30ರ ವರೆಗೆ) ಹಾಗೂ ಜಿಲ್ಲಾ ಕಛೇರಿ ಬೀದರ ದೂರವಾಣಿ ಸಂಖ್ಯೆ 08482-233148 ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

# ಹೈನುಗಾರಿಕೆ ತರಬೇತಿ: ಹೆಸರು ನೋಂದಾಯಿಸಲು ಸೂಚನೆ

**ಮಲ್ಲಮ್ಮ ನುಡಿ ವಾರ್ತೆ ಬೀದರ:**

ಬೀದರ ಜಿಲ್ಲೆಯರೈತ ಬಾಂಧವರಲ್ಲಿ ಸಹರ್ಷದಿಂದ ತಿಳಿಯಪಡಿಸುವುದೇನೆಂದರೆ, "ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ ಬೀದರ", ಜಿಲ್ಲಾ ಕೇಂದ್ರ ಗ್ರಂಥಾಲಯ ಹಿಂಭಾಗ ಬೀದರನಲ್ಲಿ ದಿನಾಂಕ: 29-12-2025 ರಿಂದ 30-12-2025 ರವರೆಗೆ ಆಧುನಿಕ ಹೈನುಗಾರಿಕೆ ತರಬೇತಿಯನ್ನು ಹಮ್ಮಿಕೊಳ್ಳಲಾಗುತ್ತಿದ್ದು ಇದರ ಸದುಪಯೋಗವನ್ನು ಜಾನುವಾರು ಮಾಲೀಕರು ರೈತ ಬಾಂಧವರು ಪಡೆಯಬೇಕಾಗಿ ಬೀದರ ಪಶುಪಾಲನಾ ಮತ್ತು ಪಶು ವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಬೀದರ ಜಿಲ್ಲೆಯ ರೈತರು ತರಬೇತಿಗೆ ಹಾಜರಾಗುವ ಸಮಯದಲ್ಲಿ ಆಧಾರಕಾರ್ಡ್ ಪ್ರತಿ ಹಾಗೂ ಇತ್ತೀಚಿನ ಎರಡು ಭಾವಚಿತ್ರ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಆಸಕ್ತರು ಮುಂಚಿತವಾಗಿ ವಾಪ್ ಮೂಲಕ ತಮ್ಮ ಹೆಸರು ಮತ್ತು ಮೊಬೈಲ ಸಂಖ್ಯೆಯೊಂದಿಗೆ ನೋಂದಾಯಿಸಲು ತಿಳಿಸಿದೆ. 40 ರೈತರಿಗೆತರಬೇತಿಗೆಅವಕಾಶವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9902561957 ಗೆ ಸಂಪರ್ಕಿಸಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

## ಸುದರ್ಶನ ಕ್ರಿಯೆ, ಧ್ಯಾನ ವಿಧಾನ ಕಲಿತ ಶಿಬಿರಾರ್ಥಿಗಳು

# ಆನಂದ ಅನುಭೂತಿ ಶಿಬಿರ ಸಮಾರೋಪ



**• ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಇಲ್ಲಿಯ ಕುಂಬಾರವಾಡ ರಸ್ತೆಯಲ್ಲಿ ಇರುವ ನವೀನ್ ಪಬ್ಲಿಕ್ ಸ್ಕೂಲನಲ್ಲಿಯ ಆರ್ಟ್ ಆಫ್ ಲಿವಿಂಗ್ ಜಿಲ್ಲಾ ಮಾಹಿತಿ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ನಾಲ್ಕು ದಿನಗಳ ಆನಂದ ಅನುಭೂತಿ ಶಿಬಿರ ಮಂಗಳವಾರ ಸಂಜೆ ಸಮಾರೋಪಗೊಂಡಿತು.

ಬೆಂಗಳೂರಿನ ಆರ್ಟ್ ಆಫ್ ಲಿವಿಂಗ್ ಶಿಕ್ಷಕ ಚೆನ್ನವೀರ ತಡಕಲ್ ಅವರು ಸುದರ್ಶನ ಕ್ರಿಯೆ, ಧ್ಯಾನ ಹಾಗೂ ಪ್ರಾಣಾಯಾಮಗಳನ್ನು ಹೇಳಿಕೊಟ್ಟರು.

ಆನಂದ ಅನುಭೂತಿ ಶಿಬಿರ ಒತ್ತಡ, ಆತಂಕ, ಖಿನ್ನತೆ ನಿವಾರಿಸುತ್ತದೆ. ಮನಸ್ಸಿಗೆ ಶಾಂತಿ, ದೇಹಕ್ಕೆ ದೃಢತೆ ನೀಡುತ್ತದೆ. ಜೀವನದಲ್ಲಿ ಆನಂದ ಹಾಗೂ ಸಾಮರಸ್ಯ ತರಲು ಸಹಾಯ ಮಾಡುತ್ತದೆ ಎಂದು ಅವರು ತಿಳಿಸಿದರು.

ಆರ್ಟ್ ಆಫ್ ಲಿವಿಂಗ್ ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯ ಕಾಮಶೆಟ್ಟಿ ಚಿಕ್ಕಬಸೆ ಮಾತನಾಡಿ, ಸರ್ವರ ಮೊಗದಲ್ಲಿ ನಗು ಹಾಗೂ ಮನಸ್ಸಿನಲ್ಲಿ ಸಂತೋಷ ಉಂಟು ಮಾಡುವುದೇ ರವಿಶಂಕರ ಗುರೂಜಿ ಅವರ ಧ್ಯೇಯವಾಗಿದೆ ಎಂದು ಹೇಳಿದರು.ಜಿಲ್ಲಾ ಮಾಹಿತಿ ಕೇಂದ್ರವು ಬರುವ ದಿನಗಳಲ್ಲಿ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು

.ಸ್ವಾತಿ, ದಾನೇಶ್ವರಿ, ಶಿಕ್ಷಕರಾದ ಎಚ್.ಎಲ್, ವಿದ್ಯಾ, ಶಿವಾನಂದ, ಶ್ರೀಕಾಂತ, ಸ್ವಯಂ ಸೇವಕರಾದ ರೋಹಿತ್, ರತ್ನಪ್ಪ, ಚನ್ನರೆಡ್ಡಿ, ಸುನೀಲ್ ಕುಲಕರ್ಣಿ, ಸುರೇಶ್, ಸುನಂದಾ, ಸುಜಾತಾ, ಸಂಗೀತಾ, ರವೀಂದ್ರ, ಮಡಿವಾಳಯ್ಯ, ರಾಚಯ್ಯ, ಶೋಭಾ, ರಾಕೇಶ್, ಶಿವಾನಿ, ಹಾಜರಿದ್ದರು.

ನಗರ ಹಾಗೂ ಸುತ್ತಮುತ್ತಲಿನ ಪ್ರದೇಶದ ಜನರು ಶಿಬಿರದಲ್ಲಿ ಪಾಲ್ಗೊಂಡಿದ್ದರು.



# ಮಹಾವಿದ್ಯಾಲಯಗಳ ಯುವಜನೋತ್ಸವ ಕಲಾ ಸಂಗಮ ಉದ್ಘಾಟನೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಹಾಗೂ ಕಲಬುರಗಿ ಕೃಷಿ ಮಹಾವಿದ್ಯಾಲಯ ಇವುಗಳ ಸಹಯೋಗದೊಂದಿಗೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ 16ನೇ ಅಂತರ ಮಹಾವಿದ್ಯಾಲಯಗಳ ಯುವಜನೋತ್ಸವ 2025-26 “ಕಲಾ ಸಂಗಮ” ಕಾರ್ಯಕ್ರಮವನ್ನು ಇದೇ ಡಿಸೆಂಬರ್ 26 ರಿಂದ 28 ರವರೆಗೆ ಮೂರು ದಿನಗಳ ಕಾಲ ಕಲಬುರಗಿ ಕೃಷಿ ಮಹಾವಿದ್ಯಾಲಯದ ಪ್ರೇಕ್ಷಾಗೃಹದಲ್ಲಿ ಹಮ್ಮಿಕೊಳ್ಳಲಾಗಿದೆ.

ಯುವಜನೋತ್ಸವ ಅಂಗವಾಗಿ ಡಿಸೆಂಬರ್ 26 ರಂದು ಶುಕ್ರವಾರ ಬೆಳಿಗ್ಗೆ 9.30 ಗಂಟೆಗೆ ಕಲಬುರಗಿ ಕೃಷಿ ವಿಶ್ವವಿದ್ಯಾಲಯದ ಪೇಕ್ಷಾಗೃಹದಲ್ಲಿ ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ವಿವಿಧ ಸಾಂಸ್ಕೃತಿಕ ತಂಡಗಳನ್ನೊಳಗೊಂಡ ಭವ್ಯವಾದ ಮೆರವಣಿಗೆಯನ್ನು ಉದ್ಘಾಟಿಸುವರು. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಮ್. ಹನುಮಂತಪ್ಪ ಅವರು ಅಧ್ಯಕ್ಷತೆ ವಹಿಸುವರು. ರಾಜ್ಯ ಪ್ರಶಸ್ತಿ ಪುರಸ್ಕೃತರು ಹಾಗೂ ಕನ್ನಡ ಚಿತ್ರಲೋಕದ ಖ್ಯಾತ ಹ್ಯಾಸ ಕಲಾವಿದ ವೈಜನಾಥ ಬಿರಾದಾರ, ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಸದಸ್ಯ ಡಾ. ಸಂದೀಪ ಬಿ. ಮಾಳಗಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯಗಳಾದ ರಾಯಚೂರು, ಭೀಮರಾಯನಗುಡಿ, ಕಲಬುರಗಿ, ಹಗರಿ, ಗಂಗಾವತಿಯ ಕೃಷಿ ಮಹಾವಿದ್ಯಾಲಯ ಮತ್ತು ಕೃಷಿ ತಾಂತ್ರಿಕ ಮಹಾವಿದ್ಯಾಲಯ ಹಾಗೂ ರಾಯಚೂರು ಕೃಷಿ ಸ್ನಾತಕೋತ್ತರ ಮಹಾವಿದ್ಯಾಲಯಗಳು ಭಾಗವಹಿಸಲಿದ್ದಾರೆ. ಕಲಬುರಗಿ ಕೃಷಿ ಮಹಾವಿದ್ಯಾಲಯದ ಡೀನ್ (ಕೃಷಿ) ಡಾ. ಶಿವಶರಣಪ್ಪ ಬಿ. ಗೌಡಪ್ಪ ಅವರು ಯುವಜನೋತ್ಸವ "ಕಲಾ ಸಂಗಮ-2025" ದ ಸಾರಥ್ಯವನ್ನು ವಹಿಸಿಕೊಳ್ಳಲಿದ್ದಾರೆ. ಯುವಜನೋತ್ಸವ ಅಂಗವಾಗಿ ಡಿಸೆಂಬರ್ 26, 27 ಹಾಗೂ 28 ರವರೆಗೆ ಮೂರು ದಿನಗಳ ಕಾಲ ದೇಶಭಕ್ತಿ ಗೀತೆ, ಸಮೂಹ ಗಾಯನ, ಸುಗಮ ಸಂಗೀತ, ಏಕಾಂಕ ನಾಟಕ, ಭಿತ್ತಿ ಚಿತ್ರ, ವ್ಯಂಗ್ಯ ಚಿತ್ರ, ಚರ್ಚಾ ಸ್ಪರ್ಧೆ, ಭಾಷಣ ಸ್ಪರ್ಧೆ, ಆಶು ಭಾಷಣ ಸ್ಪರ್ಧೆ, ಪ್ರಹಸನ, ಏಕ ಪಾತ್ರಾಭಿನಯ, ಮೂಕಾಭಿನಯ, ಸ್ಥಳದಲ್ಲಿಯೇ ಚಿತ್ರ ಬಿಡಿಸುವುದು, ಮಣ್ಣಿನಿಂದ ಆಕೃತಿ ರಚನಾ ಸ್ಪರ್ಧೆ, ರಂಗೋಲಿ, ರಸಪ್ರಶ್ನೆ ಮತ್ತು ಜಾನಪದ ನೃತ್ಯಗಳ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ.“ಕಲಾ ಸಂಗಮ”ದ ಸಮಾರೋಪ ಸಮಾರಂಭ: ಡಿಸೆಂಬರ್ 28 ರಂದು ರವಿವಾರ ಮಧ್ಯಾಹ್ನ 2.30 ಗಂಟೆಗೆ ಕಲಬುರಗಿ ಕೃಷಿ ವಿಶ್ವವಿದ್ಯಾಲಯದ ಪೇಕ್ಷಾಗೃಹದಲ್ಲಿ “ಕಲಾ ಸಂಗಮ”ದ ಸಮಾರೋಪ ಸಮಾರಂಭ ಜರುಗಲಿದೆ. ಕಲಬುರಗಿಯ ಕಡಗಂಚಿ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಟ್ಟು ಸತ್ಯನಾರಾಯಣ ಮತ್ತು ಕಲಬುರಗಿ ಖ್ಯಾತ ಹ್ಯಾಸ ಕಲಾವಿದ ಗುಂಡಣ್ಣ ಡಿಗ್ಗಿ ಹರ್ಸೂರ್ ಅವರು ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಈ ಸಂದರ್ಭದಲ್ಲಿ ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ ಬಯ್ಯಾಪುರ, ಮಾಜಿ ಶಾಸಕ ಹಾಗೂ ತುಂಗಭದ್ರಾ ಕಾಡಾ ಅಧ್ಯಕ್ಷರಾದ ಬಸನಗೌಡ ಬ್ಯಾಗ್ವಾಟ್, ವ್ಯವಸ್ಥಾಪನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಡಿ., ಮಲ್ಲೇಶ ಕೊಲಿಮಿ, ಮಧುಸೂಧನ ರೆಡ್ಡಿ, ತಿಮ್ಮಣ್ಣ ಸೋಮಪ್ಪ ಚಾವಡಿ, ಶ್ರೀನಿವಾಸರಾವ್ ಚರುಕಮಲ್ಲಿ, ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶರಣಬಸಪ್ಪ ಕೊಟೇಪ್ಪಗೋಳ್ ಗೌರವಾನ್ವಿತರಾಗಿ ಘನ ಉಪಸ್ಥಿತರಿರುವರು. ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಹಾಗೂ ಶಿಕ್ಷಣ ನಿರ್ದೇಶಕ ಡಾ. ಗುರುರಾಜ ಸುಂಕದ, ಸಂಶೋಧನಾ ನಿರ್ದೇಶಕ ಡಾ. ಎ. ಅಮರೇಗೌಡ, ವಿಸ್ತರಣಾ ನಿರ್ದೇಶಕ ಡಾ. ಎ. ಆರ್. ಕುರುಬರ್, ಡೀನ್ (ಸ್ನಾತಕೋತ್ತರ) ಡಾ. ಎ. ಜಿ. ಶ್ರೀನಿವಾಸ, ಡೀನ(ಕೃಷಿ) ಡಾ. ನಾರಾಯಣರಾವ್ ಕೆ., ಡೀನ್(ಕೃಷಿ ತಾಂತ್ರಿಕತೆ) ಡಾ. ಎಮ್.ಎಸ್. ಐಯ್ಯನಗೌಡರ್, ಡೀನ (ಕೃಷಿ) ಡಾ. ಶ್ಯಾಮರಾವ್ ಜಹಾಗೀರದಾರ್, ವಿಶೇಷ ಅಧಿಕಾರಿ ಡಾ. ಎಸ್. ಟಿ. ಯಂಜೀರಪ್ಪ, ಗ್ರಂಥಪಾಲಕ ಡಾ. ಮಚೇಂದ್ರನಾಥ ಎಸ್., ಪ್ರಭಾರ ಅಧಿಕಾರಿ ಡಾ. ಜಿ. ರವಿಶಂಕರ, ಹಣಕಾಸು ನಿಯಂತ್ರಣಾಧಿಕಾರಿ ಹನುಮೇಶ ನಾಯಕ್, ಆಡಳಿತ ಅಧಿಕಾರಿ ಡಾ. ಜಾಗೃತಿ ಬಿ. ದೇಶಮಾನ್ಯ, ಆಸ್ತಿ ಅಧಿಕಾರಿ ರವಿ ಮೇಸ್ತಾ ಹಾಗೂ ಡೀನ್(ವಿದ್ಯಾರ್ಥಿ ಕ್ಷೇಮಾಭಿವೃದ್ಧಿ) ಡಾ. ಯು. ಸತೀಶಕುಮಾರ ಅವರು ಯುವಜನೋತ್ಸವದಲ್ಲಿ ಉಪಸ್ಥಿತರಿರುವರು.

# ಕೇಂದ್ರ ಕಾರಾಗೃಹದಲ್ಲಿ ವಿಶ್ವ ಧ್ಯಾನ ದಿನ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಕೇಂದ್ರ ಕಾರಾಗೃಹ ಹಾಗೂ ಆರ್ಟ್ ಆಫ್ ಲಿವಿಂಗ್ ಶಾಖೆ ಇವುಗಳ ಸಹಯೊಗದೊಂದಿಗೆ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ರವಿವಾರ “ವಿಶ್ವ ಧ್ಯಾನ” ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಈ ಸಂಸ್ಥೆಯ ಮುಖ್ಯ ಅಧೀಕ್ಷಕರಾದ ಡಾ. ಅನಿತಾ ಆರ್ ಅವರು, ಪ್ರತಿ ವರ್ಷ ಡಿಸೆಂಬರ್ 21 ರಂದು ಧ್ಯಾನ ದಿನವನ್ನು ಆಚರಿಸಲಾಗುತ್ತಿದೆ. ವೈಜ್ಞಾನಿಕವಾಗಿ ಧ್ಯಾನವು ಏಕಾಗ್ರತೆ ಸ್ಮರಣೆ ಮತ್ತು ಭಾವನಾತ್ಮಕ ನಿಯಂತ್ರಣವನ್ನು ಸುಧಾರಿಸುವ ಮೂಲಕ ಮೆದುಳಿನ ಕಾರ್ಯವನ್ನು ಹೆಚ್ಚಿಸುತ್ತದೆ. ರಕ್ತದ ಒತ್ತಡವನ್ನು ಕಡಿಮೆ ಮಾಡಿ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಹಾಗಾಗಿ ಎಲ್ಲರೂ ದಿನಾಲು ಧ್ಯಾನವನ್ನು ಮಾಡಬೇಕೆಂದು ಕರೆ ನೀಡಿದರು.

ಈ ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ವ್ಯವಸ್ಥಾಪಕ ಆಡಳಿತ ಅಧಿಕಾರಿ ದತ್ತಾತ್ರೆ ಚಿಂಚೊರ್ ಅವರು ಮಾತನಾಡಿ, ಧ್ಯಾನವು ಒತ್ತಡ ನಿರ್ವಹಣೆ, ಏಕಾಗ್ರತೆ ಮತ್ತು ಸೌಹಾರ್ದವನ್ನು ಬೆಳೆಸುತ್ತದೆ. ಪ್ರತಿಯೊಬ್ಬರು ಇಪ್ಪತ್ತು ನಿಮಿಷಗಳ ಕಾಲ ಧ್ಯಾನ ಮಾಡಿ ಜೀವನದ ಶಾಂತಿಯನ್ನು ಅನುಭವಿಸಬಹುದು ಎಂದರು.

ಕಾರ್ಯಕ್ರಮದಲ್ಲಿ ಕಲಬುರಗಿ ಕೇಂದ್ರ ಕಾರಾಗೃಹದ ಬಂದಿಗಳು ಹಾಗೂ ಅಧಿಕಾರ ಸಿಬ್ಬಂದಿಗಳು ಭಾಗವಹಿಸಿ ಧ್ಯಾನವನ್ನು ಮಾಡಿದರು. ಈ ಸಂದರ್ಭದಲ್ಲಿ ಈ ಸಂಸ್ಥೆಯ ಸಹಾಯಕ ಅಧೀಕ್ಷಕರಾದ ಬಿ ಸುರೇಶ್, ಚನ್ನಪ್ಪ ಯಟಗಲ್ ಹಾಗೂ ಜೈಲರ್‌ಗಳಾದ ಸುನಂದಾ ವಿ. ಶ್ರೀಮಂತಗೌಡ ಪಾಟೀಲ್, ಪುಂಡಲೀಕ ಟಿ.ಕೆ. ಶ್ಯಾಮ್ ಬಿದರಿ ಹಾಗೂ ಸಂಸ್ಥೆಯ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಈ ಸಂಸ್ಥೆಯ ಶಿಕ್ಷಕರಾದ ನಾಗರಾಜ ಮುಲಗೆ ಕಾರ್ಯಕ್ರಮ ನಿರೂಪಿಸಿದರು.

# ಶಿಕ್ಷಕರನ್ನು ನೇಮಿಸಿಕೊಳ್ಳಲು ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಚಿತ್ತಾಪೂರ ತಾಲೂಕಿನ ಗುಂಡಗುರ್ತಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ (ಎಸ್.ಸಿ-476) ಯಲ್ಲಿ ಒಬವ್ವ ಆತ್ಮ ರಕ್ಷಣಾ ಕಲೆಯ ಯೋಜನೆಯಡಿ 6ನೇ, 7ನೇ, 8ನೇ ಹಾಗೂ 9ನೇ ತರಗತಿ ವಿದ್ಯಾರ್ಥಿನಿಯರಿಗೆ ಕರಾಟೆ ತರಬೇತಿ ನೀಡಲು ಅನುಭವ ಹೊಂದಿರುವ ಕರಾಟೆ ಬ್ಲಾಕ್‌ಬೆಲ್ಟ್ ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತಿಯುಳ್ಳ ತರಬೇತಿದಾರರು 2025ರ ಡಿಸೆಂಬರ್ 27 ರೊಳಗಾಗಿ ಗುಂಡಗುರ್ತಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬೇಕು. ಮಹಿಳಾ ತರಬೇತುದಾರರಿಗೆ ಮೊದಲ ಆದ್ಯತೆ ನೀಡಲಾಗುವುದು. ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9986969088, 9148016997 ಗಳಿಗೆ ಸಂಪರ್ಕಿಸಬೇಕೆಂದು ಗುಂಡಗುರ್ತಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಪ್ರಾಚಾರ್ಯರು ತಿಳಿಸಿದ್ದಾರೆ.

# ಡಿ,29 ರಂದು ಪೂರ್ವಭಾವಿ ಸಭೆ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಮಹಾನಗರಪಾಲಿಕೆಯ 2026-27ನೇ ಸಾಲಿನ ಮುಂಗಡ ಪತ್ರವನ್ನು ತಯಾರಿಸಲು ಪೂರ್ವಭಾವಿಯಾಗಿ ಸಾರ್ವಜನಿಕರಿಂದ ಸಲಹೆ-ಸೂಚನೆ ಪಡೆಯಲು ಇದೇ ಡಿಸೆಂಬರ್ 29ರಂದು ಬೆಳಿಗ್ಗೆ 11 ಗಂಟೆಗೆ ಕಲಬುರಗಿ ನಗರದ ಇಂದಿರಾ ಸ್ಮಾರಕ ಭವನದಲ್ಲಿ ಮುಂಗಡ ಪತ್ರ ಪೂರ್ವಭಾವಿ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಆಯುಕ್ತರು ತಿಳಿಸಿದಾರೆ.

ಮೇಲ್ಕಂಡ ದಿನದಂದು ನಡೆಯುವ ಮುಂಗಡ ಪತ್ರ ಪೂರ್ವಭಾವಿ ಸಭೆಯಲ್ಲಿ ಸಾರ್ವಜನಿಕರು, ನೋಂದಾಯಿತ ಸ್ಥಳೀಯ ಕಲ್ಯಾಣ ಸಂಘ, ವ್ಯಾಪಾರ, ಉದ್ಯಮ ನಡೆಸುವ ಸಂಘ-ಸಂಸ್ಥೆಗಳು, ಎನ್.ಜಿ.ಓ. ಸಂಘಗಳು, ಇತರೆ ಪ್ರಮುಖ ನಾಗರಿಕ ಪಾಲ್ಗೊಂಡು ತಮ್ಮ ಸಲಹೆ-ಸೂಚನೆ ನೀಡಬಹುದಾಗಿದೆ.

# ಪುಸ್ತಕಗಳು ನಮ್ಮ ಮನೆಗೊಂದು ಗ್ರಂಥಾಲಯವಾಗಬೇಕು



• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಪುಸ್ತಕಗಳು ನಮ್ಮ ಮನೆಗೊಂದು ಗ್ರಂಥಾಲಯವಾಗಬೇಕು. ನಾವು ಮನೆಕಟ್ಟುವಾಗುವ ವಾಸಿಸುವಾಗ ಅಲ್ಲೊಂದು ಪೂಜಾ ಮನೆಯಿರಬೇಕು ಮಲಗುವ ಕೊರುವ ನಿಲ್ಲುವ ಜಾಗಗಳಿರಬೇಕು ಪುಸ್ತಕಗಳನ್ನು ಇಡಬೇಕು ನಾವು ಪ್ರೀತಿಯಿಂದ ಓದಬೇಕು ಎಂದು ಬೆಂಗಳೂರು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಮಾನಸ ಮೈಸೂರು ಅವರು ಹೇಳಿದರು.

ಮಂಗಳವಾರದಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಕರ್ನಾಟಕ ರಂಗಾಯಣ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಯೋಜನೆ ಮನಗೊಂದು ಗ್ರಂಥಾಲಯ ಕರಪತ್ರ ಸದಸ್ಯರು ಹಾಗೂ ರಂಗಾಯಣ ಕಲಾವಿದರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಡೊಳ್ಳು ಬಾರಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಹಿಂದಿನ ಕಾಲದಲ್ಲಿ ನಮಗೆ ಓದಲು ಪುಸ್ತಕಗಳು ಸಿಗುತ್ತಿರಲಿಲ್ಲ ನಾವು ಕೆಲವೊಂದು ಸಲ ಬೇರೆ ವಸ್ತುಗಳಿಗೆ ಬಳಸಿ ಅವುಗಳನ್ನೆ ಒರಿಸಿ ಮತ್ತು ಶುಚಿಮಾಡಿಕೊಂಡು ಓದುತ್ತಿದ್ದೇವು ಈಗ ಎಲ್ಲ ರೀತಿಯ ಸೌವಲತ್ತುಗಳು ಇದ್ದರು ಮಕ್ಕಳು ಪುಸ್ತಕದಿಂದ ದೂರ ಉಳಿದು ಮೋಬೈಲ್‌ಗಳನ್ನು ಬಳಕೆಮಾಡುವುದು ಜಾಸ್ತಿಯಾಗುತ್ತಿದೆ ಎಂದು ವಿಷಾಧ ವ್ಯಕ್ತಪಡಿಸಿದರು.

ಇಂದಿನ ಯುವಕರು, ಜನರು ಪುಸ್ತಕಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಮೊಬೈಲ್ ಬಳಕೆ ಮಾಡುವುದು ಕಡಿಮೆಮಾಡಬೇಕು ಪುಸ್ತಕಗಳನ್ನು ಓದುವ ಹಾವ್ಯಸಗಳನ್ನು ರೂಡಿಮಾಡಿಕೊಳ್ಳಬೇಕು. ಪುಸ್ತಕ ಪ್ರಾಧಿಕಾರ ಮಹತ್ವಾಕಾಂಕ್ಷೆ ಯೋಜನೆ ಮನೆಗೊಂದು ಗ್ರಂಥಾಲಯ ಇದು ಕನಿಷ್ಟ ಒಂದು ಲಕ್ಷ ಮನೆಗಳಲ್ಲಿ ಅಸ್ತಿತ್ವಕ್ಕೆ ಬರುವ ಯೋಜನೆ, ಒಂದು ಲಕ್ಷ ಗ್ರಂಥಾಲಯಗಳಲ್ಲಿ ಕನಿಷ್ಠ 500 ಪುಸ್ತಕಗಳ ಖರೀದಿಯಾದರೂ ಒಟ್ಟು 5 ಕೋಟಿ ಪುಸ್ತಕಗಳು ಬೇಕು ಅವುಗಳನ್ನು ರಾಜ್ಯದ ಯಾವುದಾದರೂ ಮಳಿಗೆಗಳಲ್ಲೆ ಖರೀದಿಸಬೇಕು' ಆದರಿಂದಾಗಿ ಪುಸ್ತಕ ಅಂಗಡಿಯವರಗೆ ವ್ಯಾಪರ, ಪುಸ್ತಕ ಪ್ರಕಾಶಕರಿಗೆ ವ್ಯವಹಾರ ಸಾಹಿತಿಗಳಿಗೆ ಗೌರವ ಸಂಭಾವನೆ, ಆ ನಂತರ ಮುದ್ರಣಾಲಯಗಳಿಗೆ ಡಿ.ಟಿ.ಪಿ.ಯವರಿಗೆ ಬೈಂಡಿಂಗ್,ನವರಿಗೆ ಕಾಗದ ಮಾರಾಟದವರಿಗೆ ಮುದ್ರಣಗೊಳ್ಳುವ ಪುಸ್ತಕಗಳು ಸಂಖ್ಯೆಯ ಸಾವಿರಗಟ್ಟಲೆ ಏರುತ್ತದೆ ನಮ್ಮ ಯೋಜನೆ ಕನ್ನಡ ಪುಸ್ತಕಗಳಿಷ್ಟೇ ಸೀಮಿತಗೊಳ್ಳದೆ ಕನ್ನಡ ದಿನಪತ್ರಿಕೆ ವಾರಪತ್ರಿಕೆ ಪಣತೊಟ್ಟಿದೆ ಎಂದು ಅವರು ಹೇಳಿದರು.

ಮನೆಯಲ್ಲಿ ಸ್ಥಾಪನೆಯಾದ ಗ್ರಂಥಾಲಯಗಳ ಬೆಳವಣಿಗೆ ಹಾಗೂ ಅದರ ವಾರಸುದಾರರನ್ನು ಗೌರವಿಸುವ ಉತ್ತೇಜಿಸುವ ಸಲುವಾಗಿ ಪ್ರಾಧಿಕಾರ ರಾಜ್ಯದ ನಾಲ್ಕು ಕಂದಾಯ ವಿಭಾಗಗಳಿಗೆ 4 ಜನ ವಿದ್ವಾಂಸರುಗಳು ಹೆಸರಿನಲ್ಲಿ 4 ಪ್ರಶಸ್ತಿಗಳನ್ನು ಸ್ಥಾಪಿಸಲು ಉದ್ದೇಸಿದೆ ಎಂದರು ಪುಸ್ತಕಗಳನ್ನು ಸಮಗ್ರ ಮಾಹಿತಿಯನ್ನು ಇದೇ ಸಂದರ್ಭದಲ್ಲಿ ಪ್ರಸ್ತಾಪಿಸಿದರು.

ಡಾ.ಎಂ.ಬಿ. ಕಟ್ಟಿ, ಡಾ. ಮಹೇಶ ಕುಮಾರ್ ಗಂವ್ಹಾರ್, ಡಾ. ಪರ್ವೀನಾ ಸುಲ್ತಾನಾ ಎಂ.ಬಿ.ಕಟ್ಟಿ,ಡಾ. ಮಹೇಶ ಕುಮಾರ, ಗಂವ್ಹಾರ್, ಸೇರಿದಂತೆ ಹತ್ತು ಜನರಿಗೆ ಸನ್ಮಾಸಿದರು,

ರಂಗಾಯಣ ನಿರ್ದೇಶಕ ಡಾ. ಸುಜಾತಾ ಜಂಗಮಶೆಟ್ಟಿ, ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರು ಹಫೂ ಸಂಚಾಲಕರು ಬಿ.ಎಚ್. ನಿರಗುಡಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯರಾದ ಡಾ. ಚಂದ್ರಕಲಾ ಬಿದರಿ, ಪುಸ್ತಕ ಆಡಳಿತಾಧಿಕಾರಿ ಕೆ.ಬಿ. ಕಿರಣಸಿಂಗ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪನಿರ್ದೇಶಕ ಜಗದೀಶ್ವರಿ ಅ. ನಾಶಿ, ಸೇರಿದಂತೆ ಜಿಲ್ಲಾ ಜಾಗೃತಿ ಸಮಿತಿ ಸದಸ್ಯರು ಹಿರಿಯ ಕಲಾವಿದರು. ಸಾಹಿತ್ಯಗಳು ಇದ್ದರು.

# ಕನ್ನಡ ಭಾಷೆ ಕನ್ನಡಿಗರಿಗೆ ಜೀವದ್ರವ್ಯ: ಎಸ್. ಉಡಿಕೇರಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದ ಮುದ್ರಣ ಕ್ಷೇತ್ರದಲ್ಲಿ ಬಹುದೊಡ್ಡ ಕ್ರಾಂತಿ ಸಾಧ್ಯವಾಗಿದೆ. ಇದರಿಂದ ಪುಸ್ತಕಗಳ ಆವೃತ್ತಿ, ಮರು ಮುದ್ರಣ, ಗ್ರಂಥಗಳ ಪುಟ ವಿನ್ಯಾಸ ಮತ್ತು ಆಕರ್ಷಕ ವ್ಯಂಗ್ಯ ಚಿತ್ರಗಳ ಬಳಕೆ ಸಾಧ್ಯವಾಗಿದೆ. ಆದರೆ, ಕನ್ನಡ ಭಾಷೆ ಮತ್ತು ಸಾಹಿತ್ಯ ಉಳಿಯಬೇಕಾದರೆ ಕನ್ನಡ ಪುಸ್ತಕಗಳನ್ನು ಹೆಚ್ಚು ಹೆಚ್ಚಾಗಿ ಓದುವ ಹವ್ಯಾಸ ಬೆಳೆಯಬೇಕು ಜೊತೆಗೆ ಕನ್ನಡ ಓದಲು ಪ್ರೋತ್ಸಾಹಿಸಬೇಕಿದೆ ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶಶಿಕಾಂತ ಎಸ್. ಉಡಿಕೇರಿ ಅಭಿಪ್ರಾಯಪಟ್ಟರು. ಗುಲಬರ್ಗಾ ವಿಶ್ವವಿದ್ಯಾಲಯದ ಮಹಾತ್ಮ ಗಾಂಧಿ ಸಭಾಂಗಣದಲ್ಲಿ ಮಂಗಳವಾರ ಕನ್ನಡ ಸಂಸ್ಕೃತಿ ಇಲಾಖೆಯ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ಇವುಗಳ ಸಂಯುಕ್ತಾಶ್ರಯದಲ್ಲಿ ಹಿರಿಯ ಸಾಹಿತಿಗಳಾದ ಚನ್ನವೀರ ಕಣವಿ ಹಾಗೂ ಪ್ರೊ. ಚಂದ್ರಶೇಖರ ಪಾಟೀಲ ಸಂಗ್ರ ಸಂಪುಟಗಳ ಲೋಕಾರ್ಪಣೆ ಹಾಗೂ ಉಚಿತ ಪುಸ್ತಕಗಳ ವಿತರಣಾ ಸಮಾರಂಭ ಮತ್ತು ಮನೆಗೊಂದು ಗ್ರಂಥಾಲಯ ಕಲಬುರಗಿ ಜಿಲ್ಲಾ ಜಾಗೃತ ಸಮಿತಿ ಸದಸ್ಯರಿಗೆ ಅರ್ಹತಾ ಪ್ರಮಾಣ ಪತ್ರ ವಿತರಣೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ನಾಡಿನ ಸಾಕ್ಷಿಪ್ರಜ್ಞೆಯ ಹಿರಿಯ ಸಾಹಿತಿಗಳಾದ ಚನ್ನವೀರ ಕಣವಿ ಮತ್ತು ಚಂಪಾ ಕನ್ನಡ ನಾಡು ಕಂಡ ಮೇರು ಕವಿಗಳಾಗಿದ್ದಾರೆ. ಓದುವ ಪರಿಪಾಟವನ್ನು ವಿದ್ಯಾರ್ಥಿಗಳಲ್ಲಿ ಬೆಳೆಯಬೇಕಿದೆ. ಪುಸ್ತಕ ಮುದ್ರಣ ವೇಗ ಬೆಳೆದಂತೆ ಮರು ಮುದ್ರಣ ಸಾಧ್ಯವಾಗುತ್ತಿದ್ದೆ. ಆಕರ್ಷಕ ಪುಟ ವಿನ್ಯಾಸ, ಛಾಯಾಚಿತ್ರ ಮತ್ತು ವ್ಯಂಗ್ಯ ಚಿತ್ರಗಳ ಬಳಕೆ ಆಗುತ್ತಿದೆ. ಪ್ರಸ್ತುತ ಲೇಖಕರ ಸಾಹಿತ್ಯ ಮತ್ತು ಸಮಕಾಲೀನ ಬರಹಗಾರರ ಕೃತಿಗಳ ಓದುಗರ ಸಂಖ್ಯೆ ಹೆಚ್ಚಾಗಬೇಕಿದೆ. ವಿದ್ಯಾರ್ಥಿಗಳಲ್ಲಿ ಮೊಬೈಲ್ ಬಳಕೆ ಹವ್ಯಾಸ ಕಡಿಮೆಯಾಗಿ ಸಾಹಿತ್ಯ ಅಭಿರುಚಿ ಮತ್ತು ಓದುವ ಆಸಕ್ತಿ ಬೆಳೆಸಿದಾಗ ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳೆಯಲು ಸಾಧ್ಯ ಎಂದ ಅವರು 1995ರಲ್ಲಿ ಧಾರವಾಡದಲ್ಲಿ ಚಂಪಾ ಅವರು ಕನ್ನಡ ಸಂಘ ಉದ್ಘಾಟನೆಗೆ ಆಗಮಿಸಿ ಕನ್ನಡ ಸಾಹಿತ್ಯ ಪರಂಪರೆ ಕುರಿತು ಮಾತುಗಳನ್ನು ಸ್ಮರಿಸಿಕೊಂಡರು.

# ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವರ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ರಾಜ್ಯದ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರಾದ ಡಾ. ಶರಣಪ್ರಕಾಶ ಆರ್. ಪಾಟೀಲ್ ಅವರು ಬೀದರದಿಂದ ರಸ್ತೆ ಮೂಲಕ ಡಿಸೆಂಬರ್ 25 ರಂದು ಗುರುವಾರ ಬೆಳಿಗ್ಗೆ 10 ಗಂಟೆಗೆ ಕಲಬುರಗಿಗೆ ಆಗಮಿಸುವರು. ನಂತರ ಕಲಬುರಗಿಯಲ್ಲಿ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸಿ ವಾಸ್ತವ್ಯ ಮಾಡುವರು. ಡಿಸೆಂಬರ್ 26 ರಂದು ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ಕಲಬುರಗಿಯಿಂದ ರಸ್ತೆ ಮೂಲಕ ಬೀದರಿಗೆ ಪ್ರಯಾಣಿಸುವರು. ಬೆಳಿಗ್ಗೆ 8 ಗಂಟೆಗೆ ಬೀದರ್‌ದಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

# ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಪ್ರಸಕ್ತ 2025-26ನೇ ಸಾಲಿಗಾಗಿ ಪ್ರಧಾನಮಂತ್ರಿ ಶಿಷ್ಯವೇತನ ಯೋಜನೆಯಡಿ ಶಿಷವೇತನಕ್ಕಾಗಿ ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.ಭಾರತೀಯ ಸೇನೆಯ ಜೆ.ಸಿ.ಓ. ರ್‍ಯಾಂಕ್‌ವರೆಗಿನ ಅಥವಾ ವಾಯು ಸೇನೆ, ನೌಕಾ ಸೇನೆಯ ತತ್ಸಮಾನ ರ್‍ಯಾಂಕ್‌ವರೆಗಿನ ಮಾಜಿ ಸೈನಿಕರ ಮಕ್ಕಳು, ದ್ವಿತೀಯ ಪಿ.ಯು.ಸಿ. ಯಲ್ಲಿ ಶೇ. 60 ಕ್ಕಿಂತ ಅಧಿಕ ಅಂಕಗಳನ್ನು ಪಡೆದು ವೃತ್ತಿಪರ ಶಿಕ್ಷಣದಲ್ಲಿ ಪದವಿ ವ್ಯಾಸಂಗಕ್ಕಾಗಿ 2025-26ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಮಾಜಿ ಸೈನಿಕರ ಮಕ್ಕಳಿಂದ ಅರ್ಜಿ ಸಲ್ಲಿಸಬಹುದಾಗಿದೆ.

ಅರ್ಜಿ ಸಲ್ಲಿಸಲು 2025ರ ಡಿಸೆಂಬರ್ 31 ರಂದು ಕೊನೆಯ ದಿನವಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೇಂದ್ರೀಯ ಸೈನಿಕ ಮಂಡಳಿಯ https://www.ksb.gov.in ವೆಬ್‌ಸೈಟ್‌ನ್ನು ಅಥವಾ ಕಲಬುರಗಿ ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆಯ ಕಚೇರಿಯನ್ನು ಹಾಗೂ ಕಚೇರಿ ದೂರವಾಣಿ ಸಂಖ್ಯೆ 08472-225003 ಗೆ ಕಚೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

# ಡಿ,26 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-2ರಲ್ಲಿ ಬರುವ 110/33/11ಕೆ.ವ್ಹಿ. ಚಿತ್ತಾಪೂರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮೆಂಟೆನೆನ್ಸ್ ಕಾರ್ಯಕೈಗೊಳ್ಳುವ ಪ್ರಯುಕ್ತ ಇದೇ ಡಿಸೆಂಬರ್ 26 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಚಿತ್ತಾಪೂರ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ಸಾರ್ವಜನಿಕರು ಜೆಸ್ಕಾಂನೊಂದಿಗೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-2ರ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ಕೋರಿದ್ದಾರೆ.

# ಡಿ, 27 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-2ರ ವ್ಯಾಪ್ತಿಯಲ್ಲಿ ಬರುವ 33/11ಕೆ.ವ್ಹಿ ರಟಕಲ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮೆಂಟೇನನ್ಸ್ ಕಾಮಗಾರಿ ಕೈಗೊಳ್ಳಲಾಗುತ್ತಿರುವ ಪ್ರಯುಕ್ತ ಇದೇ ಡಿಸೆಂಬರ್ 27ರಂದು ಮಧ್ಯಾಹ್ನ 1 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗ-2ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

ಕಾಳಗಿ ಉಪವಿಭಾಗ ರಟಕಲ್ ವಿದ್ಯುತ್ ವಿತರಣಾ ಕೇಂದ್ರ: ಕಾಳಗಿ ತಾಲೂಕಿನ ರಟಕಲ್, ಹೇರೂರ್ ಮುಕರಂಬ, ಕೋಡ್ಲಿ, ರುಮ್ಮನಗೂಡ, ಐನಾಪೂರ, ಗಡಿನಿಂಗದಹಳ್ಳಿ ಗ್ರಾಮ ಪಂಚಾಯಿತಿಯ ವ್ಯಾಪ್ತಿಯ ಎಲ್ಲಾ ಗ್ರಾಮಗಳು.

# ಆಕ್ಷೇಪಣೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ಕಲಬುರಗಿ ಮಹಾನಗರ ಪಾಲಿಕೆಯಿಂದ 2025-26 ನೇ ಸಾಲಿಗಾಗಿ ಎಸ್.ಎಫ್.ಸಿ (ಮುಕ್ತನಿಧಿ) ಕ್ರಿಯಾ ಯೋಜನೆಯಡಿ ಪರಿಶಿಷ್ಟ ಪಂಗಡದ ಜನರಿಗೆ ಸಣ್ಣ ಉದ್ದಿಮೆ ಸ್ಥಾಪಿಸಲು ಬ್ಯಾಂಕ್ ಮೂಲಕ ಸಹಾಯಧನ ನೀಡಲು ಅರ್ಜಿ ಆಹ್ವಾನಿಸಿ, ಅರ್ಹ ಹಾಗೂ ಅನರ್ಹ ಫಲಾನುಭವಿಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಕಲಬುರಗಿ ಮಹಾನಗರಪಾಲಿಕೆಯ ನೋಟೀಸ್ ಬೋರ್ಡ್‌ನಲ್ಲಿ ಈಗಾಗಲೇ ಪ್ರಕಟಿಸಲಾಗಿದೆ.

ಈ ತಾತ್ಕಾಲಿಕ ಅರ್ಹ ಹಾಗೂ ಅನರ್ಹ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಇದ್ದಲ್ಲಿ 2025ರ ಡಿಸೆಂಬರ್ 31 ರೊಳಗಾಗಿ ಪೂರಕ ದಾಖಲೆಗಳೊಂದಿಗೆ ಕಲಬುರಗಿ ಮಹಾನಗರ ಪಾಲಿಕೆ ಕಚೇರಿಯಲ್ಲಿ ಆಕ್ಷೇಪಣೆ ಸಲ್ಲಿಸಬೇಕು. ಕೊನೆಯ ದಿನಾಂಕದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಕಲಬುರಗಿ ಮಹಾನಗರ ಪಾಲಿಕೆಯ ಶೇ. 24.10ರ ಕಚೇರಿ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾಸಿಕ ವ್ಯಾಸಂಗ ವೇತನ ಫೆಲೋಶಿಪ್‌ಗಾಗಿ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

2025-26ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಎಚ್.ಡಿ ಅಧ್ಯಯನ ಪ್ರಾರಂಭಿಸಿರುವ (ದಿನಾಂಕ:10-02-2025 ಮತ್ತು ಅದರ ನಂತರ ಪ್ರಥಮ ವರ್ಷದ ಪಿಎಚ್.ಡಿ. ಪ್ರಾರಂಭಿಸಿರಬೇಕು) ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಹಾಗೂ 3(ಬಿ) ಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ಮಾಸಿಕ ವ್ಯಾಸಂಗ ವೇತನ ಫೆಲೋಶಿಪ್‌ಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಎಂದು ಕಲಬುರಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಕರ್ನಾಟಕದ ಶಾಸನಬದ್ದ ವಿಶ್ವವಿದ್ಯಾಲಯಗಳಲ್ಲಿ/ ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪ್ರಥಮ ವರ್ಷದ ಪಿಎಚ್.ಡಿ ಅಧ್ಯಯನ ಮಾಡುತ್ತಿರುವ ಹೊಸ ಅಭ್ಯರ್ಥಿಗಳು ಮಾತ್ರ ಆಫ್‌ಲೈನ್ ಮೂಲಕ 2026ರ ಜನವರಿ 9 ರಂದು ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ https://bcwd.karnataka.gov.in ವೆಬ್‌ಸೈಟ್‌ದಿಂದ ಹಾಗೂ ಮೊಬೈಲ್ ಸಂಖ್ಯೆ 8050770004 (ಕಚೇರಿ ಸಮಯದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5.30 ಗಂಟೆಯವರೆಗೆ) ಸಂಪರ್ಕಿಸಲು ಕೋರಲಾಗಿದೆ.

# ವಿವಿಧ ಪಿಜಿ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆರಾಯಚೂರು:**

ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ದಿಂದ ಕಳೆದ ವರ್ಷದಂತೆ ಈ ವರ್ಷವೂ ಪಿಜಿ ಕೋರ್ಸ್‌ಗಳಿಗೆ ಅಗಇಖಿಮೂಲಕಅರ್ಹಅಭ್ಯರ್ಥಿಗಳಿಗೆ ಪ್ರವೇಶ ನೀಡಲಾಗುವುದೆಂದು ಪ್ರಾಧ್ಯಾಪಕರಾದ ಡಾ.ಬಸವರಾಜ ಸೋಮನಮರಡಿ ಮಾಹಿತಿ ನೀಡಿದರು.ನಗರದಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ

ಪ್ರಸ್ತುತ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಈ ಸ್ನಾತ-ಕೋತ್ತರ ಕೋರ್ಸ್‌ಗಳಿಗಾಗಿ (ಬಿಎಡ್ ಕೋರ್ಸ್ ಒಳಗೊಂಡಂತೆ) ಪ್ರವೇಶ ನೀಡುತ್ತಿದೆ.ಎಂ.ಎ.ಇಂಗ್ಲಿಷ್, ಹಿಂದಿ, ಕನ್ನಡ ಭಾಷಾಶಾಸ್ತ್ರ, ಬುಡಕಟ್ಟುಅಧ್ಯಯನ,ಅರ್ಥಶಾಸ್ತ್ರ, ಇತಿಹಾಸ,ಸಾರ್ವಜನಿಕ ಆಡಳಿತ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನೆ,ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ 30 ಸೀಟ್,ಎಂ.ಎಸ್ಸಿ. ಗಣಿತ, ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗೋಳ, ಭೂವಿಜ್ಞಾನ. ಸಸ್ಯಶಾಸ್ತ್ರ,ಪ್ರಾಣಿಶಾಸ್ತ್ರ ಮತ್ತು ಅಂಕಿಅಂಶಗಳು ಮತ್ತು ದತ್ತಾಂಶ ವಿಶ್ಲೇಷಣೆ 30 ಸೀಟ್, ಎಂ.ಎಸ್ಸಿ ಮನೋವಿಜ್ಞಾನ 40 ಸೀಟ್,ಜೆನೆಟಿಕ್ಸ್ ಮತ್ತು ಜೀನೋಮಿಕ್ 20 ಸೀಟ್, ಎಂ.ಕಾಂ (ಬ್ಯಾಂಕಿಂಗ್ ಮತ್ತು ಹಣಕಾಸು ತಂತ್ರಜ್ಞಾನ)

30 ಸೀಟ್,ಎಂ.ಕಾಂ.30 ಸೀಟ್, ಎಂ.ಬಿ.ಎ.,60 ಸೀಟ್ ಎಂ.ಬಿ.ಎ ಪ್ರವಾಸೋದ್ಯಮ ಮತ್ತು ಪ್ರಯಾಣ ನಿರ್ವಹಣೆಯಲ್ಲಿ 30 ಸೀಟ್,ಸಾಮಾಜ ಕಾರ್ಯ 30 ಸೀಟ್,ಎಂಸಿಎ 60 ಸೀಟ್,ಎಲ್.ಎಲ್.ಎಂ 30 ಸೀಟ್ ಸೇರಿದಂತೆ ಅನೇಕ ಹೊಸ ಕೋರ್ಸಗಳನ್ನು ಆರಂಭಿಸಲಾಗಿದೆ ಎಂದರು.ಪ್ರತಿ ಸ್ನಾತಕೋತ್ತರಕೋರ್ಸಗಳಿಗೆಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳಿಗೆ ಶೇ.3ರಷ್ಟು

ಮೀಸಲಾತಿಇದೆ.ಆದರೆಈಶೇ.3ರಷ್ಟು ಮೀಸಲಾತಿಗೆಕ.ಕ.ವಿದ್ಯಾರ್ಥಿಗಳು ಭರ್ತಿಯಾಗುತ್ತಿಲ್ಲವೆಂದು ಕಳವಳ ವ್ಯಕ್ತಪಡಿಸಿದರು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಡಿಸೆಂಬರ 14, 2005ರಿಂದಪ್ರಾರಂಭವಾಗಿದೆಕ್ಯಾಷ್ (ಗಉ) ಅಂತಿಮ ಸೆಮೆಸ್ಟರನಲ್ಲಿ ಓದುತ್ತಿರುವ ಮತ್ತು ಈಗಾಗಲೇ ಉತ್ತೀರ್ಣರಾಗಿರುವ ಅಸಕ್ತ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಅರ್ಜಿಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸಬಹುದಾಗಿದೆ.https:exams.nta.nic.in/cuct-pgoв14 ನೇ ಜನವರಿ 2026 (ರಾತ್ರಿ 11.50 ಗಂಟೆಯವರೆಗೆ) ಆಗಿರುತ್ತದೆ ಎಂದರು.

ಸಂಪೂರ್ಣ ಪ್ರವೇಶ ಪ್ರಕ್ರಿಯೆಯು ಆನ್‌ಲೈನ್ ಮೂಲಕ ನಡೆಯುತ್ತದೆ. ಆದ್ದರಿಂದ ಅಭ್ಯರ್ಥಿಗಳು ಭವಿಷ್ಯದ ಸಂವಹನಕ್ಕಾಗಿ ಅರ್ಜಿಯಲ್ಲಿ ಸರಿಯಾದ ಇಮೇಲ್ ಮತ್ತು ಫೋನ್ ಸಂಖ್ಯೆಯನ್ನು ನಮೂದಿಸಬೇಕು.ಎಂಟೆಕ್ 50% ರಷ್ಟು ಸೀಟುಗಳನ್ನು ಅಗಇಖಿ ಮೂಲಕ ಮತ್ತು 50% ರಷ್ಟು ಸೀಟುಗಳನ್ನು ಗೇಟ್ (ಉಂಖಿಇ) ಮೂಲಕ ಭರ್ತಿ ಮಾಡಲಾಗುತ್ತದೆ ಎಂದರು.

# ಬಸ್‌ಪಾಸ್ ಫೆ,28 ರವರೆಗೆ ಅನುಮತಿ

• **ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:**

ವಿಕಲಚೇತನ ಫಲಾನುಭವಿಗಳು ರಿಯಾಯಿತಿ ಬಸ್‌ಪಾಸ್‌ಗಳನ್ನು ನವೀಕರಿಸಿಕೊಳ್ಳಲು ಸಾಕಷ್ಟು ಕಾಲಾವಕಾಶ ನೀಡುವ ಉದ್ದೇಶದಿಂದ 2025ನೇ ಸಾಲಿನಲ್ಲಿ ವಿತರಿಸಲಾಗಿರುವ ವಿಕಲಚೇತನರ ಪಾಸ್‌ಗಳನ್ನು 2026ರ ಫೆಬ್ರವರಿ 28 ರವರೆಗೆ ಮಾನ್ಯ ಮಾಡಲಾಗಿದೆ ಎಂದು ಕಲಬುರಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-2ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

2025ನೇ ಸಾಲಿನಲ್ಲಿ ವಿತರಿಸಲಾಗಿರುವ ವಿಕಲಚೇತನರ ರಿಯಾಯಿತಿ ಬಸ್‌ಪಾಸ್‌ಗಳು 2025ರ ಡಿಸೆಂಬರ್ 31ರವರೆಗೆ ಮಾತ್ರ ಚಾಲ್ತಿಯಲ್ಲಿರುತ್ತದೆ. ಅರ್ಹ ಫಲಾನುಭವಿಗಳು ಸೇವಾ ಸಿಂಧುವಿನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ, 660 ರೂ. ಗಳನ್ನು ನಗದು ರೂಪದಲ್ಲಿ ಪಾವತಿಸಿ 2026ರ ಫೆಬ್ರವರಿ 28 ರೊಳಗಾಗಿ ನವೀಕರಿಸಿಕೊಳ್ಳಬೇಕು. ಅದರಂತೆ 2026ನೇ ವರ್ಷದ ಹೊಸ ಬಸ್‌ಪಾಸ್‌ಗಳನ್ನು 2026ರ ಜನವರಿ 1 ರಿಂದ ಡಿಸೆಂಬರ್ 31 ರವರೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-2ರ ವಿಭಾಗೀಯ ಕಚೇರಿಯಲ್ಲಿ ವಿತರಿಸಲಾಗುತ್ತದೆ.

ಹಳೆಯ ಪಾಸುಗಳನ್ನು ಕಲಬುರಗಿ ವಿಭಾಗ-2ರ ವ್ಯಾಪ್ತಿಯಲ್ಲಿ ಬರುವ ತಾಲೂಕುಗಳಾದ ಕಲಬುರಗಿ, ಆಳಂದ, ಜೇವರ್ಗಿ ಹಾಗೂ ಅಫಜಲಪೂರ ಬಸ್ ನಿಲ್ದಾಣಗಳಲ್ಲಿ ನವೀಕರಿಸಲಾಗುತ್ತದೆ. 2026ರ ಫೆಬ್ರವರಿ 28 ರ ನಂತರ ಅಂಗವಿಕಲ/ ವಿಕಲಚೇತನರ ರಿಯಾಯಿತಿ ದರದ ಬಸ್‌ಪಾಸ್‌ಗಳನ್ನು ನವೀಕರಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

# ಪುರಸಭೆ ಕೆಂಭಾವಿ, ಕಕ್ಕೇರಾ, ಪಟ್ಟಣ ಪಂಚಾಯತ ಹುಣಸಗಿ, ಜಿಲ್ಲಾ ಯೋಜನಾ ಸಮಿತಿಯ ಸದಸ್ಯರು, ಅಧ್ಯಕ್ಷರ ಚುನಾವಣೆ ಪಟ್ಟಿ ಪ್ರಕಟ

ಯಾದಗಿರಿ : ಡಿಸೆಂಬರ್ 24, (ಕ.ವಾ) ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿಯ ಸದಸ್ಯರುಗಳ ಮತ್ತು ಅಧ್ಯಕ್ಷರ ಚುನಾವಣೆ) (ತಿದ್ದುಪಡಿ) ನಿಯಮಗಳು, 1998ರ 2016 ನವೆಂಬರ್ 30 ಅಧಿನಿಯಮ ಸಂಖ್ಯೆಗ್ರಾಅಪ/198/ಜಿಪಸ/216ರ ಅನ್ವಯ ತಿದ್ದುಪಡಿ ಮಾಡಲಾಗಿದೆ ಸರ್ಕಾರದ ಆದೇಶ ಸಂ.ಗ್ರಾಅಪಂ/148/ಜಿಪಸ/2021 ದಿನಾಂಕ 15-12-202 ಚುನಾವಣೆಯ ನೋಟಿಸ್ ನಿಯಮ 8 ರಡಿ ಪ್ರಕಟಿಸಿದೆ ಎಂದು ಯಾದಗಿರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಲವೀಶ್ ಒರಡಿಯಾ ಅವರು ತಿಳಿಸಿದ್ದಾರೆ. ಪಂಚಾಯತ ಮತಕ್ಷೇತ್ರ, ಪುರಸಭೆ ಕೆಂಭಾವಿ, ಕಕ್ಕೇರಾ, ಪಟ್ಟಣ ಪಂಚಾಯತ ಹುಣಸಗಿ, ಪುರಸಭೆ ಮತಕ್ಷೇತ್ರ, ಪಂಚಾಯತ್ ಮತಕ್ಷೇತ್ರ ಮತ್ತು ಪುರಸಭೆ ಮತಕ್ಷೇತ್ರಗಳಲ್ಲಿ ಚುನಾಯಿಸಬೇಕಾದ ವ್ಯಕ್ತಿಗಳ ಸಂಖ್ಯೆ 4 ಇದೆ. ಯಾದಗಿರಿ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿ ಸಭಾಂಗಣದಲ್ಲಿ 2025ರ ಡಿಸೆಂಬರ್ 29 ರಿಂದ 2026ರ ಜನವರಿ 8ರ ವರೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆಯ ಒಳಗೆ ಸಲ್ಲಿಸಬೇಕು.

2026ರ ಜನವರಿ 9 ರಂದು ನಾಮಪತ್ರಗಳ ಪರಿಶೀಲನೆಯ ನಡೆಯಲಿದೆ. 2026ರ ಜನವರಿ 12 ರಂದು ನಾಮಪತ್ರಗಳನ್ನು ಹಿಂದಕ್ಕೆ ಪಡೆಯಲಿದೆ. 2026ರ ಜನವರಿ 19 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯ ವರೆಗೆ ಮತದಾನವು ಅಗತ್ಯವಾದಲ್ಲಿ ಅದನ್ನು ನಡೆಸುವ ದಿನಾಂಕ ಮತ್ತು ಯಾವ ಸಮಯಗಳ ನಡುವೆ ಎಂಬುದನ್ನು ತಿಳಿಸಬೇಕು, ಈ ದಿನವು ನೋಟೀಸ್ ಪ್ರಕಟಿಸಿದ ದಿನಾಂಕದಿಂದ ಐದು ದಿವಸಗಳಿಗಿಂತ ಕಡಿಮೆ ಇರಬೇಕು. 2026ರ ಜನವರಿ 19 ರಂದು ಯಾದಗಿರಿ ಜಿಲ್ಲಾ ಪಂಚಾಯತ್ ಸ್ಥಾಯಿ ಸಮಿತಿ ಸಭಾಂಗಣದಲ್ಲಿ ಸಂಜೆ 4 ಗಂಟೆಯಿಂದ ಮತಗಳ ಎಣಿಕೆಯ ನಡೆಯಲಿದೆ. 2026ರ ಜನವರಿ 20 ರಂದು ಚುನಾವಣೆ ಪೂರ್ಣಗೊಳ್ಳಲಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 310 (2) (ಇ)ರ ಅನುಸಾರ ಪುರಸಭೆ ಸದಸ್ಯರುಗಳ ಜಿಲ್ಲಾ ಯೋಜನಾ ಸಮಿತಿ ಮತದಾರರ ಯಾದಗಿರಿ, ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಯೋಜನಾ ಸಮಿತಿಯ ಸದಸ್ಯರುಗಳ ಮತ್ತು ಅಧ್ಯಕ್ಷರ ಚುನಾವಣೆ) (ತಿದ್ದುಪಡಿ) ನಿಯಮಗಳು, 1998 ದಿನಾಂಕ 2016 ನವೆಂಬರ್ 30 ಅಧಿನಿಯಮ ಸಂಖ್ಯೆ : ಗ್ರಾಅಪ/198/ಜಿಪಸ/216ರ ಅನ್ವಯ ತಿದ್ದುಪಡಿ ಮಾಡಲಾಗಿದೆ. ನಿಯಮ 5ರಡಿ ಕೆಂಭಾವಿ ಪುರಸಭೆ, ಸದಸ್ಯರು, ಕಕ್ಕೇರಾ ಪುರಸಭೆ ಸದಸ್ಯರು, ಹುಣಸಗಿ ಪಟ್ಟಣ ಪಂಚಾಯತ್ ಸದಸ್ಯರ ವಿವರ ಈ ಕೆಳಕಂಡ ಇದೆ.

ಕೆಂಭಾವಿ ಪುರಸಭೆ ಸದಸ್ಯರ ವಿವರ : ಶ್ರೀಮತಿ ಗಿರಿಜಾ ಗಂಡ ರಮೇಶ ಕೊಡಗಾನೂರ ವಾರ್ಡ್ ಸಂಖ್ಯೆ 1, ಶ್ರೀಮತಿ ಲಕ್ಷ್ಮೀಬಾಯಿ ಗಂಡ ಗುರುಸಂಗಪ್ಪ ಕಂಬಾರ ವಾರ್ಡ್ ಸಂಖ್ಯೆ 2, ಶ್ರೀ ರವಿಶಂಕರ ಎಸ್ ಸೋನ್ನದ ತಂದೆ ಸಿದ್ದಣ್ಣ ಸೋನ್ನದ ವಾರ್ಡ್ ಸಂಖ್ಯೆ 3, ಶ್ರೀ ರಹಿಮಾನ ಪಟೇಲ ತಂದೆ ಇಮಾಮ್ ಪಟೇಲ ಯಲಗೋಡ ವಾರ್ಡ್ ಸಂಖ್ಯೆ 4, ಶ್ರೀಮತಿ ರಮ್ಯಾ ಗಂಡ ರಾಘವೇಂದ್ರರಾವ್ ದೇಶಪಾಂಡೆ ವಾರ್ಡ್ ಸಂಖ್ಯೆ 5, ಶ್ರೀ ಸುಧಾಕರ ತಂದೆ ಮಲ್ಲಣ್ಣ ದಿಗ್ಗಾವಿ ವಾರ್ಡ್ ಸಂಖ್ಯೆ 6, ಶ್ರೀಮತಿ ಸಾಧಿಯಾ ಬೇಗಂ ಗಂಡ ಅನ್ವರ ಪಾಶಾ ನಾಶಿ ವಾರ್ಡ್ ಸಂಖ್ಯೆ 7, ಶ್ರೀಮತಿ ಬೇಗಂಬಿ ಗಂಡ ಮಮ್ಮದ ಆದಂ ನಾಶಿ ವಾರ್ಡ್ ಸಂಖ್ಯೆ 8, ಶ್ರೀ ಆರಿಫ್ ಹುಸೇನ ತಂದೆ ಖೈರತ್ ಹುಸೇನ ಖಾಜಿ ವಾರ್ಡ್ ಸಂಖ್ಯೆ 9, ಶ್ರೀ ಮಲ್ಲಿನಾಥ ತಂದೆ ರುದ್ರಗೌಡ ಪಾಟೀಲ ವಾರ್ಡ್ ಸಂಖ್ಯೆ 10, ಶ್ರೀಮತಿ ಪ್ರೀಯಾ ಗಂಡ ರಾಮನಗೌಡ ಪೊಲೀಸ್ ಪಾಟೀಲ್ ವಾರ್ಡ್ ಸಂಖ್ಯೆ 11, ಶ್ರೀ ಶರಣಪ್ಪ ತಂದೆ ಶಿವಪ್ಪ ಯಾಳಗಿ ವಾರ್ಡ್ ಸಂಖ್ಯೆ 12, ಶ್ರೀ ರಾಘವೇಂದ್ರ ತಂದೆ ಶಿವಣ್ಣ ಕವಲ್ದಾರ ವಾರ್ಡ್ ಸಂಖ್ಯೆ 13, ಶ್ರೀ ಚಳಿಗೆಪ್ಪ ತಂದೆ ನಾಗಪ್ಪ ವಡ್ಡರ ವಾರ್ಡ್ ಸಂಖ್ಯೆ 14, ಶ್ರೀಮತಿ ಪಾರ್ವತಿ ಭೋವಿ ಗಂಡ ದೇವಪ್ಪ ವಾರ್ಡ್ ಸಂಖ್ಯೆ 15, ಶ್ರೀ ಶೀಧರ (ವಿಲಾಸರಾವ್) ತಂದೆ ಮುರಳೀಧರ್ ದೇಶಪಾಂಡೆ ವಾರ್ಡ್ ಸಂಖ್ಯೆ 16, ಶ್ರೀಮತಿ ಶಾರದಾ ಗಂಡ ಭೀಮನಗೌಡ ವಾರ್ಡ್ ಸಂಖ್ಯೆ 17, ಶ್ರೀ ರಾಜು ಬಾಂಬೆ ತಂದೆ ಮಲ್ಲಪ್ಪ ವಡ್ಡರ ವಾರ್ಡ್ ಸಂಖ್ಯೆ 18, ಶ್ರೀ ರಾಮಕೃಷ್ಣ ತಂದೆ ಸೂರ್ಯನಾರಾಯಣ ವಾರ್ಡ್ ಸಂಖ್ಯೆ 19, ಶ್ರೀ ನಾನಾಗೌಡ ತಂದೆ ನಿಂಗನಗೌಡ ಹಬ್ಬು ವಾರ್ಡ್ ಸಂಖ್ಯೆ 20, ಶ್ರೀಮತಿ ದೇವಮ್ಮ ಗಂಡ ರಾಯಪ್ಪ ಅರಕೇರಿ ವಾರ್ಡ್ ಸಂಖ್ಯೆ 21, ಶ್ರೀಮತಿ ಕಾಳಮ್ಮ ಬಿ ಮೇಲಿನಮನಿ ಗಂಡ ಭೀಮಪ್ಪ ವಾರ್ಡ್ ಸಂಖ್ಯೆ 22, ಶ್ರೀಮತಿ ಸೂರಮ್ಮ ಮಸೂತಿ ಗಂಡ ಮುದೆಪ್ಪ ವಾರ್ಡ್ ಸಂಖ್ಯೆ 23 ಸದಸ್ಯರ ಸಂಖ್ಯೆ ಪಟ್ಟಿ ಪ್ರಕಟಿಸಿದೆ.

ಕಕ್ಕೇರಾ ಪುರಸಭೆ ಸದಸ್ಯರ ವಿವರ : ಶ್ರೀಮತಿ ಶ್ರೀದೇವಿ ಗಂಡ ಶಿವರಾಜ ಕುರಿಯರ್ ವಾರ್ಡ್ ಸಂಖ್ಯೆ 1, ಶ್ರೀ ಸದ್ದಾಂ ಹುಸೇನ ಶ್ಯಾನಿ ತಂದೆ ಧರೇಸಾಬ ಶ್ಯಾನಿ ವಾರ್ಡ್ ಸಂಖ್ಯೆ 2, ಶ್ರೀಮತಿ ನಂದಮ್ಮ ಗಂಡ ಮಾನಪ್ಪ ದೇಸಾಯಿ ವಾರ್ಡ್ ಸಂಖ್ಯೆ 3, ಶ್ರೀ ಪರಮಣ್ಣ ತಂದೆ ನಂದಪ್ಪ ಕಮತಗಿ ವಾರ್ಡ್ ಸಂಖ್ಯೆ 4, ಶ್ರೀಮತಿ ಶರಣಮ್ಮ ಗಂಡ ಚಿದಾನಂದ ಕಮತಗಿ ವಾರ್ಡ್ ಸಂಖ್ಯೆ 5, ಶ್ರೀ ಪರಶುರಾಮ ತಂದೆ ಹೆಚ್ ಗೋವಿಂದರ್ ವಾರ್ಡ್ ಸಂಖ್ಯೆ 6, ಶ್ರೀಮತಿ ಲಕ್ಷ್ಮೀಬಾಯಿ ಗಂಡ ಹುಲಗಪ್ಪ ವಾರ್ಡ್ ಸಂಖ್ಯೆ 7, ಶ್ರೀಮತಿ ಲಕ್ಷ್ಮೀಬಾಯಿ ಗಂಡ ಹಣಮಂತ್ರಾಯ ವಾರ್ಡ್ ಸಂಖ್ಯೆ 8, ಶ್ರೀ ಭೀಮಣ್ಣ ತಂದೆ ಚಂದಪ್ಪ ಚಿಂಚೋಡಿ ವಾರ್ಡ್ ಸಂಖ್ಯೆ 9, ಶ್ರೀ ಸೋಮಣ್ಣ ನಾಯಕ (ರಾಜು ಹವಲ್ದಾರ) ತಂದೆ ಅಂಬಣ್ಣ ನಾಯಕ ವಾರ್ಡ್ ಸಂಖ್ಯೆ 10, ಶ್ರೀ ಜಟ್ಟೇಪ್ಪ ತಂದೆ ಜಟ್ಟೇಪ್ಪ ವಾರ್ಡ್ ಸಂಖ್ಯೆ 11, ಶ್ರೀಮತಿ ನಂದಮ್ಮ ಗಂಡ ಹಣಮಂತ್ರಾಯ ಜುಮ್ಮರ ವಾರ್ಡ್ ಸಂಖ್ಯೆ 12, ಶ್ರೀ ದೇವಿಂದ್ರ ತಂದೆ ಭೀಮಣ್ಣ ದೇಸಾಯಿ ವಾರ್ಡ್ ಸಂಖ್ಯೆ 13, ಶ್ರೀಮತಿ ಶಿಲ್ಪಾ ಗಂಡ ಶಿವಶಂಕರ ರಾಠೋಡ್ ವಾರ್ಡ್ ಸಂಖ್ಯೆ 14, ಶ್ರೀ ನಿಂಗಪ್ಪ ನಾಯಕ ತಂದೆ ಲಾಲಪ್ಪ ನಾಯಕ ವಾರ್ಡ್ ಸಂಖ್ಯೆ 15, ಶ್ರೀ ಅಮರೇಶ ತಂದೆ ಸೋಮರಾಯ ದೊರೆ ವಾರ್ಡ್ ಸಂಖ್ಯೆ 16, ಶ್ರೀಮತಿ ನಾಗಮ್ಮ ಗಂಡ ಯಂಕಣ್ಣ ವಾರ್ಡ್ ಸಂಖ್ಯೆ 17, ಶ್ರೀ ವೆಂಕಟೇಶ ನಾಯಕ ಪಾಟೀಲ್ ತಂದೆ ಕೃಷ್ಣಪ್ಪ ನಾಯಕ ಪಾಟೀಲ್ ವಾರ್ಡ್ ಸಂಖ್ಯೆ 18, ಶ್ರೀಮತಿ ಪರಮವ್ವ ಗಂಡ ನಾಗಪ್ಪ ಮಲಮುತ್ತೇರ ವಾರ್ಡ್ ಸಂಖ್ಯೆ 19, ಶ್ರೀಮತಿ ದುರಗಮ್ಮ ಗಂಡ ಹಣಮಂತ್ರಾಯ ಜುಮ್ಮಾರ ವಾರ್ಡ್ ಸಂಖ್ಯೆ 20, ಶ್ರೀಮಲ್ಲಪ್ಪ ತಂದೆ ಭೀಮಣ್ಣ ದಂಡೀನ್ ವಾರ್ಡ್ ಸಂಖ್ಯೆ 21, ಶ್ರೀಮತಿ ಜಯಮ್ಮ ಗಂಡ ಸೋಮನಾಥ ಸೋಲಾಪುರ ವಾರ್ಡ್ ಸಂಖ್ಯೆ 22, ಶ್ರೀ ಸಣ್ಣ ಅಯ್ಯಾಳಪ್ಪ ತಂದೆ ಹಣಮಂತ್ರಾಯ ಬಡಿಗೇರ ವಾರ್ಡ್ ಸಂಖ್ಯೆ 23 ಸದಸ್ಯರ ಸಂಖ್ಯೆ ಪಟ್ಟಿ ಪ್ರಕಟಿಸಿದೆ.

ಹುಣಸಗಿ ಪಟ್ಟಣ ಪಂಚಾಯತ್ ಸದಸ್ಯರು ವಿವರ : ಭೀಮವ್ವ ತಿಪ್ಪಣ್ಣ ಕಡಿಮನಿ ವಾರ್ಡ್ ಸಂಖ್ಯೆ 1, ಶಾಂತಪ್ಪ ನಂದಪ್ಪ ವಾರ್ಡ್ ಸಂಖ್ಯೆ 2, ರಾಜಶೇಖರ ಬಸವರಾಜ ವಾರ್ಡ್ ಸಂಖ್ಯೆ 3, ಸಿದ್ದಪ್ಪ (ಸಿದ್ದು ಮುದಗಲ್) ವಾರ್ಡ್ ಸಂಖ್ಯೆ 4, ಮಲ್ಲಣ್ಣ ಸಾಬಣ್ಣ ವಾರ್ಡ್ ಸಂಖ್ಯೆ 5, ಕಾಸಿಮಾಸಾ (ಕಾಶಿಮಸಾಬ ಟೋಣ್ಣೂರ) ವಾರ್ಡ್ ಸಂಖ್ಯೆ 6, ಶರಣಮ್ಮ ಬೂದಿಹಾಳ ವಾರ್ಡ್ ಸಂಖ್ಯೆ 7,

ಶರಣು ನಾಗಣ್ಣ ದಂಡಿನ ವಾರ್ಡ್ ಸಂಖ್ಯೆ 8, ಮಲ್ಲಣ್ಣ ಬಸಪ್ಪ ವಾರ್ಡ್ ಸಂಖ್ಯೆ 9, ಅಬೇದಬೇಗಂ ಮಹ್ಮದ ರಫೀಕ ವಾರ್ಡ್ ಸಂಖ್ಯೆ 10, ಖಾಸಿಂಸಾಬ ಮಹಿಬೂಬಸಾಬ ವಾರ್ಡ್ ಸಂಖ್ಯೆ 11, ಮರಿಲಿಂಗಪ್ಪ ಪಿಡ್ಡಪ್ಪ ವಾರ್ಡ್ ಸಂಖ್ಯೆ 12, ನಿಖಿತಾ ಗೂಳಪ್ಪ ವಾರ್ಡ್ ಸಂಖ್ಯೆ 13, ಜಯಶ್ರೀ ರಮೇಶ ವಾಲಿ

ವಾರ್ಡ್ ಸಂಖ್ಯೆ 14, ಅನ್ನಮ್ಮ ಸಿ ಮಲಗಲದಿನ್ನಿ ವಾರ್ಡ್ ಸಂಖ್ಯೆ 15, ತಿಪ್ಪಣ್ಣ ನಾಯಕ ಹಣಮಾನಾಯಕ ವಾರ್ಡ್

ಸಂಖ್ಯೆ 16 ಸದಸ್ಯರ ಸಂಖ್ಯೆ ಪಟ್ಟಿ ಪ್ರಕಟಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೇಡು ದಾಟಲು ಸೃಜನಶೀಲತೆ ಅಗತ್ಯ: ಉಮೇಶ ಪಾಟೀಲ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:

ಹುಲಸೂರ: ಎಲ್ಲ ಕಾಲದಲ್ಲೂ ನಡೆಯುವ ಅತ್ಯಾಚಾರ, ಭ್ರಷ್ಟಾಚಾರ, ಕ್ರೌರ್ಯ ಮೊದಲಾದ ಕೇಡನ್ನು ದಾಟಲು ಸೃಜನಶೀಲತೆ ಅಗತ್ಯ ಎಂದು

ಕಲಬುರ್ಗಿಯ ರಂಗಕರ್ಮಿ ಉಮೇಶ ಪಾಟೀಲ ಹೇಳಿದರು . ಹುಲಸೂರ ತಾಲೂಕಿನ ಗಡಿಗೌಡಗಾಂವ ಗ್ರಾಮದ ಧೂಳಪ್ಪ ಭರಮಶೆಟ್ಟಿ ಅವರ ತೋಟದಲ್ಲಿ ಎಳ್ಳ ಅಮಾವಾಸ್ಯೆ ಪ್ರಯುಕ್ತ ಬಸವಕಲ್ಯಾಣದ ಡಾ. ಜಯದೇವಿತಾಯಿಲಿಗಾಡೆ ಪ್ರತಿಷ್ಠಾನದಿಂದ ಹಮ್ಮಿಕೊಂಡಿದ್ದ 'ರಂಗಭೂಮಿ, ಸಮಾಜ ಮತ್ತು ರಾಜಕಾರಣ' ಕುರಿತ ಪ್ರತಿಷ್ಠಾನದ 95ನೇ ಉಪನ್ಯಾಸ ಸಮಾರಂಭದಲ್ಲಿ ಮಾತನಾಡಿದ ಅವರು, ರಂಗಭೂಮಿಗೆ ಪ್ರತಿರೋಧ ಗುಣವಿದೆ ಎಂದರು. ಸಮಾಜದ ಸಂಕೀರ್ಣತೆಗಳು, ಸಮಕಾಲೀನ ಸಂದಿಗ್ಧತೆಗಳು , ಮನುಷ್ಯನ ಆತಂಕಗಳು ರಂಗಭೂಮಿ ತನ್ನ ಪ್ರದರ್ಶನದ ಸ್ವರೂಪದಲ್ಲಿ ಅನಾವರಣ ಮಾಡುತ್ತ ಬಂದಿದೆ. ಎಲ್ಲ ಕಾಲಕ್ಕೂ ಕಾಡಿದ ಕಾಮ, ಸಂಪತ್ತು ಮತ್ತು ಅಧಿಕಾರದ ದಾಹ, ಅಧಿಕಾರದ ಬೆನ್ನಟ್ಟಿ ನಡೆಸಿದ ಹಿಂಸೆ, ಕ್ರೌರ್ಯ, ಮಹಿಳೆಯರ ಮತ್ತು ದುರ್ಬಲರ ಅಸಹಾಯಕತೆ ಇಂಥ ಹಲವು ಸಂಗತಿಗಳ ಬಗೆಗೆ ರಂಗಭೂಮಿ ನಿರಂತರ ಮಾತನಾಡುತ್ತ ಬಂದಿದೆ. ಎಂದರು. ಸಾಹಿತ್ಯಕೃತಿಗಳು ಓದುಗರಿಗೆ ನೀಡುವ ಮೂಲಕ ಸಮಾರಂಭ

ಹುಲಸೂರ ತಹಸೀಲ್ದಾರರಾದ ಶಿವಾನಂದ ಮೇತ್ರೆ ಉದ್ಘಾಟಿಸಿ ಮಾತನಾಡಿ ಬಹುತ್ವ ಹಾಗೂ ಬಹುಸಂಸ್ಕೃತಿಯ ನಮ್ಮ ದೇಶದಲ್ಲಿ ನಾಡಿಮಿಡಿತಗಳು. ಸಾಮಾಜಿಕ ಸೌಹಾರ್ದತೆ ಹಾಗೂ ಧಾರ್ಮಿಕ ಸಹಿಷ್ಣುತೆ ಇಡೀ ಲೋಕದ ಚಾಲಕ ಶಕ್ತಿಗಳಾವೆ. ಮಾನವೀಯತೆ ಜಗತ್ತಿನ ದೊಡ್ಡ ತತ್ವವಾಗಿದೆ ಮತ್ತು ಸತ್ವವೂ ಆಗಿದೆ ಎಂದರು. ಐಡಿಯಲ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಮುಜಾಹಿದ್ ಪಾಶಾ ಖುರೇಷಿ ಮಾತನಾಡಿ, ನಾಟಕ ಮತ್ತು ರಂಗಭೂಮಿ ಸಮಾಜವನ್ನು ಜಾಗ್ರತವಾಗಿಡುವ ಕಲಾ ಮಾಧ್ಯಮವಾಗಿವೆ. ಎದೆಯಿಂದ ಎದೆಗೆ ಮಾನವೀಯತೆಯ ಸೇತುವೆ ಕಟ್ಟುವ ಕಲೆ ಎಲ್ಲಾ ಕಾಲಕ್ಕೂ ಜೀವಂತವಾಗಿರುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಜಿಪಂ ಮಾಜಿ ಸದಸ್ಯ ಮಲ್ಲಪ್ಪ ಧಬಾಲೆ ಮಾತನಾಡಿ, ಈ ಕಾಲಕ್ಕೆ ರಾಜಕಾರಣದ ಪರಿಭಾಷೆ ಬದಲಾಗಿದೆ. ತತ್ವ ಸಿದ್ಧಾಂತಗಳ ಬದ್ಧತೆಗಿಂತ ಅಧಿಕಾರದ ಆಮಿಷ ಹೆಚ್ಚಾಗಿದೆ. ಭಾವನಾತ್ಮಕ ಸಂಗತಿಗಳೇ ಆಗಲಿ, ಸಂವೇದನೆ ರಹಿತ ಸಂಗತಿಗಳೇ, ಜಾತಿ, ಧರ್ಮದಂಥ ಸಂಗತಿಗಳೇ ಆಗಲಿ ರಾಜಕೀಯ ಅಧಿಕಾರದ ಪರಿಕರಗಳಾಗಿ ಬಳಕೆಯಾಗುತ್ತಿವೆ ಎಂದರು. ಶ್ರೀ ಬಸವೇಶ್ವರ ಪದವಿ ಕಾಲೇಜು ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ ಮಾತನಾಡಿ ಮನುಷ್ಯನ ಬಿಕ್ಕಟ್ಟಿನ ಸಂದರ್ಭದಲ್ಲಿ ಸೃಜನಶೀಲತೆ ಸದಾ ಹೊಸ ದಾರಿ ತೋರುತ್ತ ಬಂದಿದೆ. ಸಾಹಿತ್ಯ, ನಾಟಕ , ರಂಗಭೂಮಿ , ಸಿನೇಮಾಗಳು ಸಮಾಜವನ್ನು, ಪ್ರಭುತ್ವವನ್ನು, ಲೋಕವನ್ನು ನಿರಂತರ ವಿಮರ್ಶಿಸುತ್ತ ಬಂದಿವೆ. ಗ್ರೀಕ್ ನಾಟಕಗಳಿಂದ ಕನ್ನಡದ ರಂಗಭೂಮಿಯವರೆಗೆ ಎಲ್ಲಾ ಕಾಲದಲ್ಲಿಯೂ ನಾಟಕ ಮತ್ತು ರಂಗಭೂಮಿ ಪ್ರಜ್ಞೆಯಾಗಿ, ಅರಿವಾಗಿ ಮನುಷ್ಯನೊಟ್ಟಿಗೆ ಇದೆ ಎಂದರು. ಮುಖಂಡ ವಿಜಯಕುಮಾರ ಪಾಟೀಲ ಶಿವಪುರ, ಪತ್ರಕರ್ತರಾದ ಮಾಣಿಕ ಭುರೆ. ಬಸವಕುಮಾರ ಕವಟೆ ಮಾತನಾಡಿದರು. ಶಿಕ್ಷಕರಾದ ನಾಗಪ್ಪ ನಿಣ್ಣೆ, ಶಿಕ್ಷಕ ಎಂಡಿ. ಅಲ್ತಾಫ್, ಧೂಳಪ್ಪ ಭರಮಶೆಟ್ಟೆ, ದತ್ತಾತ್ರಿ ರಾಘೋ, ಕಂಟೆಪ್ಪ ಮೇತ್ರೆ, ಸತೀಶ್ ಹಿರೇಮಠ, ಬಸವರಾಜ ಬಿರಾದಾರ ಖಂಡಾಳ, ಪ್ರಭಾಕರ ನೌಗಿರೆ, ಡಾ. ಪ್ರವೀಣ ದಸ್ತಾಪುರೆ, ಅಂಬರೀಶ್ ಮಹಾಲಿಂಗ, ಕಾಶಿನಾಥ ಬಿರಾದಾರ, ಜಗನ್ನಾಥ ಭೋಪಳೆ, ಸಿದ್ರಾಮ ಕಾವಳೆ, ನಾಗಪ್ಪ ನಿಣ್ಣೆ, ದಯಾನಂದ ಭರಮಶೆಟ್ಟೆ, ಸಿದ್ದರಾಮ ಖ್ಯಾಡೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ರಂಗಕರ್ಮಿ ಉಮೇಶ ಪಾಟೀಲ ಅವರು ತಾವು ಬರೆದ 'ಟ್ಯಾಬ್ಲೆಟ್' ನಾಟಕದ ವಾಚಿಸಿ, ಏಕಪಾತ್ರಾಭಿನಯದಲ್ಲಿ ಅಭಿನಯಿಸಿದ್ದು ಗಮನ ಸೆಳೆಯಿತು. ಪ್ರತಿಷ್ಠಾನದ ನಿರ್ದೇಶಕ ಡಾ. ಶಿವಾಜಿ ಮೇತ್ರೆ ಸ್ವಾಗತಿಸಿದರು. ಗಂಗಾಧರ ಸಾಲಿಮಠ ನಿರೂಪಿಸಿ, ವಂದಿಸಿದರು.

# ಸಂಚಾರ ನಿಯಮಗಳು ಪಾಲನೆ ಮಾಡಿ: ಬಸಲಿಂಗಪ್ಪ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:

ರಸ್ತೆ ಸುರಕ್ಷತಾ ಅಭಿಯಾನದ ಅಂಗವಾಗಿ ಪಟ್ಟಣದ ಪೊಲೀಸ್ ಠಾಣೆಯಿಂದ ವಾಹನ ಸವಾರರಿಗೆ, ಆಟೋ ಚಾಲಕರಿಗೆ ಸಂಚಾರ ನಿಯಮಗಳ ಪಾಲನೆ ಬಗ್ಗೆ ಪಿಎಸ್ಐ ಬಸಲಿಂಗಪ್ಪ ಎಂ. ಗೋಧಿಹಾಳ ಅವರು ಜಾಗೃತಿ ಮುಡಿಸುತ್ತಾ ಮಾತನಾಡಿದ ಅವರು, ವಾಹನ ಸವಾರರು ಹೆಲ್ಮೆಟ್, ಚಾಲನಾ ಪರವಾನಗಿ, ವಿಮೆಯನ್ನು ಕಡ್ಡಾಯವಾಗಿ ಹೊಂದಿರಬೇಕು. ಕಾರಿನ ಚಾಲಕರು ಸೀಟ್ ಬೆಲ್ಟ್ ಹಾಕಿಕೊಳ್ಳಬೇಕು ಎಂದು ತಿಳಿಸಿದರು. ಸಂಚಾರ ನಿಯಮ ಪಾಲನೆಯಿಂದ ನಿಮ್ಮ ಸುರಕ್ಷತೆ ಜತೆಗೆ ನಿಮ್ಮನ್ನು ನಂಬಿದ ಹೆಂಡತಿ, ಮಕ್ಕಳು ಸಹ ಕ್ಷೇಮವಾಗಿರುತ್ತಾರೆ. ವೇಗವಾಗಿ ವಾಹನ ಓಡಿಸುವುದನ್ನು ಬಿಡಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿಗಳಾದ ಈಶ್ವರ್, ಶಿವಾನಂದ, ಜಗನಾಥ ಹಾಗೂ ಆಟೋ ಚಾಲಕರು ಇದ್ದರು.

# ಸುಭಿಕ್ಷ ರಾಷ್ಟ್ರ ನಿರ್ಮಾಣಕ್ಕೆ ಯುವಜನತೆ ಕೊಡುಗೆ ನೀಡಬೇಕು: ಗೆಹಲೋಟ್

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ಶಿಕ್ಷಣ ಎನ್ನುವುದು ಒಂದು ನಿರಂತರ ಯಾತ್ರೆ ಮತ್ತು ಅಮೂಲ್ಯ ಸಂಪತ್ತು. ವಿದ್ಯಾರ್ಥಿಗಳು ಜ್ಞಾನ ಬೆಳಸಿಕೊಂಡು ಉಜ್ವಲ ಭವಿಷ್ಯ ರೂಪಿಸಿಕೊಳ್ಳುವುದರ ಜೊತೆಗೆ, ಸುಭಿಕ್ಷ ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯ ಪಾತ್ರ ವಹಿಸಬೇಕು ಎಂದು ರಾಜ್ಯಪಾಲರಾದ ಥಾವರ್ ಚಂದ್ ಗೆಹಲೋಟ್ ಅವರು ಕರೆ ನೀಡಿದರು.

ಬಳ್ಳಾರಿ-ಸಿರುಗುಪ್ಪ ರಸ್ತೆ ಮಾರ್ಗದ ಮೌಂಟ್ ವ್ಯೂ ಕ್ಯಾಂಪಸ್ ನಲ್ಲಿ ಬುಧವಾರ ಆಯೋಜಿಸಿದ್ದ ಕಿಷ್ಕಿಂದ ವಿಶ್ವವಿದ್ಯಾಲಯದ ಪ್ರಥಮ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಶಿಕ್ಷಣ ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗಬಾರದು. ಅದು ಜ್ಞಾನ ಸಂಪಾದನೆಗೆ ಅನುವು ಮಾಡಿಕೊಡುವ ಸಾಧನವಾಗಬೇಕು. ವಿದ್ಯಾರ್ಥಿಗಳು ಕಲಿತ ವಿದ್ಯೆಯನ್ನು ದೇಶದ ಏಳಿಗೆಗಾಗಿ ಧಾರೆ ಎರೆಯಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಯುವ ಸಮೂಹ ಕೇವಲ ಬೌದ್ಧಿಕವಾಗಿ ಬೆಳೆದರೆ ಸಾಲದು, ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಕೂಡ ಅಳವಡಿಸಿಕೊಳ್ಳುವುದು ಅಷ್ಟೇ ಮುಖ್ಯ. ಭಾರತೀಯ ಪರಂಪರೆಯು ನಮಗೆ ಸಂಸ್ಕಾರ ಮತ್ತು ಸಂಸ್ಕೃತಿಯನ್ನು ಕಲಿಸಿಕೊಟ್ಟಿದೆ. ಈ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿ ಈಗಿನ ವಿದ್ಯಾರ್ಥಿಗಳ ಮೇಲಿದೆ ಎಂದರು. "ಎದ್ದೇಳಿ, ಎಚ್ಚರಗೊಳ್ಳಿ ಮತ್ತು ಗುರಿ ಸಾಧಿಸುವವರೆಗೆ ನಿಲ್ಲಬೇಡಿ" ಸ್ವಾಮಿ ವಿವೇಕಾನಂದರ ಈ ವಾಕ್ಯದಿಂದ ಸ್ಫೂರ್ತಿ ಪಡೆದು, ನಮ್ಮ ಜ್ಞಾನವನ್ನು ಕಾರ್ಯರೂಪಕ್ಕೆ ತರಬೇಕು ಮತ್ತು ರಾಷ್ಟ್ರವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ನಮ್ಮ ಕೌಶಲ್ಯಗಳನ್ನು ಬಳಸಬೇಕು ಎಂದು ವಿದ್ಯಾರ್ಥಿಗಳಿಗೆ ಕರೆನೀಡಿದರು. ಭಾರತವನ್ನು ಸದೃಢ ಮತ್ತು ಸುಭಿಕ್ಷ ರಾಷ್ಟ್ರವನ್ನಾಗಿ ಮಾಡುವಲ್ಲಿ ಯುವಜನತೆಯ ಪಾತ್ರ ಪ್ರಮುಖವಾಗಿದೆ. ಕಿಷ್ಕಿಂದೆಯಂತಹ ಪವಿತ್ರ ಮಣ್ಣಿನಲ್ಲಿ ಸ್ಥಾಪಿತವಾಗಿರುವ ಈ ವಿಶ್ವವಿದ್ಯಾಲಯವು ಯುವಶಕ್ತಿಗೆ ಸರಿಯಾದ ಮಾರ್ಗದರ್ಶನ ನೀಡುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರು ಮಾತನಾಡಿ, ಕಲ್ಯಾಣ ಕರ್ನಾಟಕದಂತಹ ಭಾಗದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಕಟ್ಟುವುದು ಸವಾಲಿನ ಕೆಲಸ. ಈ ಸವಾಲುಗಳ ನಡುವೆಯೂ ವಿಶ್ವವಿದ್ಯಾಲಯವು ಎರಡು ವರ್ಷ ಪೂರೈಸಿ ಪ್ರಥಮ ಘಟಿಕೋತ್ಸವ ಆಚರಿಸುತ್ತಿರುವುದು ಸಂತಸದ ಸಂಗತಿ ಎಂದು ತಿಳಿಸಿದರು.

ರಾಜ್ಯದಲ್ಲಿ ಪ್ರಸ್ತುತ 29 ಖಾಸಗಿ ವಿಶ್ವವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿವೆ. ಕೇವಲ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆಗೆ ಆದ್ಯತೆ ನೀಡದೆ, ಶಿಕ್ಷಣದ ಗುಣಮಟ್ಟ ಕಾಪಾಡಿಕೊಳ್ಳುವುದು ಇಂದಿನ ಅಗತ್ಯವಾಗಿದೆ. ಈ ಭಾಗದ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಹಾಕಲು ಪೂರಕ ವಾತಾವರಣ ನಿರ್ಮಿಸಬೇಕು. ವಿಶೇಷವಾಗಿ ಸಂಶೋಧನಾ ಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡುವ ಮೂಲಕ ಜಾಗತಿಕ ಮಟ್ಟದ ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕು ಎಂದರು.

ಕಲ್ಯಾಣ ಕರ್ನಾಟಕ ಭಾಗದಲ್ಲಿ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಹಾದಿ ಸುಗಮವಾಗುತ್ತಿದೆ. ಇಲ್ಲಿನ ಹೆಣ್ಣು ಮಕ್ಕಳಿಗೆ ಉಜ್ವಲ ಭವಿಷ್ಯವಿದೆ. ಅವರಿಗೆ ಉನ್ನತ ಶಿಕ್ಷಣ ನೀಡಲು ಪ್ರೋತ್ಸಾಹ ನೀಡುವುದು ನಮ್ಮೆಲ್ಲರ ಆದ್ಯಕರ್ತವ್ಯವಾಗಿದೆ. ದೇಶ ಹಾಗೂ ರಾಜ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯಗಳು ತಲೆ ಎತ್ತುತ್ತಿವೆ. ಈ ಪೈಪೋಟಿಯ ನಡುವೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸಂಸ್ಥೆಗಳು ಯಶಸ್ವಿಯಾಗಬೇಕು ಎಂದು ಆಶಿಸಿದರು. ಬೆಳಗಾವಿ ಲೋಕಸಭಾ ಕ್ಷೇತ್ರದ ಸಂಸದ ಜಗದೀಶ್ ಶೆಟ್ಟರ್ ಅವರು ಮಾತನಾಡಿ, ಹಿಂದುಳಿದ ತಾಲ್ಲೂಕುಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿರುವ ಸರ್ಕಾರದ ನಿರ್ಧಾರವು ಅತ್ಯಂತ ಪ್ರಶಂಸನೀಯವಾಗಿದ್ದು, ಇದು ಈ ಭಾಗದ ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಗತಿಗೆ ಪೂರಕವಾಗಿ ಕಾರ್ಯನಿರ್ವಹಿಸಲಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತಮ್ಮ ನೆಲದಲ್ಲೇ ಉನ್ನತ ಶಿಕ್ಷಣ ಲಭಿಸುವಂತಾಗಬೇಕು. ಕೇವಲ ಪದವಿ ಪಡೆಯುವುದು ಶಿಕ್ಷಣದ ಉದ್ದೇಶವಾಗಬಾರದು. ವಿದ್ಯಾರ್ಥಿಗಳು ಗುಣಾತ್ಮಕ ಶಿಕ್ಷಣದ ಜೊತೆಗೆ ಕೌಶಲಗಳನ್ನು ಮೈಗೂಡಿಸಿಕೊಂಡು ದೇಶದ ಅಭಿವೃದ್ಧಿಗೆ ಅಮೂಲ್ಯ ಕೊಡುಗೆ ನೀಡುವಂತಾಗಬೇಕು ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ವಳ ಬಳ್ಳಾರಿಯ ಸುವರ್ಣಗಿರಿ ವಿರಕ್ತ ಮಠದ ಪರಮಪೂಜ್ಯ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿ ಗೌರವಿಸಲಾಯಿತು. ಇದೇ ವೇಳೆ ಶೈಕ್ಷಣಿಕ ಸಾಧನೆಯಲ್ಲಿ ಉನ್ನತ ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು. ಈ ಸಂದರ್ಭದಲ್ಲಿ ಸಿರುಗುಪ್ಪ ಶಾಸಕ ಬಿ.ಎಂ.ನಾಗರಾಜ, ಸಿಂಧನೂರು ಶಾಸಕ ಬಾದರ್ಲಿ ಹಂಪನಗೌಡ, ಟಿ.ಇ.ಎಚ್.ಆರ್.ಡಿ ಟ್ರಸ್ಟ್ ಅಧ್ಯಕ್ಷ ಡಾ.ಎಸ್.ಜೆ.ವಿ.ಮಹಿಪಾಲ್, ಕಿಷ್ಕಿಂದ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಯಶವಂತ್ ಭೂಪಲ್, ಕುಲಪತಿ ಪ್ರೊ.ಟಿ.ಎನ್.ನಾಗಭೂಷಣ, ಸಹಕುಲಾಧಿಪತಿ ವೈ.ಜೆ.ಪೃಥ್ವಿರಾಜ್, ಕುಲಸಚಿವ ಡಾ.ಯು. ಈರಣ್ಣ, ಕುಲಪತಿ (ಮೌಲ್ಯಮಾಪನ) ಡಾ.ರಾಜು ಜಾಡರ್, ಹಣಕಾಸು ಅಧಿಕಾರಿ ವೈ.ನಮ್ರತಾ ಸೇರಿದಂತೆ ಬೋಧಕರು, ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಹಾಗೂ ಪೋಷಕರು ಉಪಸ್ಥಿತರಿದ್ದರು.

# ಎಲ್ಲಾ ಇಲಾಖೆ ಸಂಘ ಸಂಸ್ಥೆಗಳಲ್ಲಿ ಕನ್ನಡ ಬಳಕೆ ಕಡ್ಡಾಯ: ಜಿಲ್ಲಾಧಿಕಾರಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ಜಿಲ್ಲೆಯ ಎಲ್ಲಾ ಇಲಾಖೆಗಳು, ಸಂಘ-ಸಂಸ್ಥೆಗಳು, ವಾಣಿಜ್ಯ ಮತ್ತು ನಿಗಮ ಮಂಡಳಿಗಳಲ್ಲಿ ಕಡ್ಡಾಯವಾಗಿ ಕನ್ನಡದಲ್ಲಿ ಪತ್ರ ವ್ಯವಹಾರ ಮಾಡಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ ಅವರು ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರ ನಗರದ ನೂತನ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಕನ್ನಡ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ಭಾಷೆ ಮತ್ತು ಅನುಷ್ಠಾನದ ಬಗ್ಗೆ ಕನ್ನಡ ಜಾಗೃತಿ ಸಮಿತಿಯು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಿ ಅಧಿಕೃತವಾಗಿ ನಮಗೆ ವರದಿ ನೀಡಬೇಕು. ಈ ಕಾನೂನನ್ನು ಪಾಲಿಸದೇ ಇರುವ ಸಂಸ್ಥೆಗಳು ಅಥವಾ ಇಲಾಖೆಗಳ ವಿರುದ್ಧ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದರು.

ಎಲ್ಲಾ ಇಲಾಖೆಗಳು, ನಗರ ಸ್ಥಳಿಯ ಸಂಘ-ಸಂಸ್ಥೆಗಳು, ವಾಣಿಜ್ಯ ಮಂಡಳಿ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಕನ್ನಡ ಅನುಷ್ಠಾನ ಮತ್ತು ಬಳಕೆಯ ಬಗ್ಗೆ ಪ್ರತಿ ತಿಂಗಳು ಮಾಸಿಕ ವರದಿ ನೀಡಬೇಕು. ಸರ್ಕಾರಿ ಮತ್ತು ಖಾಸಗಿ ಕಚೇರಿಯ ನಾಮಫಲಕ, ವಾಣಿಜ್ಯ ಮತ್ತು ಅಂಗಡಿ ಮುಂಗಟ್ಟುಗಳಲ್ಲಿ ಶೇ.60 ರಷ್ಟು ಕನ್ನಡ ಬಳಕೆ ಕಡ್ಡಾಯ, ಮಾರ್ಗಸೂಚಿ, ವಿಭಾಗಗಳು, ವ್ಯವಹಾರ ಕಡತಗಳಲ್ಲಿ ಕನ್ನಡ ಬಳಕೆಯ ಬಗ್ಗೆ ಪರಿಶೀಲನೆ ಮಾಡಬೇಕು ಹಾಗೂ ಪಾಲಿಸದೇ ಇರುವ ಸಂಸ್ಥೆಗಳ ವಿರುದ್ಧ ಕ್ರಮ ವಹಿಸಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿಗೆ ಸೂಚಿಸಿದರು.

ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ವಿವಿಧ ಸ್ಥಳಗಳಲ್ಲಿ ಅಳವಡಿಸುವ ಜಾಹಿರಾತು ಬ್ಯಾನರ್‌ಗಳು ಕನ್ನಡ ಬಳಕೆ, ಪ್ಲಾಸ್ಟಿಕ್ ಗುಣಮಟ್ಟ ವಿವಿಧ ರೀತಿಯಲ್ಲಿ ಪರಿಶೀಲಿಸಿ ಷರತ್ತುಗಳನ್ನು ವಿಧಿಸಿ ಅನುಮತಿ ನೀಡಬೇಕು. ಹೋಟೆಲ್ ಮತ್ತು ಕಾರ್ಖಾನೆಗಳಲ್ಲಿ ಕನ್ನಡ ನಾಮಫಲಕ ಮತ್ತು ಮಾರ್ಗಸೂಚಿಗಳ ಬಗ್ಗೆ ಪರಿಶೀಲನೆ ಮಾಡಿ ವರದಿ ನೀಡಬೇಕು. ಕನ್ನಡ ಬಳಕೆ ಇಲ್ಲವಾದಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ವಿಭಿನ್ನ ರೀತಿಯಲ್ಲಿ ಆಯೋಜಿಸಬೇಕು. ಮೊದಲ ತ್ರೈಮಾಸಿಕದಲ್ಲಿ ಕನ್ನಡ ಜಾಗೃತಿ ವಾರ ಸಪ್ತಾಹ ಮತ್ತು 15 ದಿನಗಳ ಕನ್ನಡ ಅಭಿಯಾನ ಕೈಗೊಳ್ಳಬೇಕು ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ ಮಾತನಾಡಿ, ಈಗಾಗಲೇ ಜಿಲ್ಲೆಯಲ್ಲಿ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳು, ವಿಚಾರಗೋಷ್ಠಿ, ಕನ್ನಡ ಸಂವಾದ, ವಿಚಾರ ಸಂಕೀರ್ಣ ಮತ್ತು ವಿವಿಧ ಜಯಂತಿ ದಿನಾಚರಣೆಗಳಲ್ಲಿ ವಿವಿಧ ಸ್ಪರ್ಧೆ ನಡೆಸಿ ಕನ್ನಡ ಪುಸ್ತಕಗಳನ್ನು ನೀಡಲಾಗುತ್ತಿದೆ. ಗಡಿನಾಡು ಪ್ರದೇಶಗಳಲ್ಲಿ ಆಚರಿಸುವ ಕನ್ನಡ ಉತ್ಸವ ಕಾರ್ಯಕ್ರಮಕ್ಕೆ ಪ್ರೋತ್ಸಾಹ ಧನ ಸಹ ನೀಡಲಾಗುತ್ತಿದ್ದು, ಹೆಚ್ಚಿನ ಕನ್ನಡ ಚಟುವಟಿಕೆ ನಡೆಸಲು ರೂಪುರೇಷೆ ಸಿದ್ಧಪಡಿಸಿ ಹೆಚ್ಚಿನ ಅನುದಾನಕ್ಕಾಗಿ ಪ್ರಾಧಿಕಾರಕ್ಕೆ ಸಲ್ಲಿಸಲಾಗುವುದು ಎಂದರು.

**ಕನ್ನಡ ಜಾಗೃತಿ ಸಮಿತಿ ಸಭೆ ಕಡ್ಡಾಯವಾಗಿ ಕರೆಯಿರಿ:**

ಆಡಳಿತದಲ್ಲಿ ಕನ್ನಡ ಕಡ್ಡಾಯ ಅನುಷ್ಠಾನಕ್ಕಾಗಿ ಪರಾಮರ್ಶೆ ನಡೆಸಲು ಪ್ರತಿ ಮೂರು ತಿಂಗಳಿಗೊಮ್ಮೆ ತಾಲ್ಲೂಕು ಮತ್ತು ಪಂಚಾಯತಿ ಮಟ್ಟದಲ್ಲಿ ಸಭೆ ನಡೆಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ ಅವರು ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಿಷ್ಠಿ ರುದ್ರಪ್ಪ ಅವರು ಮಾತನಾಡಿ, ಕನ್ನಡ ಕಡ್ಡಾಯದ ಸರ್ಕಾರದ ನಿಯಮಾವಳಿಗಳನ್ನು ಅಧಿಕಾರಿಗಳು ಪಾಲಿಸಬೇಕು. ಬ್ಯಾಂಕುಗಳಲ್ಲಿ ಕನ್ನಡ ವ್ಯವಹಾರ ನಡಿತಿಲ್ಲ. ಕನ್ನಡ ಕಡ್ಡಾಯಗೊಳಿಸಬೇಕೆಂದು ನಿಯಮಗಳಿದ್ದರೂ ಬ್ಯಾಂಕುಗಳು ಇದನ್ನು ಪಾಲಿಸುತ್ತಿಲ್ಲ. ಕನ್ನಡೇತರರ ನೇಮಕಾತಿಯಿಂದ ಈ ಸಮಸ್ಯೆ ಇನ್ನು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬ್ಯಾಂಕ್‌ಗಳಲ್ಲಿ ಶೀಘ್ರವೇ ಕನ್ನಡ ಕೋಶ ಎಂಬ ಕಾರ್ಯಕ್ರಮವನ್ನು ನಡೆಸಬೇಕು. ಬ್ಯಾಂಕರ್ಸ್ ಸಭೆ ಕರೆದು ಕನ್ನಡ ಅನುಷ್ಠಾನಕ್ಕೆ ನಿರ್ದೇಶನ ನೀಡಬೇಕು ಎಂದು ಸಭೆಗೆ ತಿಳಿಸಿದರು. ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕನ್ನಡವನ್ನು ಅನುಷ್ಠಾನಗೊಳಿಸಬೇಕಾದರೆ ಕನ್ನಡಿಗರು ಇಲ್ಲಿರಬೇಕು. ಇದಕ್ಕಾಗಿ ಕನ್ನಡಿಗರು ನೇಮಕಾತಿ ಹೊಂದುವಂತೆ ಸ್ಥಳೀಯ ಸಂಪನ್ಮೂಲಗಳಿಂದ ಸೂಕ್ತ ತರಬೇತಿ ನೀಡುವತ್ತ ಜಿಲ್ಲಾಡಳಿತ ಗಮನಹಿರಸಬೇಕು ಎಂದರು. ಜಿಲ್ಲೆಯ ಕೈಗಾರಿಕಾ ವಲಯ, ಬ್ಯಾಂಕ್ ಮತ್ತು ಇತರೆ ಸಂಸ್ಥೆಗಳಲ್ಲಿ ಅನ್ಯಭಾಷಿಕರೆ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಸ್ಥಳಿಯ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಭೆಯ ಗಮನಕ್ಕೆ ತಂದರು. ಜಿಲ್ಲಾ ಮಟ್ಟದ ನ್ಯಾಯಾಲಗಳು ಮತ್ತು ಅರೆಕಾಲಿಕ ನ್ಯಾಯಾಲಗಳು ಸೇರಿದಂತೆ ಸಹಾಯಕ ಆಯುಕ್ತರು ಮತ್ತು ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ವಿಚಾರಣೆಗೆ ಒಳಪಡುವ ಕಂದಾಯ ಪ್ರಕರಣಗಳ ಕುರಿತಂತೆ ನ್ಯಾಯಾಲಯದ ತೀರ್ಪುಗಳನ್ನು ಕನ್ನಡದಲ್ಲಿಯೆ ಹೊರಡಿಸಬೇಕು. ಜಿಲ್ಲೆಯಲ್ಲಿರುವ ಗಡಿನಾಡು ಕನ್ನಡ ಶಾಲೆಗಳ ಅಭಿವೃದ್ಧಿ ಮತ್ತು ಕೇಂದ್ರ ಸರಕಾರದ ಕೇಂದ್ರಿಯ ವಿದ್ಯಾಲಯಗಳು ಮತ್ತು ಸಿಬಿಎಸ್‌ಇ ಪಠ್ಯಕ್ರಮ ಬೋಧಿಸುತ್ತಿರುವ ಶಾಲೆಗಳು ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯಾಗಿ ಕಡ್ಡಾಯವಾಗಿ ಬೋಧನೆ ಮತ್ತು ಕನ್ನಡ ಭಾಷೆ ಮಾತನಾಡಬೇಕು. ಇದರ ಬಗ್ಗೆ ಕ್ರಮ ಕೈಗೊಳ್ಳಿ ಎಂದು ಕನ್ನಡ ಜಾಗೃತಿ ಸಮಿತಿಯ ಸದಸ್ಯರು ಸಭೆಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಕನ್ನಡ ಜಾಗೃತಿ ಸಮಿತಿಯ ಸದಸ್ಯರಾದ ಡಾ.ಎ.ಸಿ ದಾನಪ್ಪ, ಅಂಬಿಗರ ಮಂಜುನಾಥ, ರಾಧಾ, ಡಾ.ತಿಪ್ಪೇರುದ್ರ, ಅಲಂ ಭಾಷಾ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಇತರರು ಉಪಸ್ಥಿತರಿದ್ದರು.

# ಕಲ್ಟ್ ಚಲನಚಿತ್ರ ಬಿಡುಗಡೆ: ಝುಯಿದ್ ಖಾನ್



• ಮಲ್ಲಮ್ಮ ನುಡಿ ವಾರ್ತೆ ಬೀದರ್:

ಜನೆವರಿ 23 2026ರಂದು ನಾಡಿನ 150ಕ್ಕೂ ಚಲನಚಿತ್ರ ಮಂದಿರಗಳಲ್ಲಿ ತಾನು ಅಭಿನಯಿಸಿದ ಕಲ್ಟ್ ಚಲನಚಿತ್ರ ಬಿಡುಗಡೆಯಾಗಲಿದೆ ಎಂದು ಚಿತ್ರನಟ ಝುಯಿದ್ ಖಾನ್ ತಿಳಿಸಿದರು.

ಬುಧವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಟಿ ಉದ್ದೇಶಿಸಿ ಮಾತನಾಡಿರುವ ಅವರು, ಇದು ನಾನು ಅಭಿನಯಿಸಿದ ಎರಡನೇ ಚಲನಚಿತ್ರ ಇವಾಗಿದೆ. ಬನಾರಸ್ ತನ್ನ ಮೊದಲ ಚಲನಚಿತ್ರವಾಗಿತ್ತು. ಕಲ್ಟ್ ಚಿತ್ರವು ಚಿತ್ರದುರ್ಗ, ಹಂಪಿ, ವಿಜಯನಗರ ಇತ್ಯಾದಿ ಕಡೆಗಳಲ್ಲಿ ಶುಟಿಂಗ್ ನಡೆದಿದೆ. ಎಂದು ತಿಳಿಸಿದರು.

ಇಂದು ನಾಡಿನ ಅಭಿಮಾನ, ಭಾಷಾಭಿಮಾನ ಹಾಗೂ ಪರಸ್ಪರ ಒಂದಾಗದೇ ಇರುವುದು ಕನ್ನಡ ಚಲಮಚಿತ್ರಕ್ಕೆ ಕುಂದು ಉಂಟಾಗುತ್ತಿದೆ. ಪಕ್ಕದ ರಾಜ್ಯಗಳಾದ ತಮಿಳುನಾಡು, ಆಂದ್ರ ಪ್ರದೇಶ ಹಾಗೂ ಕೇರಳ ರಾಜ್ಯಗಳಿಂದ ನಾವು ಬಹಳಷ್ಟು ಕಲಿಯಬಹುದು. ಪ್ರಾದೇಶಿಕ ಅಭಿಮಾನ ಹೆಚ್ಚಾದಾಗ ನಮ್ಮಲ್ಲಿ ಒಗ್ಗಟ್ಟು ಬರಲು ಸಾಧ್ಯ ಎಂದು ಪ್ರತಿಪಾದಿಸಿದರು.

ಕಲ್ಟ್ ಎಂದರೆ ಕಲ್ಚರ್ ಎಂದರ್ಥ. ಈ ಚಿತ್ರವನ್ನು ನೋಡಿದ ಅಭಿಮಾನಿಗಳು ಹೆಮ್ಮೆ ಪಡಬೇಕು, ಅಂಥ ಚಲನಚಿತ್ರ ತೆರೆ ಕಾಣಲಿದೆ. ಮಲೈಕಾ ವಾಸುಪಾಲ ಹಾಗೂ ರಚಿತಾ ರಾಮ ಇಬ್ಬರು ನಟಿಯರಾಗಿ ಇಲ್ಲಿ ಅಭಿನಯಿಸಿ ಲಕ್ಷಾವಧಿ ಅಭಿಮಾನಿಗಳಿಗೆ ಹುಬ್ಬೇರುವಂತೆ ಮಾಡಿದ್ದಾರೆ.

ತಾನೊಬ್ಬ ರಾಜಕಾರಣಿ ಮಗನಾಗಿದ್ದರೂ ನನಗೆ ನಮ್ಮ ತಂದೆ ತರಹ ಪಾಲಿಟಿಕ್ಸ್ ಇಷ್ಟವಿಲ್ಲ. ಒಳ್ಳೆ ಒಳ್ಳೆ ಚಲನಚಿತ್ರ ತೆಗೆದು ಹೆಸರು ಮಾಡಬೇಕೆಂಬವುದು ನನ್ನ ಹೆಬ್ಬಯಿಕೆ. ಮುಂಬರುವ ದಿನಗಳಲ್ಲಿ ಉತ್ತರ ಕರ್ನಾಟಕದ ಕಲಾವಿದರಿಗೆ ನಮ್ಮಲ್ಲಿ ಸ್ಥಾನ ನೀಡಿ ಇಲ್ಲಿಯ ಪ್ರವಾಸೋದ್ಯಮ ಹೆಚ್ಚಿಸಲು ಅನುವು ಮಾಡಿಕೊಡಲಾಗುವುದು. ಎಂದವರು ಹೇಳಿದರು.

ಹಿರಿಯ ರಾಜಕಾರಣಿ ಹಾಗೂ ನೂರ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಅಯಾಜ್ ಖಾನ್ ಮಾತನಾಡಿ, ಝುಯಿದ್ ಖಾನ್ ಒಬ್ಬರ ರಾಜಕಾರಣಿ ಮಗನಾಗಿದ್ದರೂ ಈ ನಾಡಿನ ಬಗ್ಗೆ ದೊಡ್ಡ ಕನಸ್ಸು ಹೊತ್ತಿದ್ದಾರೆ. ಅವರು ರಚಿಸಿರುವ ಕಲ್ಟ್ ಚಲನಚಿತ್ರ ನೋಡಿ ಅವರಿಗೆ ಪ್ರೋತ್ಸಾಹಿಸಬೇಕೆಂದು ಕರೆ ಕೊಟ್ಟರು.

ಎನ್.ಎಸ್.ಯು.ಐ ರಾಷ್ಟ್ರೀಯ ಸಂಘಟಕ ಫಿರೋಜ್ ಖಾನ್, ನಗರ ಸಭೆ ಅಧ್ಯಕ್ಷ ಮಹಮ್ಮದ್ ಗೌಸೊದ್ದಿನ್, ನಗರ ಸಭೆ ಸದಸ್ಯ ನವಾಜ್ ಪ್ರಾಚಾರ್ಯ ಡಾ.ಯುಸುಫ್ ಖಾನ್, ಕಾಂಗ್ರೆಸ್ ಯುವ ಮುಖಂಡ ಇಮ್ರಾನ್ ಖಾನ್, ಹಾಸ್ಯನಟ ಅಕ್ಬರ್ ಬಿನ್ ಕವರ್, ಕೆಪಿ ಸುದ್ದಿವಾಹಿನಿಯ ಸಿಇಒ ಸಮಿರ್ ಖಾನ್, ಹ್ಯಾರಿಸ್ ಹಾಗೂ ಇತರರು ಪತ್ರಿಕಾಗೋಷ್ಟಿಯಲ್ಲಿದ್ದರು.

# ರಿಮ್ಸ್ ಆಸ್ಪತ್ರೆ ಶ್ರದ್ಧಾಂಜಲಿ ವಾಹನ ಚಾಲಕನನ್ನು ಸೇವೆಯಿಂದ ವಜಾಕ್ಕೆ ಒತ್ತಾಯ



• **ಮಲ್ಲಮ್ಮ ನುಡಿ ವಾರ್ತೆರಾಯಚೂರು:**

ಹೊರಗುತ್ತಿಗೆ ಅವಧಿ ಮುಗಿದರೂ ಅನಧಿಕೃತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ರಿಮ್ಸ್ ಶ್ರದ್ಧಾಂಜಲಿ ವಾಹನ ಚಾಲಕನನ್ನು ಸೇವೆಯಿಂದ ತಕ್ಷಣ ವಜಾಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಮಾಜಿಕ ಹೋರಾಟಗಾರ ಅಂಬಾಜಿ ರಾವು ಮೈದರ್ಕರ್ ಒತ್ತಾಯಿಸಿದರು.

ಅವರಿಂದು ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,ರಾಯಚೂರು ವೈದ್ಯಕೀಯ ವಿಜ್ಞಾನಗಳ ಸ್ವಾಯತ್ತತೆ ಸಂಸ್ಥೆ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಮೃತದೇಹ ಸಾಗಣೆಗೆ ಬಳಸಲಾಗುವ ಶ್ರದ್ಧಾಂಜಲಿ ವಾಹನವು ಸಾರ್ವಜನಿಕರಿಗೆ ಉಚಿತ ಸೇವೆ ನೀಡಬೇಕಾದ ಅತ್ಯಂತ ಸಂವೇದನಾಶೀಲ ಸೇವೆಯಾಗಿದೆ. ಆದರೆ ದುರದೃಷ್ಟವಶಾತ್, ಈ ವಾಹನದ ಚಾಲಕನಾದ ಅಬ್ದುಲ್ ಮತೀನ್ ಎಂಬ ವ್ಯಕ್ತಿ ಈ ಸೇವೆಯನ್ನು ದುರುಪಯೋಗಪಡಿಸಿಕೊಂಡು, ಸಾರ್ವಜನಿಕರಿಂದ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾನೆಂದು ಆರೋಪಿಸಿದರು.

ಈತನು ಎ.ಆರ್.ಸಿ ಸಂಸ್ಥೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದನು. ಆಗಸ್ಟ್ 30 ರಂದು ಸದರಿ ಗುತ್ತಿಗೆ ಅವಧಿ ಸಂಪೂರ್ಣ ಮುಕ್ತಾಯಗೊಂಡಿದೆ.ಗುತ್ತಿಗೆ ನವೀಕರಣವಾಗುವವರೆಗೆ ಕೆಲಸ ನಿರ್ವಹಿಸಬಾರದು ಎಂದು ಸಂಸ್ಥೆಯೇ ಸ್ಪಷ್ಟ ಸೂಚನೆ ನೀಡಿದ್ದರೂ ಸಹ,ಈತನು ಯಾವುದೇ ಅಧಿಕೃತ ಆದೇಶವಿಲ್ಲದೆ ಇಂದಿಗೂ ಕರ್ತವ್ಯ ನಿರ್ವಹಿಸುತ್ತಿರುವುದು ಕಾನೂನುಬಾಹಿರವಾಗಿದೆ ಎಂದರು. ಈ ಚಾಲಕನ ವಿರುದ್ಧ ಅನೇಕ ಲಿಖಿತ ದೂರುಗಳು, ಸಾರ್ವಜನಿಕರಿಂದ ಹಣ ಪಡೆದಿರುವ ದಾಖಲೆಗಳು, ಹಾಗೂ ಈ ಕುರಿತು ಆಡಳಿತಕ್ಕೆ ಸಲ್ಲಿಸಿದ ಸ್ಪಷ್ಟ ಮನವಿಗಳು ಇದ್ದರೂ,ರಿಮ್ಸ್ ಆಡಳಿತವು ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದೆ ಮೌನ ವಹಿಸಿರುವುದು ಗಂಭೀರ ಅನುಮಾನಗಳಿಗೆ ಎಡೆಮಾಡಿಕೊಡುತ್ತದೆ ಎಂದರು. ಗುತ್ತಿಗೆ ಅವಧಿ ಮುಗಿದ ವ್ಯಕ್ತಿಗೆ ಯಾರು ರಕ್ಷಣೆ ನೀಡುತ್ತಿದ್ದಾರೆ?ಯಾರ ಅನುಮತಿಯೊಂದಿಗೆ ಈತನು ಕೆಲಸ ಮಾಡುತ್ತಿದ್ದಾನೆ? ಇದು ಆಡಳಿತದ ನಿರ್ಲಕ್ಷ್ಯವೋ ಅಥವಾ ಒಳಜಾಣ ಬೆಂಬಲವೋ? ಎಂದು ಪ್ರಶ್ನಿಸಿದರು.

ಗುತ್ತಿಗೆ ಅವಧಿ ಮುಗಿದರೂ ಕರ್ತವ್ಯ ನಿರ್ವಹಿಸುತ್ತಿರುವ ಅಬ್ದುಲ್ ಮತೀನ್‌ನನ್ನು ತಕ್ಷಣವೇ ವಜಾಗೊಳಿಸಬೇಕು. ಸಾರ್ವಜನಿಕರಿಂದ ಅಕ್ರಮವಾಗಿ ಹಣ ವಸೂಲಿ ಮಾಡಿದ ಆರೋಪದ ಕುರಿತು ಕಾನೂನು ಕ್ರಮ ಕೈಗೊಳ್ಳಬೇಕು.. ಈತನನ್ನು ಯಾವುದೇ ಕಾರಣಕ್ಕೂ ಮತ್ತೆ ಕೆಲಸಕ್ಕೆ ನಿಯೋಜಿಸಬಾರದು.

ಈ ವಿಷಯದಲ್ಲಿ ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳ ಪಾತ್ರದ ಮೇಲೂ ಉನ್ನತ ಮಟ್ಟದ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು. ಒಂದು ವೇಳೆ ಈ ವಿಷ ಯವನ್ನೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದೇ ನಿರ್ಲಕ್ಷ್ಯ ತೋರಿದರೆ, ಈ ಪ್ರಕರಣವನ್ನು ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಇಲಾಖೆ ಮೇಲಾಧಿಕಾರಿಗಳು, ಹಾಗೂ ಅಗತ್ಯವಿದ್ದಲ್ಲಿ ಭ್ರಷ್ಟಾಚಾರ ನಿಗ್ರಹ ಸಂಸ್ಥೆ ಮತ್ತು ಮಾನವ ಹಕ್ಕು ಆಯೋಗಕ್ಕೂ ದೂರು ನೀಡಲಾಗುವುದೆಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಮಸೂದ್ ಅಲಿ,ಕಿಶನ್ ಕುಮಾರ್, ಇಬ್ರಾಹಿಂ,ಅರ್ಷಾದ್ ಉಪಸ್ಥರಿದ್ದರು.

# ಜಾತ್ರೆಗೆ 4 ಸಾವಿರ ಹೋಳಿಗೆ 15 ಸಾವಿರ ರೊಟ್ಟಿ



• **ಮಲ್ಲಮ್ಮ ನುಡಿ ವಾರ್ತೆ ಮಸ್ಕಿ :**

**ವರದಿ : ಎಂ.ಕೆ.ಬಾಗವಾನ್**

ಕೊಪ್ಪಳದ ಗವಿಸಿದ್ದೇಶ್ವರ ಮಠ ನಾಡಿಗೆ ಪ್ರಸಿದ್ಧಿ ಪಡೆದಿದೆ. ಗವಿಮಠದ 18 ನೇ ಪಿಠಾಧೀಪತಿ ಅಭಿನವ ಗವಿ ಸಿದ್ದೇಶ್ವರ ಶ್ರೀಗಳು ತಮ್ಮ ಪ್ರವಚನ, ಸಾಮಾಜಿಕ ಕಳಕಳಿ ಕಾರ್ಯಗಳ ಮೂಲಕ ಜನರ ಹೃದಯ ಮಂದಿರದಲ್ಲಿ ನೆಲಸಿದ್ದಾರೆ. ಅಜ್ಜನ ಜಾತ್ರೆಯ ಸಂಭ್ರಮದ ದಿನ ಜನವರಿ 05 ಕ್ಕೆ ಬಂದೇ ಬಿಟ್ಟಿದೆ ಲಕ್ಷಾಂತರ ಜನ ಸೇರಿ ಆಚರಣೆ ಮಾಡುವ ಗವಿಸಿದ್ದೇಶ್ವರ ಜಾತ್ರೆ ಕಲ್ಯಾಣ ಕರ್ನಾಟಕ ಮತ್ತು ಉತ್ತರ ಕರ್ನಾಟಕ ಭಾಗದ ಅತಿದೊಡ್ಡ ಹಬ್ಬ. ಸಾತ್ವಿಕ ರೀತಿಯಲ್ಲಿ, ಭಕ್ತರ ಹಿಡಿ ಕೊಡುಗೆಯನ್ನೇ ಮಹಾ ಎಂಬಂತೆ ಸ್ವೀಕರಿಸಿ ಸಮಸ್ತರಿಗೆ ಹಂಚುವ ಮಹತ್ಕಾರ್ಯ ಈ ಉತ್ಸವದಲ್ಲಿ ನಡೆಯುತ್ತದೆ.ಇಲ್ಲಿ ನಾನು ನೀನು ಎಂಬ ಬೇಧವಿಲ್ಲ. ಮೌಢ್ಯಕ್ಕೆ ಅವಕಾಶವಿಲ್ಲ. ದೇವರ ಹೆಸರಿನಲ್ಲಿ ಎಲ್ಲಾ ಜಾತಿ ಬಾಂಧವರು ಸೇರಿ ಅಜ್ಜನ ತೇರು ಎಳೆಯುವುದು ನೋಡುವುದೇ ಒಂದು ಸಂಭ್ರಮ ಸಡಗರ. ಜನವರಿ 05 ರಂದು ಗವಿಸಿದ್ದೇಶ್ವರ ಮಠದ ಮಹಾ ರಥೋತ್ಸವ ನಡೆಯುತ್ತದೆ. ಮಠದ ಅಧಿಕೃತ ಉತ್ಸವ ಕೇವಲ ಹನ್ನೆರಡು ದಿನಗಳಾದರೂ ತಿಂಗಳುಗಳ ಕಾಲ ಜಾತ್ರೆಯ ಸಂಭ್ರಮ ಇಲ್ಲಿ ಇರುತ್ತದೆ. ಈ ಜಾತ್ರೆಗೆ ಬರುವವರೆಷ್ಟೋ, ಹೋದವರೆಷ್ಟೋ ಲೆಕ್ಕ ಇಟ್ಟವರಿಲ್ಲ. ಬಂದವರಿಗೆ ದಾಸೋಹಕ್ಕೆ ಕೊರತೆ ಇಲ್ಲ.

**ಜಾತ್ರೆಯ ವಿಶೇಷತೆ**

ಕೊಪ್ಪಳ ಗವಿಮಠದ ಜಾತ್ರೆ ಸುಮಾರು 1 ತಿಂಗಳು ನಡೆಯುತ್ತದೆ. ಪ್ರತಿದಿನ ದಾಸೋಹವೂ ಇರುತ್ತದೆ. ವಿಶೇಷ ದಾಸೋಹಕ್ಕಾಗಿ ಸುತ್ತಲಿನ ಜನರು ದವಸ–ಧಾನ್ಯ ನೀಡುತ್ತಾರೆ. ರೊಟ್ಟಿ, ಸಿಹಿತಿಂಡಿಗಳನ್ನೂ ಮಠಕ್ಕೆ ಅರ್ಪಿಸುತ್ತಾರೆ. ಒಟ್ಟಾರೆ ಒಂದು ತಿಂಗಳ ಕಾಲ ಉತ್ಸವ–ದಾಸೋಹದ ಸಂಭ್ರಮ ನಿರಂತರವಾಗಿ ಇರುತ್ತದೆ.

ಇದರ ಅಂಗವಾಗಿ ಮಸ್ಕಿ ಪಟ್ಟಣ ಸೇರಿದಂತ ತಾಲೂಕಿನಾದ್ಯಾಂತ ತಯಾರಿ ಕಾರ್ಯಗಳು ಭರದಿಂದಸಾಗಿವೆ. ಕೊಪ್ಪಳದ ಗವಿಸಿದ್ದೇಶ್ವರ ಅಜ್ಜನ ಜಾತ್ರೆಗೆ ರೊಟ್ಟಿ ಸೇರಿದಂತೆ ಹೋಳಿಗೆಯನ್ನು ಭಕ್ತರು ಪ್ರತಿ ವರ್ಷವೂ ತಪ್ಪದೇ ಕಳಿಸುತ್ತಾರೆ. ಅದರಂತೆ ಈ ವರ್ಷವೂ ಸಹ ಇಲ್ಲಿನ ಭಕ್ತಾದಿಗಳು ಅಜ್ಜನ ಜಾತ್ರೆಗಾಗಿ ರೊಟ್ಟಿಗಳು ಮಾಡುವುದರಲ್ಲಿ ನಿರತರಾಗಿದ್ದಾರೆ. ಕೊಪ್ಪಳದ ಗವಿಸಿದ್ದೇಶ್ವರ ಮಠದ ಮಹಾರಥೋತ್ಸವಕ್ಕಾಗಿ ಬರುವ ಭಕ್ತರ ದಾಸೋಹಕ್ಕಾಗಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಜಾತ್ರೆಯ ನಿಮಿತ್ಯ ಪಟ್ಟಣದ ಕೊಪ್ಪಳ ಗವಿ ಸಿದ್ದೇಶ್ವರ ಸೇವಾ ಸಮಿತಿ,ಯುವ ಬಿ ಗ್ರೇಡ್ ವತಿಯಿಂದ 4 ಸಾವಿರ ಶೇಂಗಾ ಹೋಳಿಗೆ, 15, ಸಾವಿರ ಜೋಳದ ರೊಟ್ಟಿ, ಹಾಗೂ ಮಲ್ಲಿಕಾರ್ಜುನ ದೇವಸ್ಥಾನದ ಸಮಿತಿ ಮತ್ತು ಪೂಜಾರಿ ಪೇಟೆಯ ಮಹಿಳೆಯರು ಸೇರಿ 21ಕೆ.ಜಿ, ಶೇಂಗಾ ಹೋಳಿಗೆ ಯನ್ನು ಸೇರಿದಂತೆ ದವಸ ಧಾನ್ಯಗಳನ್ನು ಮಸ್ಕಿ ತಾಲ್ಲೂಕಿನ ಭಕ್ತ ಗಣದಿಂದ ಸಮರ್ಪಣೆ ಮಾಡಲಾಗುತ್ತದೆ.

# ಸಸ್ತಾಪುರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಕಲಿಕಾ ಹಬ್ಬ.



• **ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ :**

ತಾಲೂಕಿನ ಸಸ್ತಾಪೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಎಫ್ ಎಲ್ ಎನ್ ಮಕ್ಕಳಿಗಾಗಿ ಕಲಿಕಾ ಹಬ್ಬ " ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಪಿ. ಡಿ . ಓ. ರಮೇಶ್ ರಾಠೋಡ್ ಮಾತನಾಡಿ ಶಾಲೆಗೆ ದಾಖಲಾದ ಪ್ರತಿಯೊಂದು ಮಗು ಕನಿಷ್ಠ ಓದು, ಬರಹ, ಲೆಕ್ಕಾಚಾರ ಕಲಿಯಲೇ ಬೇಕು, ಇಂಥ ಕಾರ್ಯಕ್ರಮಗಳಿಂದ ಮಕ್ಕಳಿಗೆ ಪ್ರೋತ್ಸಾಹ ದೊರೆಯುತ್ತದೆ ಎಂದರು. ಶಾಲೆಯ ಮುಖ್ಯ ಗುರುಗಳಾದ ಮೋನಪ್ಪ ಕೆ ಪಂಚಾಳ್ ಅಧ್ಯಕ್ಷತೆ ವಹಿಸಿದ್ದರು. ಸಿ. ಅರ್. ಪಿ. ಹುಲೆಪ್ಪ ರವರು ಪ್ರಾಸ್ತವಿಕ ನುಡಿಗಳನ್ನು ನುಡಿದರು.

ಅತಿಥಿಗಳಾಗಿ ಗ್ರಾಮ ಪಂಚಾಯತ್ ಸದಸ್ಯರು ಜಯಕುಮಾರ್. ಆನಂದ್ ಗಾಯಕವಾಡ, ಫಿರೋಜ್ ಪಟೇಲ್, ಸತ್ಯವತಿ ಎಸ್ ಸಿಂಧೆ ಹಾಗೂ ಎಸ್ ಡಿ ಎಂ ಸಿ ಸದಸ್ಯರು

ಹಾಗೂ ರಾಜಮತಿ ಕೊರಾಳೆ ಕ. ರಾ. ಪ್ರಾ. ಶಾ. ಶಿ. ಸಂಘ ಜಿಲ್ಲಾ ಸಂಘಟನಾ ಕಾರ್ಯದರ್ಶಿಗಳು, ಕ್ಲಸ್ಟರ್ ಅಧೀನ ಎಲ್ಲಾ ಮುಖ್ಯ ಗುರುಗಳು ಹಾಗೂ ಸಹ ಶಿಕ್ಷಕರು,ಪೋಷಕರು,

ಮಕ್ಕಳು ಸೇರಿದಂತೆ ಅನೇಕರು ಭಾಗವಹಿಸಿದರು. ಕ್ಷೇಮಲಿಂಗ ವಂದಿಸಿದರು.

# ಆರ್.ಡಿ.ಪಿ.ಆರ್ ಇಲಾಖೆಯ ಕ್ರೀಡಾಕೂಟ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ :**

ಜಿಲ್ಲಾಪಂಚಾಯತ,ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಎಲ್ಲ ವೃಂದ ಸಂಘಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಡಿಸೆಂಬರ 25 ರಿಂದ 27 ವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳಿಗೆ ಕ್ರೀಡಾ–ಕೂಟ, ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಡಿಸೆಂಬರ 25 ರಂದು ಬೆಳಿಗ್ಗೆ 9 ಗಂಟೆಗೆ ನವಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಕ್ರೀಡಾಕೂಟಗಳಿಗೆ ಚಾಲನೆ ನೀಡಲಿದ್ದಾರೆ. ಕ್ರೀಡಾ ಧ್ವಜಾರೋಹಣವನ್ನು ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ಜಿ.ಪಂ ಸಿಇಓ ಶಶಿಧರ ಕುರೇರ ವಹಿಸಲಿದ್ದಾರೆ. ಕ್ರೀಡಾಜ್ಯೋತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ರುಥ್ರೇನ್ ಸ್ವೀಕರಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿ.ಪಂ ಉಪಕಾರ್ಯದರ್ಶಿ ಎನ್.ವಾಯ್.ಬಸರಿಗಿಡದ, ಮುಖ್ಯ ಲೆಕ್ಕಾಧಿಕಾರಿ ಸಿದ್ರಾಮೇಶ್ವರ ಉಕ್ಕಲಿ, ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು ಅಲ್ಲಾಪೂರ, ಯೋಜನಾ ನಿರ್ದೇಶಕ ಎಸ್.ಎಂ.ಕಾಂಬಳೆ ಸೇರಿದಂತೆ ಇತರೆ ಗಣ್ಯಮಾನ್ಯರು ಭಾಗವಹಿಸಲಿದ್ದಾರೆ.

# ರೈತರ ಪಹಣಿ ಸಮಸ್ಯೆ ಬೇಗ ಇತ್ಯರ್ಥಪಡಿಸಿ: ಶಾಸಕ ಪ್ರಭು ಚವ್ಹಾಣ



ಔರಾದ (ಬಿ) ತಾಲ್ಲೂಕಿನ ಇಟಗ್ಯಾಳ, ನಾಗನಪಲ್ಲಿ, ಚಿಂತಾಕಿ, ಬೆಲ್ದಾಳ, ಗುಡಪಳ್ಳಿ, ಮೆಡಪಳ್ಳಿ, ಉಜನಿ ಸುಂಕನಾಳ ಹಾಗೂ ಚಿಕ್ಲಿ(ಜೆ)ನಲ್ಲಿ ಡಿ.24ರಂದು ಗ್ರಾಮ ಸಂಚಾರ ನಡೆಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು. ಇಟಗ್ಯಾಳ, ನಾಗನಪಲ್ಲಿ, ಚಿಂತಾಕಿ, ಬೆಲ್ದಾಳ ಸೇರಿದಂತೆ ಹಲವು ಗ್ರಾಮಗಳಲ್ಲಿನ ರೈತರ ಪಹಣಿಗಳಲ್ಲಿ ಕಾಣಿಸಿರುವ ದೋಷದಿಂದಾಗಿ ಸಾಕಷ್ಟು ಸಮಸ್ಯೆ ಎದುರಿಸುತ್ತಿದ್ದೇವೆ ಎಂದು ಸಾರ್ವಜನಿಕರು ಶಾಸಕರ ಗಮನಕ್ಕೆ ತಂದರು. ಪಹಣಿಯಲ್ಲಿ ರೈತರ ಹೆಸರು ಬದಲಾಗಿರುವುದು, ಊರಿನ ಹೆಸರು ಮತ್ತು ಮಾಲೀಕರ ಹೆಸರುಗಳ ಕಾಗುಣಿತಗಳು ತಪ್ಪಾಗಿರುವುದರಿಂದ ಬೆಳೆ ಹಾನಿ ಪರಿಹಾರ, ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ, ಬೆಳೆ ವಿಮೆ ಹೀಗೆ ಯಾವುದೇ ರೀತಿಯ ಸೌಲಭ್ಯಗಳು ಸಿಗುತ್ತಿಲ್ಲ. ಸಮಸ್ಯೆ ಸರಿಪಡಿಸಿಕೊಡುವಂತೆ ತಹಸೀಲ್ ಕಛೇರಿಗೆ ಅಲೆದು ಸಾಕಾಗಿದೆ ಎಂದು ರೈತರು ತಮ್ಮ ಅಳಲನ್ನು ತೋಡಿಕೊಂಡರು.

ಸ್ಥಳದಲ್ಲಿದ್ದ ಕಂದಾಯ ನಿರೀಕ್ಷಕರಿಂದ ಶಾಸಕರು ರೈತರ ಸಮಸ್ಯೆಗಳ ಬಗ್ಗೆ ವಿವರಣೆ ಕೇಳಿದಾಗ, ಇಲಾಖೆಯಿಂದಲೇ ಈ ರೀತಿಯ ಸಮಸ್ಯೆಯಾಗಿರುವುದು ಕಂಡುಬಂದಿದೆ. ಇದನ್ನು ಸರಿಪಡಿಸುತ್ತೇವೆ ಎಂದು ತಿಳಿಸಿದರು. ಇದು ಒಂದು ಗ್ರಾಮದ ಸಮಸ್ಯೆಯಲ್ಲ. ಗ್ರಾಮ ಸಂಚಾರದಲ್ಲಿ ಪ್ರತಿ ಊರಿನಲ್ಲಿ ರೈತರು ಈ ಸಮಸ್ಯೆಯ ಬಗ್ಗೆ ಮಾತನಾಡುತ್ತಿದ್ದಾರೆ. ಇದು ರೈತರ ಬಹುದೊಡ್ಡ ಸಮಸ್ಯೆಯಾಗಿ ಪರಿಣಮಿಸಿದ್ದು, ಪ್ರತಿದಿನ ಒಂದಿಲ್ಲೊಂದು ಗ್ರಾಮದ ರೈತರು ಪಹಣಿ ದೋಷದ ಬಗ್ಗೆ ತಿಳಿಸುತ್ತಿದ್ದಾರೆ. ರೈತರು ತುಂಬಾ ಅಮಾಯಕರು. ಅವರಿಗೆ ಕೃಷಿಯನ್ನು ಬಿಟ್ಟು ಬೇರೆ ಏನು ಗೊತ್ತಾಗುವುದಿಲ್ಲ. ಇಲಾಖೆಯಿಂದ ಆದ ಸಮಸ್ಯೆಗೆ ರೈತರನ್ನೇಕೆ ಸಂಕಷ್ಟಕ್ಕೆ ಸಿಲುಕಿಸುತ್ತಿದ್ದೀರಿ ? ರೈತರಿಗೆ ಪ್ರತಿದಿನ ಕಛೇರಿಗೆ ಅಲೆದಾಡಲು ಸಾಧ್ಯವಾಗುವುದಿಲ್ಲ. ಇಲಾಖೆಯ ಅಧಿಕಾರಿಗಳು ಬೇಗ ಸಮಸ್ಯೆಗೆ ಪರಿಹಾರ ಒದಗಿಸಬೇಕು. ತಹಸೀಲ್ದಾರರು ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಭೆ ನಡೆಸಿ ತುರ್ತಾಗಿ ಪಹಣಿ ಸಮಸ್ಯೆ ಸರಿಪಡಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಿರ್ದೇಶನ ನೀಡಿದರು. ಬಹಳಷ್ಟು ಗ್ರಾಮಗಳಲ್ಲಿ ಬೆಳೆ ಹಾನಿ ಪರಿಹಾರ ಹಾಗೂ ಬೆಳೆ ವಿಮೆಯ ಹಣ ಪಾವತಿಯಾಗಿಲ್ಲವೆಂದು ರೈತರು ರೈತರು ಶಾಸಕರಿಗೆ ತಿಳಿಸಿದಾಗ ರೈತರಿಗೆ ಡಿಬಿಟಿ ಮೂಲಕ ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಪರಿಹಾರದ ಮೊತ್ತ ಜಮೆ ಮಾಡಲಾಗುತ್ತಿದೆ. ಎಫ್‌ಐಡಿ ಸಂ–ಖ್ಯೆ ಹೊಂದಿಲ್ಲದವರು, ಕೆವೈಸಿ ಅಪಡೇಟ್ ಆಗಿಲ್ಲದ ಮತ್ತು ಹೆಸರು ಹೊಂದಾಣಿಕೆ ಆಗದ ಕೆಲವು ರೈತರಿಗೆ ಸರ್ಕಾರದ ಬೆಳೆ ಹಾನಿ ಪರಿಹಾರ ಸಿಕ್ಕಿಲ್ಲ. ಸಣ್ಣ ಪುಟ್ಟ ಲೋಪಗಳನ್ನು ಸರಿಪಡಿಸಿಕೊಂಡರೆ ಹಣ ಜಮೆಯಾಗುತ್ತದೆ ಎಂದು ಅಧಿಕಾರಿಗಳು ರೈತರಿಗೆ ಮಾಹಿತಿ ನೀಡಿದರು. ಕೃಷಿ, ಕಂದಾಯ, ತೋಟಗಾರಿಕೆ ಹಾಗೂ ಕೆಲವು ಇಲಾಖೆಗಳಲ್ಲಿ ರೈತರ ಕೆಲಸಗಳು ಹೆಚ್ಚಿನ ಪ್ರಮಾಣದಲ್ಲಿರುತ್ತವೆ. ರೈತರು ಕಛೇರಿಗೆ ಬಂದಾಗ ಅಧಿಕಾರಿಗಳು ಮತ್ತು ಸಿಬ್ಬಂದಿ ಸೌಜನ್ಯದಿಂದ ವ್ಯವಹರಿಸಬೇಕು. ಅವರಿಗೆ ವಿನಾ ಕಾರಣ ಸತಾಯಿಸದೇ ಬೇಗ ಕೆಲಸ ಮಾಡಿಕೊಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಗ್ರಾಮ ಸಂಚಾರದ ಸಂದರ್ಭದಲ್ಲಿ ಶಾಲೆ, ಅಂಗನವಾಡಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ವ್ಯವಸ್ಥೆಯನ್ನು ಪರಿಶೀಲಿಸಿದರು. ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸಬೇಕು. ಸರಿಯಾದ ಬಿಸಿಯೂಟ ನೀಡಬೇಕು ಎಂದು ನಿರ್ದೇಶನ ನೀಡಿದರು. ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ: ನಾಗನಪಲ್ಲಿ ಎಸ್ಸಿ ವಾರ್ಡ್‌ನಲ್ಲಿ 25 ಲಕ್ಷದ ಸಿಸಿ ರಸ್ತೆ, ಚಿಂತಾಕಿ ಎಸ್ಸಿ ಓಣಿಯಲ್ಲಿ 25 ಲಕ್ಷದ ಸಿಸಿ ರಸ್ತೆ, 3.50 ಲಕ್ಷದ ಹೈಮಾಸ್ಟ್ ವಿದ್ಯುತ್ ದೀಪ, ಗುಡಪಳ್ಳಿಯಲ್ಲಿ 15 ಲಕ್ಷದ ಸಿಸಿ ರಸ್ತೆ, ಗೋಪಿನಾಯಕ ತಾಂಡಾ ಮೆಡಪಳ್ಳಿಯಲ್ಲಿ 20 ಲಕ್ಷದ ಸಿಸಿ ರಸ್ತೆ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಗಾಯತ್ರಿ, ಲೋಕೋಪಯೋಗಿ ಇಲಾಖೆ ಎಇಇ ಪ್ರೇಮಸಾಗರ, ಪಂಚಾಯತ ರಾಜ್ ಎಂಜಿನಿಯರಿಂಗ್ ಇಲಾಖೆ ಎಇಇ ಸುನೀಲ ಚಿಲ್ಲರ್ಗೆ, ಜೆಸ್ಕಾಂ ಎಇಇ ರವಿ ಕಾರಬಾರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಇಇ ಮಾರುತಿ ರಾಠೋಡ, ಸಣ್ಣ ನೀರಾವರಿ ಇಲಾಖೆಯ ಎಇಇ ಸಂಗಮೇಶ ಖಳೂರೆ, ಅಕ್ಷರ ದಾಸೋಹ ಯೋಜನೆಯ ಧೂಳಪ್ಪ, ಪಿಎಂಜಿಎಸ್‌ವೈ ಎಇಇ ಸುಭಾಷ ವಾಗಮಾರೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಇಮಲಪ್ಪ, ಮುಖಂಡರಾದ ವಸಂತ ಬಿರಾದಾರ, ಶಿವಾಜಿರಾವ ಪಾಟೀಲ ಮುಂಗನಾಳ, ಧೊಂಡಿಬಾ ನರೋಟೆ, ರಾಮಶೆಟ್ಟಿ ಪನ್ನಾಳೆ, ಶಿವರಾಜ ಅಲ್ಮಾಜೆ, ಯಾದುರಾವ ಸಗರ, ರಾಮರೆಡ್ಡಿ ಪಾಟೀಲ, ಶಿವಾಜಯ ಬಿರಾದಾರ, ರವೀಂದ್ರ ರೆಡ್ಡಿ ಉಜನಿ, ಈರಾರೆಡ್ಡಿ ನಾಗನಪಲ್ಲಿ, ರಾವಸಾಬ ಪಾಟೀಲ, ಶರಣು ಪಾಟೀಲ, ಪ್ರಕಾಶ ಮೇತ್ರೆ, ಮಾರುತಿರೆಡ್ಡಿ ಪಟ್ನೆ, ಗೋವಿಂದ ರೆಡ್ಡಿ, ಸಂಜು ಉಪ್ಪಾರ, ಸಂಜುರೆಡ್ಡಿ, ಶಿವಾರೆಡ್ಡಿ, ವಿಠಲರೆಡ್ಡಿ, ಪ್ರಕಾಶ ಬೇರಕೂರೆ, ದೀಪಕ ಸಜ್ಜನಶೆಟ್ಟಿ, ಉದಯ ಸೋಲಾಪೂರೆ, ಪ್ರಕಾಶ ಜೀರ್ಗೆ, ಪ್ರಕಾಶ ಜೀರ್ಗೆ, ಪ್ರದೀಪ ಪವಾರ, ಧನಾಜಿ ರಾಠೋಡ, ವಿಲಾಸ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಅಭಿವ್ಯಕ್ತಿ ಸ್ವಾತಂತ್ರ್ಯ ದುರ್ಬಲಗೊಳಿಸುವ ಹುನ್ನಾರ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರು ಸಂವಿಧಾನದಲ್ಲಿ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದುರ್ಬಲಗೊಳಿಸುವ ಹುನ್ನಾರ ಕಾಂಗ್ರೆಸ್ ಸರ್ಕಾರದ ವತಿಯಿಂದ ನಡೆಯುತ್ತಿದೆ ಎಂದು ಬಿಜೆಪಿ ಮುಖಂಡರೂ ಆದ ಮಾಜಿ ಶಾಸಕ ಪ್ರಕಾಶ ಖಂಡ್ರೆ ಆರೋಪಿಸಿದರು ಅಂಬೇಡ್ಕರ್ ವೃತ್ತದಲ್ಲಿ ಬಿಜೆಪಿ ಪಕ್ಷದ ವತಿಯಿಂದ ಕಾಂಗ್ರೆಸ್ ಸರ್ಕಾರ ತರುತ್ತಿರುವ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ವಿಧೇಯಕ 2025ರ ವಿರುದ್ಧ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಈ ಹಿಂದೆ ಇಂದಿರಾಗಾಂಧಿ ಅವರು ಎಮರ್ಜೆನ್ಸಿ ಘೋಷಿಸುವ ಮೂಲಕ ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಕಬಳಿಸಿ ಲಕ್ಷಾಂತರ ಜನರಿಗೆ ಜೈಲಿಗೆ ಕಳಿಸಿ ಸಂವಿಧಾನದ ವಿರುದ್ಧ ನಡೆದುಕೊಂಡಿದ್ದರು. ಈಗ ಕಾಂಗ್ರೆಸ್ ಸರ್ಕಾರ ಅದೇ ರೀತಿ ಜನರ ಅಭಿವ್ಯಕ್ತಿ ಸ್ವಾತಂತ್ರ್ಯ ಕಬಳಿಸಿ ರಾಜ್ಯದಲ್ಲಿ ಮತ್ತೊಮ್ಮೆ ಎಮರ್ಜೆನ್ಸಿ ತಂದು ಸರ್ಕಾರದ ವಿರುದ್ಧ ಮಾತನಾಡುವ ಜನರಿಗೆ ಜೈಲಿಗೆ ಕಳುಹಿಸುವ ಹುನ್ನಾರ ಮಾಡುತ್ತಿದೆ ಎಂದು ದೂರಿದರು. ರಾಜ್ಯಪಾಲರಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಗೆ ಸಲ್ಲಿಸಲಾಯಿತು. ಮಂಡಲ ಅಧ್ಯಕ್ಷ ವೀರಣ್ಣ ಕಾರಬಾರಿ, ಪ್ರಮುಖರಾದ ಕಿಶನರಾವ್ ಪಾಟೀಲ ಮಾತನಾಡಿದರು. ಪಂಡರಿ ಮೇತ್ರೆ, ಗೋವಿಂದರಾವ್ ಬಿರಾದಾರ, ಕೆ. ಡಿ. ಗಣೇಶ, ಜೈ ಭೀಮ್ ಬಂಧು, ಬಾಬುರಾವ್ ಧೂಪೆ, ಜಗನ್ನಾಥ ಬಿರಾದಾರ, ಸುಭಾಷ ಬಿರಾದರ, ಸುರೇಶ್ ಹುಬ್ಬೀಕರ್, ಸಂಜೀವ ಸಿಂಧೆ, ಪುಂಡಲಿಕರಾವ್ ಪಾಟೀಲ, ಧೋಂಡಿಬಾ ಸೂರ್ಯವಂಶಿ, ವಿಜಯಕುಮಾರ ಕೋಳಿ, ಜಮೀಲ್ ಇನಾಮದಾರ್, ಸಿದ್ದು ಕಾಡಾದಿ, ಸಂತೋಷ ಪಾಟೀಲ, ಲಕ್ಷ್ಮಣ ಮುದಾಳೆ. ಡಾ. ಜಗದೀಶ ಭೂರೆ ಸೇರಿದಂತೆ ಅನೇಕರು ಇದ್ದರು.

# ಕನ್ನಡ ಕೈಪಿಡಿ ಬಳಸಿ ಹೆಚ್ಚು ಅಂಕ ಗಳಿಸಿ: ಬೂದೆಪ್ಪ



• **ಮಲ್ಲಮ್ಮ ನುಡಿ ವಾರ್ತೆ ಸುರಪುರ :**

ದ್ವಿತೀಯ ಪಿಯುಸಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳಿಗೆ ಕನ್ನಡ ಸಂಪದ ಕೈಪಿಡಿ ಹೆಚ್ಚಿನ ಅಂಕ ಗಳಿಸಲು ಬಹಳಷ್ಟು ಸಹಕಾರಿಯಾಗಲಿದೆ ಎಂದು ಶೆಟ್ಟಿ ಎಜುಕೇಶನ್ ಟ್ರಸ್ಟ್ ಅಧ್ಯಕ್ಷ ಬೂದೆಪ್ಪ ಎನ್ ಶೆಟ್ಟಿ ಹೇಳಿದರು.ನಗರದ ಶ್ರೀಮತಿ ಎನ್ .ಎನ್. ಶೆಟ್ಟಿ ಪದವಿ ಪೂರ್ವ ವಿಜ್ಞಾನ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕ ನಿಂಗಯ್ಯ ಆರ್ ಕಿಲ್ಲೇದಾರ ರಚಿಸಿರುವ ದ್ವಿತೀಯ ಪಿಯುಸಿ ಕನ್ನಡ ಸಂಪದ ಪರೀಕ್ಷಾ ಕೈಪಿಡಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು ಬೋಧನಾ ಅನುಭವದ ಆಧಾರದ ಮೇಲೆ ರಚನೆಯಾದ ಕನ್ನಡ ಸಂಪದ ಕೈಪಿಡಿ ಕರ್ನಾಟಕದ ಎಲ್ಲಾ ದ್ವಿತೀಯ ಪಿಯುಸಿಯ ವಿದ್ಯಾರ್ಥಿಗಳಿಗೂ ಪ್ರಯೋಜನ ಕಾರಿಯಾಗಿದೆ. ವಿಶೇಷವಾಗಿ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಈ ಪರೀಕ್ಷಾ ಕೈಪಿಡಿಯ ಸದುಪಯೋಗ ಪಡಿಸಿಕೊಂಡು ಈ ಬಾರಿಯ ದ್ವಿತೀಯ ಪಿಯುಸಿ ಫಲಿತಾಂಶವನ್ನು ಹೆಚ್ಚಿಸಿಕೊಳ್ಳಲು ಕರೆ ನೀಡಿದರು.ಸಂಸ್ಥೆಯ ಕಾರ್ಯದರ್ಶಿ ತಿರುಪತಿ ಎನ್ ಶೆಟ್ಟಿ, ಪ್ರಾಂಶುಪಾಲರಾದ ಶ್ರೀಮತಿ ಲಕ್ಷ್ಮಿ ಬಿ ಶೆಟ್ಟಿ, ಪ್ರಧಾನ ಗುರುಗಳಾದ ಶ್ರೀಮತಿಯ ರಾಜೇಶ್ವರಿ ಟಿ.ಶೆಟ್ಟಿ, ಉಪನ್ಯಾಸಕರಾದ ರಾಜಶೇಖರ ದೇಸಾಯಿ ಮಠ, ಶಿವಕುಮಾರ್, ಲಿಂಗರಾಜ್,ಮಹ್ಮದಸಾಥಲಾಯಿತ್, ಸಂಗಮೇಶ್ ಪಾಲ್ಕಿ, ನಿಂಗನಗೌಡ, ಪೂಜಾ , ಸಹನಾ ಉಪಸ್ಥಿತರಿದ್ದರು. ಸಂಗೀತಾ ಹಾಗೂ ಸಂಗಡಿಗರು ಪ್ರಾರ್ಥನಾ ಗೀತೆ ಹಾಡಿದರು ಶಿವಶಂಕರ್ ಮೋಳ್ಕರ್ ನಿರೂಪಿಸಿದರು. ಸಂಜೀವ್ ರೆಡ್ಡಿ ವಂದಸಿದರು.

# ಸಿರಿಧಾನ್ಯ ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ(ಹೊಸಪೇಟೆ):**

ಕೃಷಿ ಇಲಾಖೆಯಿಂದ ಜಿಲ್ಲಾ ಮಟ್ಟದ ಸಿರಿಧ್ಯಾನ ಮತ್ತು ಮರೆತು ಹೋದ ಖಾದ್ಯಗಳ ಪಾಕ ಸ್ಪರ್ಧೆಯನ್ನು ಡಿಸೆಂಬರ್.30 ರಂದು ಬೆಳಿಗ್ಗೆ.10 ಗಂಟೆಗೆ ಎನ್.ಸಿ.ಕಾಲೋನಿ, ನ್ಯಾಷನಲ್ ಕಾಲೇಜ್ ಹಿಂಭಾಗ, ಜಂಟಿ ಕೃಷಿ ನಿರ್ದೇಶಕರ ಕಾರ್ಯಾಲಯದಲ್ಲಿ ಆಯೋಜಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರಾದ ಡಿ.ಟಿ.ಮಂಜುನಾಥ ತಿಳಿಸಿದ್ದಾರೆ.ಸಿರಿಧಾನ್ಯ ಖಾದ್ಯಗಳು, ಸಿರಿಧಾನ್ಯಗಳಾದ ಜೋಳ, ರಾಗಿ, ನವಣೆ, ಸಜ್ಜೆ, ಹಾರಕ, ಬರಗು ಮತ್ತು ಸಾಮೆ ಬೆಳೆಗಳಿಂದ ಸಿಹಿ ಮತ್ತು ಖಾರ ಖಾದ್ಯಗಳನ್ನು ತಯಾರಿಸುವುದು. ಮರೆತು ಹೋದ ಖಾದ್ಯಗಳು, ದೇಸಿ ತಳಿಗಳು ಪೌಷ್ಟಿಕಾಂಶದ ಮೌಲ್ಯ, ಬಳಕೆಯಾಗದ ಬೆಳೆಗಳು, ಮರೆತು ಹೋದ ಆಹಾರಗಳು, ರೈತರ ಸಾಂಪ್ರಾದಾಯಿಕ, ಪರಂಪರೆ ಜಾನಪದ ಪ್ರಭೇದಗಳು ಎಂದೂ ಕರೆಯಲ್ಪಡುವ ದೇಸಿ ತಳಿಗಳು, ಸ್ಥಳೀಯ ಅಥವಾ ಸಾಂಪ್ರದಾಯಿಕ ಕೃಷಿ ಪದ್ಧತಿಯಿಂದ ಅಭಿವೃದ್ಧಿ, ನಿರ್ವಹಿಸಲ್ಪಡುವ ವಿಶಿಷ್ಟ ಗುಣಲಕ್ಷಣಗಳು, ಪೋಷಕಾಂಶಗಳಲ್ಲಿ ಸಮೃದ್ಧ ಮತ್ತು ಭೌಗೋಳಿಕ ಮೂಲಗಳ ಕಾರಣದಿಂದ ಕೆಲವೇ ರೈತರು ಬೆಳೆಯುವ ದೇಸಿ ತಳಿಗಳಿಂದ ತಯಾರಿಸುವ ಖಾದ್ಯಗಳು. ಮರೆತು ಹೋದ ಖಾದ್ಯಗಳಡಿ ಸಿರಿಧಾನ್ಯಗಳನ್ನು ಹೊರತುಪಡಿಸಿ ಇತರೆ ದೇಸಿ ತಳಿಗಳಡಿ ಬರುವ ಆಹಾರ ಮತ್ತು ಎಣ್ಣೆಕಾಳು ಬೆಳೆಗಳ, ತರಕಾರಿ ಮತ್ತು ಹಣ್ಣುಗಳ ಇತ್ಯಾದಿ ಖಾದ್ಯಗಳನ್ನು ತಯಾರಿಸುವುದು, ಪ್ರತಿ ಸ್ಪರ್ಧಿಗೆ ಒಂದೇ ತಿನಿಸು, ಖಾದ್ಯ (ಆಡುಗೆ) ಸಿಹಿ, ಖಾರ ಮತ್ತು ದೇಸಿ ತಳಿಗಳಿಂದ ತಯಾರಿಸುವ ಖಾದ್ಯಗಳ ತಿನಿಸು ಮಾಡಲು ಅವಕಾಶವಿರುತ್ತದೆ. ಜಿಲ್ಲೆಯ ಎಲ್ಲಾ ಸಾರ್ವಜನಿಕರು ಭಾಗವಹಿಸಲು ಅವಕಾಶವಿರುತ್ತದೆ.

# ಮಹಾಸಭಾ ವತಿಯಿಂದ ಡಾ. ಶಾಮನೂರು ಶಿವಶಂಕಪ್ಪಗೆ ನುಡಿ ನಮನ 1000 ವಿದ್ಯಾರ್ಥಿನಿಯರ ಹಾಸ್ಟೆಲ್ ನಿರ್ಮಾಣಕ್ಕೆ ಬದ್ಧ: ಈಶ್ವರ ಖಂಡ್ರೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಬೆಂಗಳೂರಿನಲ್ಲಿ 1000 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನಿರ್ಮಿಸಬೇಕು ಎಂಬುದು ಡಾ. ಶಾಮನೂರು ಶಿವಶಂಕರಪ್ಪ ಆಶಯವಾಗಿತ್ತು, ಈ ಕನಸು ನನಸು ಮಾಡಲು ನಾವು ಬದ್ಧ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದ್ದಾರೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಬೆಂಗಳೂರಿನ ತರಳಬಾಳು ಭವನದಲ್ಲಿ ಆಯೋಜಿಸಿದ್ದ ಡಾ. ಶಾಮನೂರು ಶಿವಶಂಕರಪ್ಪ ನುಡಿನಮನದಲ್ಲಿ ಮಾತನಾಡಿದ ಅವರು, ಇದಕ್ಕಾಗಿ 2 ಎಕರೆ ಜಮೀನು ಖರೀದಿಸಲಾಗಿದ್ದು, ರೂಪುರೇಶೆ ಸಿದ್ಧವಾಗಿದೆ ಎಂದರು.

ಮೂರು ಅವಧಿಗೆ ಸತತ ಹದಿಮೂರೂವರೆ ವರ್ಷ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅವರು ಜನರಿಂದ, ಜನರಿಗಾಗಿ, ಜನರಿಗೋಸ್ಕರ ಬದುಕಿ, ಪ್ರೀತಿಯ ಅಪ್ಪಾಜಿಯಾಗಿದ್ದರು. ಅವರ ಜೀವನೋತ್ಸಾಹ ಎಲ್ಲರಿಗೂ ಮಾದರಿ ಎಂದರು.

ಆಡಳಿತ ಪಕ್ಷದಲ್ಲೇ ಇರಲಿ, ವಿರೋಧ ಪಕ್ಷದಲ್ಲೇ ಇರಲಿ, ಯಾರಿಗೂ ಅಂಜದ ಅಳುಕದೆ ಸಮಾಜದ ಹಿತ ಕಾಯುವ ವಿಚಾರದಲ್ಲಿ ನಿರ್ಭಯವಾಗಿ, ನಿಷ್ಠುರವಾಗಿ ಮಾತನಾಡುತ್ತಿದ್ದರು. ತಮ್ಮ ತಂದೆ ಡಾ. ಭೀಮಣ್ಣ ಖಂಡ್ರೆ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ಮಹಾಸಭಾದ ಅಭಿವೃದ್ಧಿಗೆ ಶ್ರಮಿಸಿದ್ದರು ಎಂದರು. ಸಂಸ್ಥಾನಗಳು ಹುಟ್ಟುತ್ತವೆ ಅಳಿಯುತ್ತವೆ. ಮನುಷ್ಯ ಹುಟ್ಟುತ್ತಾನೆ ಸಾಯುತ್ತಾನೆ. ಆದರೆ ಹುಟ್ಟು ಸಾವಿನ ನಡುವಿನ ಅವಧಿಯಲ್ಲಿ ಮಾಡಿದ ಕಾರ್ಯ ಶಾಶ್ವತವಾಗಿರುತ್ತದೆ. ಇಂತಹ ಸಾಧಕರಲ್ಲಿ ಶಿವಶಂಕರಪ್ಪ ಅವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ ಎಂದರು.

ತುಮಕೂರು ಸಿದ್ದಗಂಗಾಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಮಾತನಾಡಿ, ಶಾಮನೂರು ಶಿವಶಂಕರಪ್ಪ ಅವರಲ್ಲಿ ಧನ ಶ್ರೀಮಂತಿಕೆಯ ಜೊತೆಗೆ ಹೃದಯ ಶ್ರೀಮಂತಿಕೆ ದೊಡ್ಡದಾಗಿತ್ತು. ಸಾಮಾನ್ಯ ವ್ಯಾಪಾರಿಗಳ ಕುಟುಂಬದಲ್ಲಿ ಹುಟ್ಟಿ, ಉದ್ಯಮಿಯಾಗಿ, ಶಾಸಕರಾಗಿ, ಸಂಸದರಾಗಿ, ಸಚಿವರಾಗಿ ಅವರು ಈ ನಾಡಿಗೆ ನೀಡಿರುವ ಕೊಡುಗೆ ಅಪಾರವಾದ್ದು ಎಂದರು. ಸತ್ತಾಗ ಉಸಿರುವುದಿಲ್ಲ ಆದರೆ ಹೆಸರು ಉಳಿಯಬೇಕು ಎಂದು ಹೇಳಿದ ಅವರು, ಬಸವಣ್ಣನವರ ಮಾತಿನಂತೆ ಬಾಗಿದ ತಲೆ, ಮುಗಿದ ಕೈಗೆ ಅನುರೂಪರಾಗಿದ್ದ ಶಿವಶಂಕರಪ್ಪ ಅವರು ಸಿದ್ಧಿಯೊಂದಿಗೆ ಸಾಧನೆ ಮಾಡಿದ ಪರಿಶ್ರಮಿ. ನಿರಂತರ ಪರಿಶ್ರಮದಿಂದ ಅವರು ಶಿಕ್ಷಣ, ಉದ್ಯಮ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿದು, ದಾವಣಗೆರೆಯನ್ನು ವಿಶ್ವ ಭೂಪಟದಲ್ಲಿ ಗುರುತಿಸುವಂತೆ ಮಾಡಿದರು ಎಂದರು. ಸೂತ್ತೂರು ಸಂಸ್ಥಾನದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿ ಶಿವಶಂಕರಪ್ಪ ಅವರು ಒಂದು ಸಮುದಾಯದ ಪ್ರಾತಿನಿಧಿಕ ವ್ಯಕ್ತಿಯಾಗಿ ಬದುಕಿದವರು, ತಮ್ಮ ಪಾಲಿಗೆ ಬಂದ ಕಾಯಕವನ್ನು ಸಮರ್ಥವಾಗಿ ನಿರ್ವಹಿಸಿದ ಮೇರು ವ್ಯಕ್ತಿಯಾಗಿದ್ದರು ಎಂದು ಸ್ಮರಿಸಿದರು. ಕೈಗಾರಿಕಾ ನಗರವನ್ನು ಜ್ಞಾನಕಾಶಿಯಾಗಿ ಪರಿವರ್ತಿಸಿದ ಕೀರ್ತಿ ಶಾಮನೂರು ಅವರಿಗೆ ಸಲ್ಲುತ್ತದೆ. ಎಲ್ಲರನ್ನೂ ಪ್ರೀತಿಸುತ್ತಿದ್ದ ಅವರು ಅಜಾತಶತ್ರುವಾಗಿದ್ದರು. ಪಕ್ಷಭೇದ ಮರೆತು ಎಲ್ಲರೂ ಅವರನ್ನು ಗೌರವದಿಂದ ಕಾಣುತ್ತಿದ್ದರು ಎಂದರು. ವೀರಶೈವ ಲಿಂಗಾಯತ ಮಹಾಸಭಾ ನಿಕಟಪೂರ್ವ ಅಧ್ಯಕ್ಷರಾದ ಶತಾಯುಷಿ ಭೀಮಣ್ಣ ಖಂಡ್ರೆ ಅವರು ಭೀಷ್ಮಾಚಾರ್ಯರಂತಿದ್ದರು, ಅವರ ಮಾರ್ಗದರ್ಶನದಲ್ಲಿ ಶಿವಶಂಕರಪ್ಪ ಅವರು ಸಮಾಜಕ್ಕೆ ಮತ್ತು ಸಭಾ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿದರು ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ಶಾಮನೂರು ಶಿವಶಂಕರಪ್ಪ ಅವರು ಬದುಕನ್ನು ಪ್ರೀತಿಸುತ್ತಿದ್ದರು, ಮನಃಸಾಕ್ಷಿಗೆ ಅನುಗುಣವಾಗಿ ನಡೆದುಕೊಂಡರು. ಅವರು ತಮ್ಮ ಜೀವನದಲ್ಲಿ ಅಂದುಕೊಂಡ ಎಲ್ಲವನ್ನೂ ಮಾಡಿ ತೋರಿಸಿದರು ಎಂದರು.

ಡಾ. ಶಂಕರ ಬಿದರಿ ನುಡಿನಮನ ಸಲ್ಲಿಸಿ ಶಿವಶಂಕರಪ್ಪ ಅವರು, ಯಾರ ಬಗ್ಗೆಯೂ ಕಟುವಾಗಿ ಮಾತನಾಡಿದವರಲ್ಲ, ಹೃದಯ ವೈಶಾಲ್ಯದ ಸಜ್ಜನ ಉದ್ಯಮಿ, ರಾಜ–ಕಾರಣಿಯಾಗಿದ್ದರು. ಅವರು ಜನರೊಂದಿಗೆ ಹೊಂದಿದ್ದ ಬಾಂಧವ್ಯ ಅನುಪಮವಾದ್ದು ಎಂದರು. ಸಿರಿಗೆರೆ ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶರಣ ಪ್ರಕಾಶ್ ಪಾಟೀಲ್, ರಾಣಿ ಸತೀಶ್, ಚರಂತಿಮಠ, ಪ್ರಭಾಕರ ಕೋರೆ, ಲೀಲಾದೇವಿ ಆರ್. ಪ್ರಸಾದ್, ಜಿ.ಎಸ್. ಪಾಟೀಲ್, ಶಶೀಲ್ ನಮೋಶಿ ಮೊದಲಾದವರು ನುಡಿನಮನ ಸಲ್ಲಿಸಿದರು. ಈ ಕಾರ್ಯಕ್ರಮದಲ್ಲಿ ಶಾಸಕರಾದ ಬಿ.ಆರ್. ಪಾಟೀಲ್, ಅಶೋಕ್ ಪಟ್ಟಣ್ಣ, ತಮ್ಮಯ್ಯ ಮುಖಂಡರಾದ ರಾಜಶೇಖರ ಪಾಟೀಲ್ ಹುಮನಾಬಾದ್, ಚಂದ್ರಶೇಖರ ಪಾಟೀಲ್, ಅಮರೇಗೌಡ ಬಯ್ಯಾಪುರ, ವೀಣಾ ಕಾಶೆಪ್ಪನವರ್ ಮತ್ತಿತರರು ಪಾಲ್ಗೊಂಡಿದ್ದರು.

# ಪಟ್ಟದೇವರು 136 ನೇ ಜಯಂತುತ್ಸವ ನಿಮಿತ್ಯ ರೋಗಿಗಳಿಗೆ ಹಣ್ಣು ವಿತರಣೆ

- ಮಲ್ಲಮ್ಮ ನುಡಿ ವಾರ್ತೆ ಕಮಲನಗರ:



ಡಾ ಚನ್ನಬಸವ ಪಟ್ಟದೇವರು 136 ನೇ ಜಯಂತುತ್ಸವ ನಿಮಿತ್ಯ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಯಂತಿ ಆಚರಣೆ ಮಾಡಿ ಒಳ ರೋಗಿಗಳಿಗೆ ಹಣ್ಣು ವಿತರಣೆ ಮಾಡಿದರು.

ಕರವೇ ತಾಲೂಕಾಧ್ಯಕ್ಷ ಮಂಜುನಾಥ ಸ್ವಾಮಿ ಮಾತನಾಡಿ, ಪೂಜ್ಯ ಶ್ರೀಗಳು ಈ ಭಾಗದಲ್ಲಿ ಅನೇಕ ಸಾಮಾಜಿಕ ಸೇವೆ ಮಾಡಿದ್ದಾರೆ ಅವರ ನೆನಪಿಗಾಗಿ ಅವರ ಹುಟ್ಟಿದ ಹಬ್ಬದ ಪ್ರಯುಕ್ತ ಗುರುವಾರ ದಿನಾಂಕ:25/12/2025 ರಂದು ರಕ್ತ ದಾನ ಶಿಬಿರ ಆಯೋಜನೆ ಮಾಡಿರು ಕುರಿತು ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ನಿವೃತ್ತ ಪ್ರಾಚಾರ್ಯರು ಎಸ್ ಎನ್ ಶಿವಣಕರ ಮಾತನಾಡಿದರು. ಕರವೇ ತಾಲೂಕಾಧ್ಯಕ್ಷ ಮಂಜುನಾಥ ಸ್ವಾಮಿ, ಜಿಲ್ಲಾ ಉಪಾಧ್ಯಕ್ಷರು ಸುಭಾಷ್ ಗಾಯಕವಡೆ, ಪ್ರಧಾನಕಾರ್ಯದರ್ಶಿ ಪ್ರಶಾಂತ್ ಖಾನಾಪುರೆ, ಕಾರ್ಯದರ್ಶಿ ಸುನೀಲ ಮೇತ್ರೆ, ತಾಲೂಕ ಉಪಾಧ್ಯಕ್ಷ ಅಜಯ್ ಪಾಟೀಲ, ಕಿರಣ್ ಬಸವರಾಜ, ಆಕಾಶ, ಕೈಲಾಶ ಸಂಗಮೇಶ ಆನಂದ, ಅಮಿತ್ ಸೇರಿದಂತೆ ಇನ್ನಿತರ ಇದ್ದರು.

# ದಿನಾಚರಣೆ :ಪಿ ಸಿ ಶಾಂತಾ ಅವರಿಗೆ ಸನ್ಮಾನ

- ಮಲ್ಲಮ್ಮ ನುಡಿ ವಾರ್ತೆ
- ವಿಜಯನಗರ ಹೊಸಪೇಟೆ)



ಮಾನಸ ಸಾಧನಾ ವಿಕಲಚೇತನರ ಸೇವಾ ಟ್ರಸ್ಟ್ ವತಿಯಿಂದ ವಿಶ್ವ ವಿಕಚೇತನ ದಿನಾಚರಣೆ 2025 ದಾವಣಗೆರೆಯಲ್ಲಿ ಆಚರಣೆ ಟ್ರಸ್ಟ್ ನಾ ಸಂಸ್ಥಾಪಕ ಅಧ್ಯಕ್ಷರು ಶ್ರೀ ಮತಿ ವಿಜಯಲಕ್ಷ್ಮಿ ದಾವಣಗೆರೆ ಇನ್ನೂ ಮುಂತಾದವರ ಅಧ್ಯಕ್ಷತೆಯಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಪ್ರಯುಕ್ತ ವಿವಿಧ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನ ಮಾಡಲಾಗಿತ್ತು ಈ ಕಾರ್ಯಕ್ರಮದಲ್ಲಿ ವಿಜಯನಗರ ಜಿಲ್ಲೆಯ ಪಿ.ಸಿ ಶಾಂತ ಅವರಿಗೆ ವಿಶೇಷ ಸಾಧನೆ ಪುರಸ್ಕಾರಮನ್ನು ಮಾಡಲಾಯಿತು ಹೀಗೆ ಜಿಲ್ಲಾವಾರು 30 ಜನಕ್ಕೆ ಸನ್ಮಾನ ಸಮಾ ರಂಭ ಮಾಡಿದರು ಈ ಕಾರ್ಯಕ್ರಮಕೆ ನನ್ನನ್ನು ಗುರುತಿಸಿ ಪ್ರೋತ್ಸಾಹಿಸಿದ ವಿಜಯಲಕ್ಷ್ಮಿ ಅವರಿಗೆ ಧನ್ಯವಾದಗಳನ್ನು

ಪತ್ರಿಕೆ ಮೂಲಕ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಮಹಾವೀರ ಈರಣ್ಣವರ, ಹಿರಿಯ ಸಿವಿಲ್ ನ್ಯಾಯಾಧೀಶ ಮತ್ತು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಕಾರ್ಯದರ್ಶಿಗಳು, ಶ್ರೀ ಮಾರುತಿ ಕೃಷ್ಣಾಚಾರ್ ನಿರ್ದೇಶಕರು ಸಿ.ಆರ್.ಸಿ ದಾವಣಗೆರೆ, ಡಾ.ಕೆ.ಕೆ ಪ್ರಕಾಶ್ ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಅಧಿಕಾರಿಗಳು ಉಪಸ್ಥಿತರಿದ್ದರು.

# ಪ್ರವಚನದಿಂದ ಜೀವನದಲ್ಲಿ ಹೊಸ ಬೆಳಕು



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ: ಪ್ರವಚನಗಳು ಸನ್ಮಾರ್ಗಕ್ಕೆ ದಾರಿ ತೋರಿಸಿ, ಜೀವನಕ್ಕೆ ಹೊಸ ಬೆಳಕು ನೀಡುತ್ತವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ತಾಲೂಕಿನ ಭಾತಂಬ್ರಾ ಗ್ರಾಮದ ನಿರಂಜನ ಸಂಸ್ಥಾನ ಮಠದಲ್ಲಿ ಉತ್ತರಾಧಿಕಾರಿ ಡಾ.ಗುರುಬಸವ ದೇವರ ಪಟ್ಟಾಭಿಷೇಕ ನಿಮಿತ್ತ ಆಯೋಜಿಸಿದ್ದ ಬಸವ ದರ್ಶನ ಪ್ರವಚನ ಉದ್ಘಾಟಿಸಿ ಅವರು ಮಾತನಾಡಿದರು.ಈ ಭಾಗದಲ್ಲಿ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಅವರು ಧರ್ಮ ಪ್ರಚಾರ ಪ್ರಸಾರದ ಜತೆಗೆ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಮಠದ ಪಟ್ಟಾಧಿಕಾರ ನಡೆಯುತ್ತಿರುವುದು ಸಂತಸ ತರಿಸಿದೆ. ಈ ನಿಮಿತ್ತ ತಿಂಗಳ ಕಾಲ ಪ್ರವಚನ ನಡೆಯುತ್ತಿದ್ದು ಎಲ್ಲ ಭಕ್ತರು ಆಲಿಸಿ ತಮ್ಮ ನಿಜ ಜೀವನದಲ್ಲಿ ಆಚರಣೆಗೆ ತರಬೇಕು ಎಂದು ಸಲಹೆ ನೀಡಿದರು.

ಸಾನ್ನಿಧ್ಯ ವಹಿಸಿದ್ದ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಮಾತನಾಡಿ, ಪಟ್ಟಾಧಿಕಾರ ಮಹೋತ್ಸವ ನಿಮಿತ್ತ ಜ.22ರ ವರೆಗೆ ಬಸವ ದರ್ಶನ ಪ್ರವಚನ ಹಮ್ಮಿಕೊಳ್ಳಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗ ಮಾಡಿಕೊಳ್ಳಬೇಕು ಎಂದು ತಿಳಿಸಿದರು. ಹಲಬರ್ಗಾ ಶರಣ ಗಿರಿಯ ಮಾತೆ ಬಸವಾಂಜಲಿ ತಾಯಿ, ಡಾ.ಗುರುಬಸವ ದೇವರು ನೇತೃತ್ವ ವಹಿಸಿದ್ದರು.

ಈ ಸಂದರ್ಭದಲ್ಲಿ ಹಿರಿಯ ನ್ಯಾಯವಾದಿ ವೆಂಕಟರಾವ ಭೂರಾಳೆ, ಗ್ರಾಮ ಪಂಚಾಯತಿ ಅಧ್ಯಕ್ಷ ಮಹಾಂತೇಶ ಪಾಟೀಲ, ಶ್ರೀಕಾಂತ ಭೂರಾಳೆ, ಮಹಾದೇವ ಬೇಲೂರೆ, ಕಾಶಿನಾಥ ಲದ್ದೆ, ವಿಜಯಕುಮಾರ ಭೂರಾಳೆ ಸೇರಿದಂತೆ ಹಲವರು ಇದ್ದರು. ದೀಪಕ ಠಮಕೆ ನಿರೂಪಿಸಿ, ವಂದಿಸಿದರು.

# ಡಿ.27 ರಂದು ವಿದ್ಯುತ್ ವ್ಯತ್ಯಯ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 110/11ಕೆವಿ ಬಿಸಿಲಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಡಿ.27 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಬ್ಯಾಂಕ್–1 ಫೀಡರ್‌ನ ಎಫ್–63 ಮತ್ತು ಎಫ್–64 ಫೀಡರ್ ವ್ಯಾಪ್ತಿಯ ರೂಪನಗುಡಿ ರಸ್ತೆ, ಗ್ರಾಂಡ್ ಫಂಕ್ಷನ್ ಹಾಲ್, ವೆಂಕಟರಮಣ ನಗರ, ನಬೀ ಕಾಲೋನಿ, ಅಂಜಿನಪ್ಪ ನಗರ, ಶ್ರೀರಾಂಪುರ ಕಾಲೋನಿ, ಗೋನಾಳ್, ವರಬಸಪ್ಪ ಗುಡಿ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ವ್ಯತ್ಯಯ ಡಿ.26ಕ್ಕೆ

- ಮಲ್ಲಮ್ಮ ನುಡಿ ವಾರ್ತೆ ಬೀದರ:

ಹುಮನಾಬಾದ ಕಾರ್ಯ ಮತ್ತು ಪಾಲನೆ ವಿಭಾಗ ಗು.ವಿ.ಸ.ಕಂ ವ್ಯಾಪ್ತಿಯಲ್ಲಿ ಬರುವ 220ಕೆವಿ ಹುಮನಾಬಾದ, ವಿದ್ಯುತ್ ಸ್ವೀಕರಣ ಕೇಂದ್ರದ 10ಎಂವಿಎ, 110/11ಕೆವಿ ಪರಿವರ್ತಕದ ತುರ್ತು ಕೆಲಸದ ನಿಮಿತ್ಯ ಡಿಸೆಂಬರ್.26 ರಂದು ಬೆಳಿಗ್ಗೆ 10 ರಿಂದ 2 ಗಂಟೆಯವರೆಗೆ 11ಕೆವಿ ಕೆ.ಐ.ಡಿ.ಬಿ, 11ಕೆವಿ ಮುಸ್ತಾಪುರ, 11ಕೆವಿ ಆರ್.ಟಿ.ಓ, 11ಕೆವಿ ನೇಕ್ಟರ ಮತ್ತು 11ಕೆವಿ ಇಂಡಸ್ಟ್ರೀಯಲ್ ಫೀಡರ ಮಾರ್ಗದ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಕಾರಣ ಗ್ರಾಹಕರು ಸಹಕರಿಸಬೇಕೆಂದು ಹುಮನಾಬಾದ 220ಕೆವಿ ಕಾರ್ಯಚರಣೆ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕರಡಕಲ್ ಗ್ರಾಪಂ ಅಧ್ಯಕ್ಷರಾಗಿ ದೇವಿಂದ್ರಪ್ಪ ಆಯ್ಕೆ



- ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ :

ಸಮೀಪದ ಕರಡಕಲ್ ಗ್ರಾಮ ಪಂಚಾಯತಿಗೆ ಎರಡನೇ ಅವಧಿಗೆ ಅಧ್ಯಕ್ಷರಾಗಿ ದೇವಿಂದ್ರಪ್ಪ ಕುಂಬಾರ ಹಾಗೂ ಉಪಾಧ್ಯಕ್ಷರಾಗಿ ಪಾರ್ವತಿ ವಿನಾಯಕ ದೊಡ್ಡಮನಿ ಅವಿರೋದವಾಗಿ ಆಯ್ಕೆಯಾದರು.10 ಸದ್ಯಸರನ್ನು ಹೊಂದಿರುವ ಕರಡಕಲ್ ಗ್ರಾಮಪಂಚಾಯಿತಿಯಲ್ಲಿ 6 ಸದ್ಯಸರು ಕಾಂಗ್ರೇಸ್ ಪಕ್ಷದ ಬೆಂಬಲಿತರಾಗಿದ್ದು ಕಾಂಗ್ರೇಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿದಿದಂತಾಗಿದೆ.ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಸವರಾಜ ಸಜ್ಜನ ಚುನಾವಣಾಧಿಕಾರಿಯಾಗಿ ಕರಡಕಲ್ ಗ್ರಾಪಂ ಅಧ್ಯಕ್ಷ ಚುನಾವಣೆ ಸುಸೋತ್ರವಾಗಿ ನಡೆಸಿಕೊಟ್ಟರು. ಚುನಾವಣೆ ಮುಗಿಯುತ್ತಿದಂತೆ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳ, ಸಿಹಿ ಹಂಚಿ ಸಂಭ್ರಮಿಸಿದರು. ಪ್ರಮುಖರಾದ ಮಾಜಿ ಮಂಡಲ ಪ್ರಧಾನ ಸಂಗನಗೌಡ ಮರಡ್ಡಿ, ಮಾಜಿ ಜಿಪಂ ಉಪಾಧ್ಯಕ್ಷ ಶಂಕ್ರಣ್ಣ ವಣಿಕ್ಯಾಳ, ಕೆವೈಡಿಸಿಸಿ ಬ್ಯಾಂಕ್ ನಿರ್ದೇಶಕ ಬಸವರಾಜ ಚಿಂಚೋಳಿ, ಬಾಪುಗೌಡ ಪಾಟೀಲ, ಬೀಮಣ್ಣ ಯಲಗೋಡ, ಬಾಪುಗೌಡ ಪೋ ಪಾಟೀಲ, ಸಿದ್ದನಗೌಡ ಮಾಲಹಳ್ಳಿ, ಮಾನಸಣ್ಣ ಘಂಟಿ, ಹಣಮಂತ್ರಾಯ ದೊಡ್ಡಮನಿ, ರಾಜಾವೆಂಕಟಪ್ಪ ನಾಯಕ ಜಾಗಿರದಾರ, ಭೀಮಣ್ಣ ನಾರಾಯಣಪೂರ, ಶಿವನಗೌಡ ಪಾಟೀಲ, ಬಸನಗೌಡ ಮರಡ್ಡಿ, ನಿಂಗನಗೌಡ ಮರಡಿ, ವಿರುಪಾಕ್ಷಿ ಗುಡಿಮನಿ, ಪಿಡಿಒ ಮಲ್ಲಪ್ಪ ಸೇರಿದಂತೆ ಪಂಚಾಯತಿ ಸಿಬ್ಬಂದಿಗಳು ಉಪಸ್ಥಿತರಿದ್ದರು, ಮುಂಜಾಗ್ರತಾ ಕ್ರಮವಾಗಿ ಪೋಲೀಸ್ ಇಲಾಖೆ ಸೂಕ್ತ ಬಂದೋಬಸ್ತ್ ಕೈಗೊಂಡಿತ್ತು.

# ಫೌಂಡೇಶನ್ ವತಿಯಿಂದ ವಿದ್ಯುತ್ ತಂತ್ರಜ್ಞ ತರಬೇತಿ ಪ್ರಾರಂಭ



- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಸಂಡೂರು ತಾಲೂಕಿನ ಸರ್ಕಾರಿ ಐಟಿಐ ಕಾಲೇಜಿನಲ್ಲಿ ಜೆ ಎಸ್ ಡಬ್ಲ್ಯೂ ಫೌಂಡೇಶನ್ ವತಿಯಿಂದ ಹೊಸ ವಿದ್ಯುತ್ ತರಬೇತಿ ಕೇಂದ್ರವನ್ನು ಬುಧವಾರ ಉದ್ಘಾಟಿಸಲಾಯಿತು. ಇದು ಜೆಎಸ್‌ಡಬ್ಲ್ಯೂನ ಕೌಶಲ್ಯ ಅಭಿವೃದ್ಧಿಯ ಉಪಕ್ರಮದ ಭಾಗವಾಗಿದ್ದು, ಯುವಕರಿಗೆ ಉದ್ಯೋಗ ಪಡೆಯಲು ಅಗತ್ಯವಾದ ತಾಂತ್ರಿಕ ಕೌಶಲ್ಯಗಳನ್ನು ಕಲಿಸುವ ಉದ್ದೇಶ ಹೊಂದಿದೆ. ಈ ತರಬೇತಿ ಕಾರ್ಯಕ್ರಮದಲ್ಲಿ 120 ಯುವಕರಿಗೆ ವಿದ್ಯುತ್ ವೈರಿಂಗ್, ಸುರಕ್ಷತಾ ಕ್ರಮಗಳು, ಉಪಕರಣಗಳ ಬಳಕೆ ಮತ್ತು ಪ್ರಾಯೋಗಿಕ ಕ್ಷೇತ್ರ ಅನುಭವದ ಬಗ್ಗೆ ತರಬೇತಿ ನೀಡಲಾಗುತ್ತದೆ. ತರಬೇತಿ ಮುಗಿದ ನಂತರ ಉದ್ಯೋಗ ಸಿದ್ಧತೆಯನ್ನು ಹೆಚ್ಚಿಸಲು ಉದ್ಯೋಗ ಬೆಂಬಲವೂ ನೀಡಲಾಗುತ್ತದೆ.

ಕಾರ್ಯಕ್ರಮವನ್ನು ಬಳ್ಳಾರಿ ಲೋಕಸಭಾ ಸಂಸದರಾದ ಈ. ತುಕಾರಾಮ್ ಅವರು ಉದ್ಘಾಟಿಸಿ ಮಾತನಾಡಿ "ಸಂಡೂರಿನಲ್ಲಿ ಐ ಟಿ ಐ ಕಾಲೇಜು ಮೊದಲು ಒಂದು ಚಿಕ್ಕ ಜಾಗದಲ್ಲಿ ಇತ್ತು, ನಾನು ಗೆದ್ದು ಬಂದ ಮೇಲೆ ಈಗಿನ ಹೊಸ ಐ ಟಿ ಐ ಕಾಲೇಜು ಮತ್ತು ಹೊಸ ಪದವಿ ಕಾಲೇಜು ಕೊಠಡಿಗಳನ್ನು ಕಟ್ಟಿಸಲಾಗಿದೆ, ಇವೆಲ್ಲವನ್ನೂ ನಮ್ಮ ಕ್ಷೇತ್ರದ ವಿದ್ಯಾರ್ಥಿಗಳಿಗೆ ಮತ್ತು ಅವರಿಗೆ ಉತ್ತಮ ಕೆಲಸ ಸಿಗಲೆಂದು ಮಾಡಿದ ಕಾರ್ಯಕ್ರಮಗಳಾಗಿವೆ, ನಾವು ಓದುವಾಗ ಹೆಚ್ಚಿನ ಸವಲತ್ತುಗಳು ಇರಲಿಲ್ಲ, ಈಗ ಉತ್ತಮ ಕೊಠಡಿ ಮತ್ತು ತರಬೇತಿ ಕೇಂದ್ರಗಳನ್ನು ನಿಮಗಾಗಿ ಮಾಡಿದ್ದೇವೆ, ಈಗಿನ ಕಾರ್ಯಕ್ರಮಗಳನ್ನು ನಮ್ಮ ಮನವಿಯ ಮೇರೆಗೆ ಜೆ ಎಸ್ ಡಬ್ಲ್ಯೂ ಫೌಂಡೇಶನ್ ಅಧ್ಯಕ್ಷೆಯಾದ ಶ್ರೀಮತಿ ಸಂಗೀತ ಜಿಂದಾಲ್ ಅವರ ನೇತೃತ್ವದಲ್ಲಿ ನಡೆಸುತ್ತಿದ್ದಾರೆ, ಅವರಿಗೂ ಕೂಡ ಧನ್ಯವಾದಗಳು ಮತ್ತು ಇದರ ಉಪಯೋಗವನ್ನು ಗ್ರಾಮೀಣ ವಿದ್ಯಾರ್ಥಿಗಳು ಬಳಸಿಕೊಳ್ಳಬೇಕು" ಎಂದು ತಿಳಿಸಿದರು

ಜೆ ಎಸ್ ಡಬ್ಲ್ಯೂ ಫೌಂಡೇಶನ್ ಸೌತ್ ಝೋನಲ್ ಹೆಡ್– ಪೆದ್ದಣ್ಣ ಬೀಡಲಾ ಮಾತನಾಡಿ "ಕೈಗಾರಿಕೆಯವರು ನಮಗೆ ಕೌಶಲ್ಯವಿರುವ ವ್ಯಕ್ತಿಗಳು ಸಿಗುತ್ತಿಲ್ಲ ಎನ್ನುತ್ತಾರೆ, ಈ ಕಡೆ ಯುವಜನತೆ ನಮಗೆ ಕೆಲಸ ಸಿಗುತ್ತಿಲ್ಲ ಎನ್ನುತ್ತಾರೆ, ಹಾಗಾದರೆ; ಇಲ್ಲಿ ಬೇಕಾಗಿರುವುದು ಹೊಸ ತಲೆಮಾರಿನ ಕೌಶಲ್ಯಗಳು ಮತ್ತು ಕೌಶಲ್ಯಯುತ ಯುವಕರು, ಇದನ್ನೇ ನಮ್ಮ ಈ ಕಾರ್ಯಕ್ರಮ ಮಾಡುತ್ತಿರುದು ಎಂದು ಯುವಕರನ್ನು ಕೌಶಲ್ಯರಾಗುವಂತೆ ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಜೆ ಎಸ್ ಡಬ್ಲ್ಯೂ ಮೈನಿಂಗ್ ವಿಭಾಗದ ಉಪಾಧ್ಯಕ್ಷರಾದ ಮಣಿಭೂಷಣ್ ಸಿಂಗ್ ಮತ್ತು ಜೆ ಎಸ್ ಡಬ್ಲ್ಯೂ ಎನರ್ಜಿ ಸಿ ಎಸ್ ಆರ್ ಅಧಿಕಾರಿಯಾದ ಶ್ರೀಕಾಂತ್ ಹೆಗಡೆ, ನಾಗನಗೌಡ, ಶ್ರೇಷ್ಠ ಮತ್ತು ಐ ಟಿ ಐ ಕಾಲೇಜಿನ ಪ್ರಾಂಶುಪಾಲರಾದ ಸುರೇಶ ಬಾಬು ಮತ್ತು ಸಿಬ್ಬಂದಿಗಳು ಹಾಗೂ ಕಾರ್ಯಕ್ರಮ ಅನುಷ್ಠಾನ ಮಾಡುತ್ತಿರುವ ಗ್ರಾಮ ವಿಕಾಸ ಸೊಸೈಟಿಯ ನಿರ್ದೇಶಕರಾದ ಸಚಿನ್ ಮತ್ತು 150 ಕ್ಕೂ ಅಧಿಕ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ಸಿರುಗುಪ್ಪ ತಾಲ್ಲೂಕಿನ ಹಾಗಲೂರು ಗ್ರಾಮದ ಮೌಂಟ್ ವ್ಯೂ ಕ್ಯಾಂಪಸ್‌ನಲ್ಲಿ ಸ್ಥಾಪಿತವಾಗಿರುವ ಕಿಷ್ಕಂದಾ – ವಿಶ್ವವಿದ್ಯಾಲಯದ ಮೊದಲ ವಾರ್ಷಿಕ ಘಟಿ–ಕೋತ್ಸವ ಇಂದು ವಿಶ್ವವಿದ್ಯಾಲಯದ ಆವರಣದಲ್ಲಿ ವಿಜೃಂಭಣೆಯಿಂದ ನಡೆಯಿತು.

ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲ ರಾದ ಥಾವರ್ ಚಂದ್ ಗೆಹೋಟ್ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಪದವೀಧರ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು– ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಅವರು ವಿದ್ಯಾರ್ಥಿಗಳಿಗೆ ಉನ್ನತ ಮೌಲ್ಯಗಳು, ನವೋದ್ಯಮ ಮತ್ತು ಸಮಾಜ ಸೇವೆಯತ್ತ ಗಮನ ಹರಿಸುವಂತೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಡಾ ಎಂ.ಸಿ. ಸುಧಾಕರ್ ಅವರು ವಿಶೇಷವಾಗಿ ಉಪಸ್ಥಿತ–ರಿದ್ದು, ರಾಜ್ಯದಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳ ಕುರಿತು ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ಹಾಗೂ ಬೆಳಗಾವಿ ಲೋಕಸಭಾ ಕ್ಷೇತ್ರದ ಸಂಸದರಾದ ಜಗದೀಶ್ ಶೆಟ್ಟರ್ ಅವರು ಗೌರವಾನ್ವಿತ ಅತಿಥಿಯಾಗಿ ಪಾಲ್ಗೊಂಡಿದ್ದರು. ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ. ನಾಗರಾಜ ಹಾಗೂ ಸಿಂಧನೂರು ವಿಧಾನಸಭಾ ಕ್ಷೇತ್ರದ ಶಾಸಕ ಬಾದರ್ಲಿ ಹಂಪನಗೌಡ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಘಟಿಕೋತ್ಸವದ ಅಂಗವಾಗಿ ಸುವರ್ಣಗಿರಿ ವಿರಕ್ತ ಮಠ, ವಳ ಬಳ್ಳಾರಿಯ ಪರಮಪೂಜ್ಯ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳಿಗೆ ಗೌರವ ಮಾಡಲಾಯಿತು.

ಡಾಕ್ಟರೇಟ್ ಪದವಿಯನ್ನು ಪ್ರದಾನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟಿ.ಇ.ಹೆಚ್. ಆರ್.ಡಿ ಟ್ರಸ್ಟ್ ಅಧ್ಯಕ್ಷರಾದ ಡಾ. ಎಸ್.ಜೆ.ವಿ. ಮಹಿಪಾಲ್ ವಹಿಸಿದ್ದರು. ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ ಟಿ.ಎನ್. ನಾಗಭೂಷಣ, ಕುಲಾಧಿಪತಿಗಳಾದ ಯಶವಂತ್ ಭೂಪಾಲ್, ಸಹ ಕುಲಾಧಿಪತಿ ವೈ.ಜೆ. ಪೃಥ್ವಿರಾಜ್ ಭೂಪಾಲ್ ಉಪಸ್ಥಿತರಿದ್ದರು.

ವಿಶ್ವವಿದ್ಯಾಲಯದ ಕುಲಸಚಿವರಾದ ಡಾ ಯು. ಈರಣ್ಣ, ಮೌಲ್ಯಮಾಪನ ಕುಲಸಚಿವರಾದ ಡಾ॥ ರಾಜು ಜಾಡರ ಸೇರಿದಂತೆ ಟ್ರಸ್ಟ್ ಸದಸ್ಯರು, ಆಡಳಿತ ಮಂಡಳಿ ಹಾಗೂ ವಿದ್ಯಾ ವಿಷಯಕ ಪರಿಷತ್ ಸದಸ್ಯರು, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ಎ.ಪಿ.ಎಂ.ಸಿ ಯಾರ್ಡ್ ಪೊಲೀಸ್ ಠಾಣೆ ವ್ಯಾಪ್ತಿಯ ನಗರದಲ್ಲಿ ಲಾರಿ ಕ್ಲಿನರ್ ಆಗಿ ಕೆಲಸ ಮಾಡುತ್ತಿದ್ದ ಮಹಾರಾಷ್ಟ್ರದ 36 ವರ್ಷದ ಗೋಕುಲ್ ರಾಮ್‌ದಾಸ್ ಜಾಧವ್ ಎನ್ನುವ ವ್ಯಕ್ತಿಯು ನ.25 ರಂದು ಕಾಣೆಯಾಗಿದ್ದು, ಪ್ರಕರಣ ದಾಖಲಾಗಿದೆ. ವ್ಯಕ್ತಿಯ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ.

ವ್ಯಕ್ತಿಯ ಚಹರೆ:

ಎತ್ತರ ಅಂದಾಜು 5.5 ಅಡಿ, ಕೋಲು ಮುಖ, ಗೋಧಿ ಮೈ ಬಣ್ಣ, ಸಾಧಾರಣ ಮೈಕಟ್ಟು ಹೊಂದಿದ್ದು, ಎಡ ಕುತ್ತಿಗೆಯ ಮೇಲೆ ಹಳೆಯ ಗಾಯದ ಗುರುತು ಹಾಗೂ ಗಡ್ಡ ಬಿಟ್ಟಿರುತ್ತಾನೆ.

ಕಾಣೆಯಾದ ಸಂದರ್ಭದಲ್ಲಿ ಬ್ರೌನ್ ಬಣ್ಣದ ಪುಲ್ ಶರ್ಟ್, ಸಾಧಾರಣ ಕೆಂಪು ಬಣ್ಣದ ರೆಡಿಮೆಡ್ ಪುಲ್ ಡ್ರಾಯರ್ ಧರಿಸಿರುತ್ತಾನೆ. ಮರಾಠಿ, ಹಿಂದಿ ಮತ್ತು ತೆಲುಗು ಭಾಷೆ ಮಾತನಾಡುತ್ತಾನೆ.

ಈ ಮೇಲ್ಕಂಡ ಚಹರೆ ಗುರುತುಗಳುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392–258100 ಅಥವಾ ಎಪಿಎಂಸಿ ಯಾರ್ಡ್ ಪೊಲೀಸ್ ಠಾಣೆಯ ದೂ.08392–250033, ಮೊ.948080396 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ

- ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:



ಕೌಲ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ 36 ವರ್ಷದ ಎ.ಕಿರಣ್ ಎನ್ನುವ ವ್ಯಕ್ತಿಯು ಡಿ.10 ರಂದು ನಗರದ ಬಿಮ್ಸ್ ಆಸ್ಪತ್ರೆ ಎದುರು ಇರುವ ಟಚಪ್ ಕಟಿಂಗ್ ಶಾಪ್‌ಗೆ ಕೆಲಸಕ್ಕೆ ಹೋಗಿ ಬರುತ್ತೇನೆಂದು ಹೇಳಿ ಮರಳಿ ಬಾರದೇ ಕಾಣೆಯಾಗಿದ್ದು, ಪ್ರಕರಣ ದಾಖಲಾಗಿದೆ. ವ್ಯಕ್ತಿಯ ಪತ್ತೆಗೆ ಸಹಕರಿಸಬೇಕು ಎಂದು ಪೊಲೀಸ್ ಸಬ್ ಇನ್ಸ್ ಪೆಕ್ಟರ್ ಮನವಿ ಮಾಡಿದ್ದಾರೆ.

ವ್ಯಕ್ತಿಯ ಚಹರೆ:

ಎತ್ತರ ಅಂದಾಜು 5.6 ಅಡಿ, ಕೋಲು ಮುಖ, ಎಣ್ಣೆಗೆಂಪು ಮೈ ಬಣ್ಣ ಹೊಂದಿದ್ದು, ಗಡ್ಡ ಮೀಸೆ ಬಿಟ್ಟಿರುತ್ತಾನೆ. ಎಡಗೈಗೆ ಇಂಗ್ಲಿಷ್‌ನಲ್ಲಿ ಎ ಎಂದು ಹಚ್ಚೆ ಹಾಕಿರುತ್ತಾನೆ. ಕಾಣೆಯಾದ ಸಂದರ್ಭದಲ್ಲಿ ಬಿಳಿ ಬಣ್ಣದ ಚೆಕ್ಸ್ ಶರ್ಟ್, ಬೂದಿ ಬಣ್ಣದ ಜಿನ್ಸ್ ಪ್ಯಾಂಟ್ ಧರಿಸಿರುತ್ತಾನೆ.

ಈ ಮೇಲ್ಕಂಡ ಚಹರೆ ಗುರುತುಗಳುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಬಳ್ಳಾರಿ ಕಂಟ್ರೋಲ್ ರೂಂ ದೂ.08392–258100 ಅಥವಾ ಕೌಲ್ ಬಜಾರ್ ಪೊಲೀಸ್ ಠಾಣೆಯ ದೂ.08392–240731, 244145, 9480803047, ಪಿಎಸ್‌ಐ ಮೊ.94808203085 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಡಿ.25 ಸೈಕಲ್ ಯಾತ್ರೆಗೆ ಚಾಲನೆ

- ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:

ಆರೋಗ್ಯ ಇಲಾಖೆಯ ನೌಕರರ ಹಾಗೂ ಯುವ ಸಾಹಿತಿ ಶಿವರಾಯಪ್ಪ ಹಾಗೂ ನವೀನಕುಮಾರ ಕಡಾರಿ ಅವರು ಸ್ವಚ್ಛ ಭಾರತ ಸ್ವಸ್ಥ ಭಾರತ ಹಾಗೂ ಪರಿಸರ ಉಳಿಸಿ ಜೀವ ವೈವಧ್ಯತೆ ಉಳಿಸಿ ಎಂಬ ಘೋಷ ವಾಕ್ಯದೊಂದಿಗೆ ಕೊಪ್ಪಳದಿಂದ ಪಂಜಾಬಗೆ ಸೈಕಲ್ ಮೂಲಕ ಜಾಗೃತಿ ಅಭಿಮಾನದ ಕಾರ್ಯಕ್ರಮದ ಚಾಲನೆಯು ಡಿ.25ರ ಗುರುವಾರ ಬೆಳಗ್ಗೆ 8 ಗಂಟೆಗೆ ನಗರದ ಪ್ರವಾಸಿ ಮಂದಿರದಲ್ಲಿ ಜರುಗಲಿದೆ.

ಈ ಕಾರ್ಯಕ್ರಮಕ್ಕೆ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ,ಸಂಸದರಾದ ಕೆ.ರಾಜಶೇಖರ ಹಿಟ್ನಾಳ,ವಿಧಾನ ಪರಿಷತ್ತಿನ ಸದಸ್ಯರಾದ ಹೇಮಲತಾ ನಾಯಕ,ಜಿಲ್ಲಾಧಿಕಾರಿಗಳಾದ ಡಾ.ಸುರೇಶ ಇಟ್ನಾಳ,ಸರಕಾರಿ ನೌಕರರ ಸಂಘದ ರಾಜ್ಯ ಉಪಾಧ್ಯಕ್ಷರಾದ ನಾಗರಾಜ ಜುಮ್ಮಣ್ಣನ್ನವರ, ಕಾರ್ಯಾಧ್ಯಕ್ಷರಾದ ಬೀರಪ್ಪ ಅಂಡಗಿ,ಶರಣಬಸವನಗೌಡ ಪಾಟೀಲ ಮುಂತಾದವರು ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.

# ಪೌರಾಡಳಿತ ಸಚಿವರ ಜಿಲ್ಲಾ ಪ್ರವಾಸ

- ಮಲ್ಲಮ್ಮ ನುಡಿ ವಾರ್ತೆ ಬೀದರ:

ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ಡಿಸೆಂಬರ್.24 ಮತ್ತು 25 ರಂದು ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ. ಅವರು ಡಿ.24 ರಂದು ಸಂಜೆ 6.45 ಗಂಟೆಗೆ ಬಸವಕಲ್ಯಾಣ ತಾಲ್ಲೂಕಿನ ಹಾರಕುಡದಲ್ಲಿ ನಡೆಯಲಿರುವ ಶ್ರೀ ಸದ್ಗುರು ಚನ್ನಬಸವೇಶ್ವರ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ. ನಂತರ ಸಂಜೆ 8.45 ಗಂಟೆಗೆ ಬೀದರ್ ಜಿಲ್ಲೆಯಲ್ಲಿ ನಿಗಧಿಪಡಿಸಿದ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಡಿ.25 ರಂದು ಬೆಳಿಗ್ಗೆ 11 ಗಂಟೆಗೆ ಬೀದರ ಜಿಲ್ಲಾ ಪಂಚಾಯತ್ ಕಛೇರಿ ಎದುರುಗಡೆ ನೂರು ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆರೈಕೆ ಆಸ್ಪತ್ರೆ ಬೀದರದಲ್ಲಿ ಜಿಲ್ಲಾಡಳಿತ ಬೀದರ, ನಗರಾಭಿವೃದ್ಧಿ ಇಲಾಖೆ, ಮಹಾನಗರ ಪಾಲಿಕೆ ಬೀದರ ವತಿಯಿಂದ "ಇಂದಿರಾ ಕ್ಯಾಂಟೀನ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ನಂತರ ಮಧ್ಯಾಹ್ನ 12 ಗಂಟೆಗೆ ಬೀದರ ಸೆಂಟ್ರಲ್ ಮೆಥೋಡಿಸ್ಟ್ ಚರ್ಚ್‌ಗೆ ಭೇಟಿ ಹಾಗೂ ಕ್ರಿಸ್‌ಮಸ್ ಹಬ್ಬದ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆಂದು ಸಚಿವರ ಆಪ್ತ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇವಳ್ಸೆ ಶಾಲೆಯ ವಜ್ರ ಮಹೋತ್ಸವ



- ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ:

ಗ್ರಾಮೀಣ ಭಾಗದಲ್ಲಿ ಶಿಕ್ಷಣದ ಮಹತ್ವವನ್ನು ಅರೆತ ಹಿರಿಯರು ಸಾಕಷ್ಟು ಕಡೆಗಳಲ್ಲಿ ಶಾಲೆ ತೆರೆಯುವ ಮೂಲಕ ಎಲ್ಲರನ್ನು ಸುಶಿಕ್ಷಿತರನ್ನಾಗಿ ಮಾಡುವ ಗುರಿ ಹೊಂದಿದ್ದರು. ಇದರಿಂದಾಗಿ ಅವರ ಪ್ರತಿಫಲದಿಂದಾಗಿ ಇಂದು ಗ್ರಾಮೀಣ ಭಾಗದ ಅಸಂಖ್ಯಾತ ವ್ಯಕ್ತಿಗಳು ಇಂದು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಇಲ್ಲಿಯೂ ಕಲಿತ ವಿದ್ಯಾರ್ಥಿಗಳು ಉತ್ತಮ ಮಟ್ಟದಲ್ಲಿದ್ದಾರೆ ಎಂದು ತಹಸೀಲ್ದಾರ ಡಾ. ಚಿಕ್ಕಪ್ಪ ನಾಯಕ ಹೇಳಿದರು.

ತಾಲೂಕಿನ ನೇವಳ್ಸೆ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಜ್ರ ಮಹೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು. ವಜ್ರ ಮಹೋತ್ಸವದ ಅಂಗವಾಗಿ ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡು ಉತ್ತಮ ವ್ಯವಸ್ಥೆ ಮಾಡಿರುವುದು ನಿಜಕ್ಕೂ ಶ್ಲಾಘನಿಯ ಎಂದರು. ಶಿಕ್ಷಣಾಧಿಕಾರಿ ಮಂಗಲಲಕ್ಷ್ಮೀ ಪಾಟೀಲ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಊರಿನವರು ಹಾಗೂ ಶಿಕ್ಷಕರು ಸೇರಿಕೊಂಡು ಇಂತಹ ಅದ್ದೂರಿ ಕಾರ್ಯಕ್ರಮ ಮಾಡಿರುವುದು ಶ್ಲಾಘನೀಯ ಎಂದರು. ಹಿಲ್ಲೂರು ಗ್ರಾ.ಪಂ. ಅಧ್ಯಕ್ಷೆ ನಾಗಶ್ರೀ ನಾಯಕ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಬೇರಣ್ಣ ನಾಯಕ, ಗ್ಯಾರಂಟಿ ಪ್ರಾಧಿಕಾರದ ತಾಲೂಕು ಅಧ್ಯಕ್ಷ ಪಾಂಡುರಂಗ ಗೌಡ, ಜಿ.ಪಂ.ಮಾಜಿ ಸದಸ್ಯ ಜಿ.ಎಂ.ಶೆಟ್ಟಿ, ದಾನಿಗಳಾದ ರಮಾನಂದ ಕೊಂಡಳ್ಳಿ ಮಾತನಾಡಿದರು.

ಸಮನ್ವಯಾಧಿಕಾರಿ ದೇವರಾಯ ನಾಯಕ, ಬಿಆರ್‌ಸಿ ಸಂಧ್ಯಾ ನಾಯ್ಕ, ಸಿಆರ್‌ಪಿ ಸಾತು ಗೌಡ, ಗ್ರಾ.ಪಂ. ಸದಸ್ಯ ಮಾಲತಿ ಗೌಡ, ಊರ ಹಿರಿಯರಾದ ಗೋವಿಂದ ಗೌಡ, ಇತರರಿದ್ದರು. ಶಿಕ್ಷಕರಾದ ಪಾಂಡುರಂಗ ನಾಯ್ಕ ಸ್ವಾಗತಿಸಿದರು. ನಾಗರಾಜ ನಾಯ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು. ಎಸ್‌ಡಿಎಂಸಿ ಅಧ್ಯಕ್ಷ ಮಹೇಶ ಗೌಡ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಪವನ ಗೌಡ, ವಿದ್ಯಾರ್ಥಿ ಪ್ರತಿನಿಧಿ ಮನೀಷ ಗೌಡ, ಹಾಗೇ ವಜ್ರಮಹೋತ್ಸವ ಸಮಿತಿಯ ಅಧ್ಯಕ್ಷ ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು. ಬೀರಪ್ಪ ಗೌಡ ವಂದಿಸಿದರು.

# ಒಂದು ದಿನದ ರಾಷ್ಟ್ರೀಯ ಔಷಧ ವಿಜ್ಞಾನ ಸಮ್ಮೇಳನಕ್ಕೆ ಚಾಲನೆ.



**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ :**

ವೈದ್ಯಕೀಯ ಔಷಧ ವಿಜ್ಞಾನ ಇಂದು ಎ ಆಯ್ ತಂತ್ರಜ್ಞಾನ ಬಳಿಕೆಯಿಂದ ಮೊದಲಿಗಿಂತ ಹೆಚ್ಚು ಪ್ರಭಾವಶಾಲಿಗಿದ್ದು, ನಾವು ಅಭಿವೃದ್ಧಿಪಡಿಸುವ ಔಷಧಿಗಳಿಂದ ಜೀವ ಉಳಿಸುವಂತ ಮಹತ್ವಕಾರ್ಯ ನಮ್ಮದಾಗಿದೆ, ಎಂದು ಅಮೇರಿಕದ ಮಿಚಿಗಾನ ಪ್ಯೈಜರ್ ಯುನಿರ್ವಸಿಟಿ ನಿರ್ದೇಶಕರಾದ ಡಾ.ಪ್ರವೀಣ ಹಿರೇಮಠ ಹೇಳಿದರು ನಗರದ ಬಿ.ವ್ಹಿ.ವ್ಹಿ. ಸಂಘದ ಹಾನಗಲ್ಲ ಶ್ರೀ ಕುಮಾರೇಶ್ವರ ಔಷಧ ಮಹಾವಿದ್ಯಾಲಯದಿಂದ ಮಂಗಳವಾರ ಬವಿವ ಸಂಘದ ನೂತನ ಸಭಾಭವನದಲ್ಲಿ ಔಷಧ ವಿಜ್ಞಾನದಲ್ಲಿ ಎ.ಆಯ್. ಚಾಲಿತ ಸಂಶೋಧನೆಗಳು ವಿಷಯದ ಮೇಲೆ ಒಂದು ದಿನದ ರಾಷ್ಟ್ರಿಯ ಸಮ್ಮೇಳನವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು ಇಂದು ಔಷಧ ಉದ್ಯಮವು ರೂಪಾಂತರದ ಮುಂಚೂಣಿಯಲ್ಲಿದೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಹೊಸ ಹೊಸ ಔಷಧಗಳ ಅವಿಷ್ಕಾರಗಳನ್ನು ವೇಗವಾಗಿ ಮಾಡಲು ಸಹಕರಿಸುತ್ತದೆ ಹಾಗೂ ರೋಗಿಗಳನ್ನು ಕೂಡ ವೇಗವಾಗಿ ತಲಪುತ್ತದೆ ಇದಕ್ಕೆ ಉತ್ತಮ ಉದಾಹರಣೆ ಫೈಜರ್ ಕೋವಿಡ್ – 19 ಲಸಿಕೆ.ವೈದ್ಯಕೀಯ ಔಷಧ ವಿಜ್ಞಾನ ಇಂದು ಎ ಆಯ್ ತಂತ್ರಜ್ಞಾನ ಬಳಿಕೆಯಿಂದ ಮೊದಲಿಗಿಂತ ಹೆಚ್ಚು ಪ್ರಭಾವಶಾಲಿಗಿದೆ, ನಾವು ಅಭಿವೃದ್ಧಿಪಡಿಸುವ ಔಷಧಿಗಳಿಂದ ಜೀವ ಉಳಿಸುವ ಮಹತ್ವಕಾರ್ಯ ನಮ್ಮದಾಗಿದೆ, ನಾನೂ ಕೂಡ ಬಿವಿವಿ ಸಂಘದ ಎಚ್. ಎಸ್.ಕೆ.ಫಾರ್ಮಾಸಿ ಕಾಲೇಜಿನ ಹಳೆಯ ವಿದ್ಯಾರ್ಥಿ ಎಂದು ಹೇಳಲು ಅತೀವ ಹೆಮ್ಮೆ ಎನಿಸುತ್ತದೆ. ಇಂದು ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ರವರ ಅವಿರತ ಶ್ರಮದಿಂದ ಪ್ರಪಂಚದ ಔಷಧ ವಿಜ್ಞಾನ ಶಿಕ್ಷಣ ಹಾಗೂ ಸಂಶೋಧನೆಗಳಲ್ಲಿ ಸ್ಥಾನ ಗಿಟ್ಟಿಸಿಕೊಂಡಿದೆ ಹಾಗೂ ಈ ಭಾಗದ ಯುವ ವಿಜ್ಞಾನಿಗಳಿಗೆ, ವಾಣಿಜ್ಯೋದ್ಯಮಿಗಳಿಗೆ ವಿದ್ಯಾರ್ಥಿಗಳಿಗೆ ಮುಖ್ಯ ವೇದಿಕೆಯಾಗಿದೆ ಎಂದರು.

ಅತಿಥಿಗಳಾಗಿ ಆದಿಚುಂಚನಗಿರಿ ವಿಶ್ವವಿದ್ಯಾಲಯ ಪ್ರಾಚಾರ್ಯ ಡಾ.ಪ್ರಕಾಶ ಗೌಡನವರ ಮಾತನಾಡಿ ಬಾಗಲಕೋಟೆಯಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಕಳೆದ ಮಧುರ ಕ್ಷಣಗಳನ್ನು ನೆನಪಿಸಿಕೊಂಡು ಈ ಸಮ್ಮೇಳನ ಔಷಧ ವಿಜ್ಞಾನ ವಿಭಾಗದಲ್ಲಿ ಮೈಲಿಗಲ್ಲಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಮಾತನಾಡಿದ ಬಿ.ವಿ.ವಿ.ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ ಅವರು ಇಂದು ದೇಶದ ಆರ್ಥಿಕ ಹಾಗೂ ವೈದ್ಯಕೀಯ ಅಭಿವೃದ್ಧಿಯಲ್ಲಿ ಔಷಧ ವಿಜ್ಞಾನ ವಾಣಿಜ್ಯೋದ್ಯಮವು ಪ್ರಮುಖ ಪಾತ್ರವಹಿಸುತ್ತದೆ. ಪ್ರಪಂಚದಲ್ಲಿ ಇಂದು ಭಾರತ ಔಷಧ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದೆ. ಹೆಮ್ಮೆಯ ಪ್ರಧಾನಿ ಮಾನ್ಯ ನರೇಂದ್ರ ಮೋದಿಯವರ ದೂರದೃಷ್ಟಿ ನವೀಣ ಯೋಜನೆಗಳು ಯುವ ವಿಜ್ಞಾನಿಗಳಿಗೆ ವರವಾಗಿವೆ ಎಂದರು. ನಮ್ಮ ಬವಿವಿ ಸಂಘ ಲಕ್ಷಾಂತರ ರೂಪಾಯಿಗಳ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದೆ, ಸಂಶೋಧನೆಗಳಿಗಾಗಿ ಎಲ್ಲ ರೀತಿ ಸೌಕರ್ಯ ಕಲ್ಪಿಸಲು ಸದಾ ಸಿದ್ಧವಿದೆ ಎಂದರು.

ಇದೇ ಸಂಧರ್ಭದಲ್ಲಿ ಎಮ್.ಐ.ಟಿ ಲಿಮಿಟೇಡ್ ಪೂನಾ ಕಂಪನಿಯೊಂದಿಗೆ ಎಐ–ರೋಬೋಟಿಕ್ ಸಂಶೋಧನಾ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಜೊತೆಗ ಸಮ್ಮೇಳನದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು,

ವೇದಿಕೆ ಮೇಲೆ ಕುಮಾರೇಶ್ವರ ಔಷಧ ಮಹಾವಿದ್ಯಾಲಯ ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ, ಉಪಸ್ಥಿತರಿದ್ದರು.ಪ್ರಾಚಾರ್ಯ ಡಾ.ವಾಯ್.ಶ್ರೀನಿವಾಸ ಸ್ವಾಗತಿಸಿದರು. ಡಾ.ಜಯದೇವ ಹಿರೇಮಠ ಅತಿಥಿ ಮಹೋದಯರನ್ನು ಪರಿಚಯಿಸಿದರು. ಡಾ.ಅನಿತಾ ದೇಸಾಯಿ ಫಾರ್ಮಾಸುಟಿಕಾನ್ – 25 ಸಮ್ಮೇಳನ ಕುರಿತು ಪ್ರಾಸ್ತವಿಕವಾಗಿ ಮಾತನಾಡಿದರು. ಡಾ.ಲಕ್ಷ್ಮಣ ವಿಜಯಪುರ ವಂದಿಸಿದರು.ಪ್ರಸಾದ ಮಾಲಗಿ ಹಾಗೂ ಸುಸ್ಮಿತಾ ಮೂಡಲಗಿ ಕಾರ್ಯಕ್ರಮ ನಿರೂಪಿಸಿದರು.

ಸಮ್ಮೇಳನದಲ್ಲಿ ವೈದ್ಯಕೀಯ ಮಹಾವಿದ್ಯಾಲಯದ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ ಬೇವೂರ, ಡಾ. ಚಂದ್ರಶೇಖರ .ಡಾ.ಶರಣು ಬಿರಾದಾರ.ಡಾ.ಬಿ.ಎಸ್.ಕಿತ್ತೂರ ಸೇರಿದಂತೆ ಸಂಘದ ಸದಸ್ಯರು, ವಿವಿದ ಮಹಾವಿದ್ಯಾಲಯಗಳ ಪ್ರಾಚಾರ್ಯರು. ವಿದ್ಯಾರ್ಥಿಗಳು ಸೇರಿದಂತೆ ಪ್ರಪಂಚದ ನಾನಾ ದೇಶಗಳ ಪ್ರತಿನಿಧಿಗಳೊಂದಿಗೆ ಸುಮಾರು 1200 ಜನ ಭಾಗವಹಿಸಿದ್ದರು.

# ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಪಾಟೀಲ ನೇಮಕ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ :**



ದಿಢೀರ್ ಬೆಳವಣಿಗೆಯಲ್ಲಿ ಜಿಲ್ಲೆಯ ರಬಕವಿ–ಬನಹಟ್ಟಿನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷರಾಗಿ ಕಾಂಗ್ರೆಸ್ ಮುಖಂಡ ಸುರೇಶ ಪಾಟೀಲ ನೇಮಕಗೊಂಡಿದ್ದಾರೆ. ಕಳೆದ ಸೆಪ್ಟೆಂಬರ್ 30 ರಂದು ಈ ಸ್ಥಾನಕ್ಕೆ ನೇಮಕಗೊಂಡಿದ್ದ ದಾನಪ್ಪ ಹುಲಜತ್ತಿ ಅವರನ್ನು ಬದಲಾಯಿಸಿ ಸುರೇಶ ಪಾಟೀಲ ಅವರನ್ನು ನೇಮಕ ಮಾಡಿ ನಗರಾಭಿವೃದ್ಧಿ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿ ಲತಾ.ಕೆ ಆದೇಶ ಹೊರಡಿಸಿದ್ದಾರೆ. ರಬಕವಿ – ಬನಹಟ್ಟಿ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ನೇಮಕದ ವಿಷಯ ಕಾಂಗ್ರೆಸ್ ಪಾಳೆಯದಲ್ಲಿ ಸಂಚಲನ ಮೂಡಿಸಿ ಹಲವು ಬಗೆಯ ವಿರೋಧದ ಮಧ್ಯೆಯೂ ಈ ಮೊದಲು ದಾನಪ್ಪ ಹುಲಜತ್ತಿ ಅವರನ್ನು ನೇಮಕ ಮಾಡಲಾಗಿತ್ತು. ನಂತರ ಅನೇಕ ಚರ್ಚೆ, ಬೆಳವಣಿಗೆ ನಡೆದು ಈಗ ಅಧ್ಯಕ್ಷರ ಬದಲಾವಣೆಯಾಗಿ ಸುರೇಶ ಪಾಟೀಲ ನೇಮಕಗೊಂಡಿದ್ದಾರೆ.

ಅಧ್ಯಕ್ಷ ಸ್ಥಾನದ ನೇಮಕಾತಿಗೆ ಮೊದಲು ತೀವ್ರ ಪೈಪೋಟಿ ನಡೆದು ಸುರೇಶ ಪಾಟೀಲ, ಶಂಕರ ಕೆಸರಗೊಪ್ಪ ಹಾಗೂ ದಾನಪ್ಪ ಹುಲಜತ್ತಿ ಅವರುಗಳ ಹೆಸರು ಕೇಳಿಬಂದಿದ್ದವಾದರೂ ಕ್ಷೇತ್ರದ ನಾಯಕಿ ಮಾಜಿ ಸಚಿವೆ ಉಮಾಶ್ರೀ ಅವರ ಬಳಗದಲ್ಲಿ ಗುರುತಿಸಿಕೊಂಡಿದ್ದ ದಾನಪ್ಪ ಹುಲಜತ್ತಿ ಮೇಲುಗೈ ಸಾಧಿಸಿ ಅಧ್ಯಕ್ಷರಾಗಿದ್ದರು. ಇದೀಗ ದಿಢೀರ್ ಬದಲಾವಣೆ ಮೂಲಕ ಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಬಳಗದ ಸುರೇಶ ಪಾಟೀಲರಿಗೆ ಪಕ್ಷ ಮಣೆ ಹಾಕಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ.

# ವಿದ್ಯುತ್ ವ್ಯತ್ಯಯ ಉಂಟಾಗಲಿದೆ

**ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :**

ಸೈದಾಪೂರ 110/33/11ಕೆ.ವಿ ಸಬ್‌ಸ್ಟೇಷನ್‌ನಲ್ಲಿ 3ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ನಿರ್ವಹಿಸುತ್ತಿರುವ ಹಿನ್ನೆಲೆ 2025ರ ಡಿಸೆಂಬರ್ 26ರ ಶುಕ್ರವಾರ ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 3 ಗಂಟೆಯ ವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಯಾದಗಿರಿ ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಕಾರ್ಯ ಮತ್ತು ಪಾಲನಾ ಉಪ ವಿಭಾಗ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ವಿ) ಮಾರ್ಕಂಡೇಶ್ವರ ಅವರು ತಿಳಿಸಿದ್ದಾರೆ.110/33/11 ಕೆ.ವಿ ಸೈದಾಪೂರ ವಿದ್ಯುತ್ ಉಪಕೇಂದ್ರ, 33/11 ಕೆ.ವಿ ಕಡೇಚೂರ ವಿದ್ಯುತ್ ಉಪಕೇಂದ್ರ, 33/11ಕೆ.ವಿ ಬದ್ದೇಪಲ್ಲಿ ವಿದ್ಯುತ್ ಉಪಕೇಂದ್ರ, ಈ 110 ಕೆ.ವಿ ಮತ್ತು 33 ಕೆ.ವಿ ವಿದ್ಯುತ್ ಉಪಕೇಂದ್ರಗಳಿಂದ ವಿದ್ಯುತ್ ಸರಬರಾಜು ಮಾಡುವ ಎಲ್ಲಾ 11 ಕೆ.ವಿ ಮಾರ್ಗಗಳಿಂದ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಸೈದಾಪೂರ, ಇಂದಿರಾ ನಗರ, ಹೆಗ್ಗಣಗೇರಾ, ಕಡೇಚೂರ, ಬ್ಯಾಡಿಹಾಳ, ಚಾಲಚೇಡ್, ಬದ್ದೇಪಲ್ಲಿಯ ಸುತ್ತುಮುತ್ತಲಿನ ಗ್ರಾಮಗಳಿಗೆ, ತಾಂಡಾಗಳಿಗೆ ಮತ್ತು ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. ಗ್ರಾಹಕರು ಜೆಸ್ಕಾಂಗೆ ಸಹಕರಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಂಸ್ಕೃತಿಕ ಭವನ ಕಾಮಗಾರಿಗೆ ಭೂಮಿ ಪೂಜೆ



**ಮಲ್ಲಮ್ಮ ನುಡಿಬಾಗಲಕೋಟೆ:**

ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ಮತ್ತು ಶಿಕ್ಷಣ ಇಲಾಖೆ ಹಲವಾರು ಯೋಜನೆ ರೂಪಿಸಿದ್ದು ವಿದ್ಯಾರ್ಥಿಗಳು ಅವುಗಳ ಲಾಭ ಪಡೆದುಕೊಳ್ಳಬೇಕೆಂದು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿದರು. ಜಿಲ್ಲೆಯ ಹುನಗುಂದ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ತಮ್ಮ ಪ್ರದೇಶಾಭಿವೃದ್ಧಿ ನಿಧಿಯಲ್ಲಿ 41 ಲಕ್ಷ ರೂ. ಅನುದಾನದಲ್ಲಿ ನಿರ್ಮಿಸಲಿರುವ ಸಾಂಸ್ಕೃತಿಕ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು ತಾಲೂಕಿನಲ್ಲಿಯೇ ಗುಣ ಮಟ್ಟದ ಶಿಕ್ಷಣ ಸಿಗುತ್ತಿರುವ ಈ ಕಾಲೇಜಿನಲ್ಲಿನ ವಿದ್ಯಾರ್ಥಿಗಳು ಸತತ ಅಧ್ಯಯನದ ಮೂಲಕ ಉತ್ತಮ ಫಲಿತಾಂಶ ಪಡೆದು ಎಲ್ಲರ ಪ್ರೀತಿಗೆ ಪಾತ್ರರಾಗಬೇಕೆಂದರು. ಇದೇ ವೇಳೆಗೆ ಎಸ್.ಆರ್ ಕೆ.ಸ್ಮಾರಕ ಪ್ರತಿಷ್ಠಾನದಿಂದ ಸುಸಜ್ಜಿತ ಗ್ರಂಥಾಲಯವನ್ನು ನಿರ್ಮಿಸಲಾಗುವುದು ಎಂದರು.

ಸಿ.ಡಿ.ಸಿ ಸದಸ್ಯರಾದ ಚಂದ್ರಶೇಖರ ಚಟ್ನಿಹಾಳ, ಹುಚ್ಚೇಶ ಕಾಳಹಸ್ತಿಮಠ, ಪ್ರಭು ನಾಗೂರ, ಮುತ್ತಣ್ಣ ಗಂಜಿಹಾಳ, ಮುತ್ತು ಬ್ಯಾಳಿ, ರವಿ ಹಳಪೇಟಿ, ರೇಖಾ ಬ್ಯಾಳಿ, ಅಶ್ವಿನಿ ಹುಚನೂರ, ವಕೀಲ ಮಹಾಂತೇಶ ಅವಾರಿ, ಲೇಖಕ ಸಿದ್ದಲಿಂಗಪ್ಪ ಬೀಳಗಿ ಉಪಸ್ಥಿತರಿದ್ದರು. ಪ್ರಾಚಾರ್ಯ ಶರಣಪ್ಪ ಹೂಲಗೇರಿ ಸ್ವಾಗತಿಸಿದರು. ಪ್ರತಿಷ್ಠಾನ ಸಂಚಾಲಕ ಎಸ್ಕೆ ಕೊನೆಸಾಗರ ಯೋಜನೆ ವಿವರ ತಿಳಿಸಿದರು. ಐ.ಎಚ್.ನಾಯಕ ವಂದಿಸಿದರು.

# ಗ್ಯಾರಂಟಿ ಯೋಜನೆಗಳ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ :**

ಜಿಲ್ಲಾ ಪಂಚಾಯತ ಸ್ಥಾಯಿ ಸಮಿತಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷರಾದ ಅನೀಲಕುಮಾರ ದಿಡ್ಡಿ ಅವರ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆ ಬುಧವಾರ ಜರುಗಿತು.

ಶಕ್ತಿ ಯೋಜನೆಯಡಿ ಜಿಲ್ಲೆಯಲ್ಲಿ ಬೇಡಿಕೆಗಳಿಗೆ ಅನುಸಾರವಾಗಿ ಹೆಚ್ಚುವರಿ ಟ್ರಿಪ್‌ಗಳನ್ನು ಹೆಚ್ಚಿಸಲಾಗಿದೆ. ಕಳೆದ ಸಭೆಯಲ್ಲಿ ಸೂಚಿಸಿದಂತೆ ಈಗಾಗಲೇ 19 ಟ್ರಿಪ್‌ಗಳನ್ನು ಹೆಚ್ಚಿಗೆ ಮಾಡಲಾಗಿದ್ದು, ಇನ್ನು 8 ಟ್ರೇಪ್‌ಗಳನ್ನು ಮಾಡಲಾಗುತ್ತಿದೆ. ಇಳಕಲ್ಲಿನ ಗುರುಬಸವ ನಗರ–ಕ್ಕೆ ಬಸ್ ನಿಲುಗಡೆ ಸೇರಿದಂತೆ ಬಾದಾಮಿಯಿಂದ ಬಾಗಲಕೋಟೆಗೆ ಸಂಜೆ 5 ರಿಂದ 7 ವರೆಗೆ ಹೆಚ್ಚುವರಿ ಟ್ರೇಪ್‌ಗಳನ್ನು ಮಾಡುವಂತೆ ತಾಲೂಕಾ ಮಟ್ಟದ ಸಮಿತಿಯ ಅಧ್ಯಕ್ಷರು ಸಭೆಗೆ ತಿಳಿಸಿದಾಗ ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲು ಜಿಲ್ಲಾ ಸಂಚಾರಿ ನಿಯಂತ್ರಕರಿಗೆ ಸೂಚಿಸಿದರು.

ಬಸ್‌ ನಿಲ್ದಾಣಗಳಲ್ಲಿ ಸ್ವಚ್ಛತೆಗೆ ಹೆಚ್ಚಿನ ಒತ್ತು ನೀಡಬೇಕು. ಶೌಚಾಲಯಗಳು ಸುಸ್ಥಿತಿಯಲ್ಲಿ ಇರುವದರ ಜೊತೆಗೆ ಮೂಲಭೂತ ಸೌಲಭ್ಯಗಳ ಒತ್ತು ನೀಡಬೇಕು. ಸಮಸ್ಯೆಗಳ ಪರಿಹಾರ ಕಂಡುಕೊಂಡಳ್ಳಲು ಬಸ್ ಚಾಲಕ, ನಿರ್ವಾಹಕರು ಹಾಗೂ ಸಾರ್ವಜನಿಕರ ನಡುವೆ ಒಂದು ಕಾರ್ಯಾಗಾರ ನಡೆಸುವ ಅಗತ್ಯವಿದ್ದು, ಕಾರ್ಯಾಗಾರ ಆಯೋಜನೆಗೆ ಕ್ರಮವಹಿಸುವಂತೆ ಜಿಲ್ಲಾ ಸಂಚಾರಿ ನಿಯಂತ್ರಕರಿಗೆ ಅದ್ಯಕ್ಷರು ತಿಳಿಸಿದರು. ತಾಲೂಕಾ ಹಂತದಲ್ಲಿ ಬಸ್‌ಗಳ ಸಮಸ್ಯೆ ನಿವಾರಣೆಯಾಗದಿದ್ದಲ್ಲಿ ಜಿಲ್ಲಾ ಸಂಚಾರಿ ನಿಯಂತ್ರಕರ ಕರೆ ಮಾಡುವಂತೆ ಆಯಾ ತಾಲೂಕಾ ಅದ್ಯಕ್ಷರಿಗೆ ತಿಳಿಸಿದರು.



ಗೃಹ ಜ್ಯೋತಿ ಯೋಜನೆಯಡಿ ಜಿಲ್ಲಾ ವ್ಯಾಪ್ತಿಯಲ್ಲಿ 437585 ಭಾಗ್ಯಜ್ಯೋತಿ, ಕುಟೀರ ಜ್ಯೋತಿ ಹಾಗೂ ಗೃಹಬಳಕೆಯ ಸ್ಥಾವರಗಳಿದ್ದು, ಅದರಲ್ಲಿ 429605 ಗೃಹ ಬಳಕೆ–ಯ ಸ್ಥಾವರಗಳು ಗೃಹಜ್ಯೋತಿ ಯೋಜನೆಯಡಿ ನೋಂದಾಯಿಸಿದ್ದು, 7980 ಸ್ಥಾವರಗಳ ನೋಂದಣಿ ಹಂತ ಪ್ರಗತಿಯಲ್ಲಿದೆ. ಸರಕಾರಿ ಶಾಲೆಗಳಿಗೂ ಗೃಹಜ್ಯೋತಿ ಅಡಿಗೆ ಬರುತ್ತಿದ್ದು, ಶಾಲೆಯ ಯೂಡೈಸ್ ನಂಬರ ಎಂಟ್ರಿಮಾಡಿ ಆ ಶಾಲೆಯ ಮುಖ್ಯೋಪಾದ್ಯಾಯ ಮೊಬೈಲ್‌ಗೆ ಓಟಿಪಿ ಮೂಲಕ ಉಚಿತ ವಿದ್ಯುತ್ ಪಡೆಯಬಹುದಾಗಿದೆ ಎಂದು ಹೆಸ್ಕಾಂ ಅಧಿಕಾರಿಗಳು ಸಭೆಗೆ ತಿಳಿಸಿದರು.

ಗೃಹಲಕ್ಷ್ಮೀ ಯೋಜನೆಯಡಿ ನೋಂದಣಿಯಾದ 424733 ಅರ್ಹ ಫಲಾನುಭವಿಗಳು ಇದರ ಲಾಭ ಪಡೆದುಕೊಳ್ಳುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಜಿಲ್ಲೆಯಲ್ಲಿ 15,25,803 ಫಲಾನುಭವಿಗಳು ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಜೂನ್ ಮಾಹೆಯಿಂದ ಸೆಪ್ಟೆಂಬರ ವರೆಗೆ ಅಕ್ಕಿಯ ಜೊತೆಗೆ ಜೋಳವನ್ನು ಸಹ ವಿತರಣೆ ಮಾಡಲಾಗಿದೆ. ಕಳೆದ 2024–25ನೇ ಸಾಲಿನಲ್ಲಿ ಅನಧಿಕೃತ ಅಕ್ಕಿ ಸಾಗಾಣಿಕೆ ಹಾಗೂ ದಾಸ್ತಾನು ಮಾಡಿದವರ ಮೇಲೆ ಅವಶ್ಯಕ ವಸ್ತುಗಳ ಕಾಯ್ದೆಯಡಿ 16 ಪ್ರಕರಣಗಳನ್ನು ದಾಖಲಿಸಿ 1020.30 ಕ್ವಿಂಟಲ್ ಅಕ್ಕಿ ಹಾಗೂ 12 ವಾಹನಗಳನ್ನು ಜಪ್ತಿ ಮಾಡಿ 26 ಜನ ಆರೋಪಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ ಎಂದು ಜಂಟಿ ಆಹಾರ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಸಭೆಗೆ ತಿಳಿಸಿದರು. ಹೆಚ್ಚುವರಿ 5 ಕೆಜಿ ಅಕ್ಕಿಯ ಬದಲಿಗೆ ಇಂದಿರಾ ಕಿಟ್ ಕೊಡುವ ಚಿಂತನೆ ಸರಕಾರದ ಮಟ್ಟದಲ್ಲಿದೆ ಎಂದು ತಿಳಿಸಿದರು.

ಯುವನಿಧಿ ಯೋಜನೆಯಡಿ ಜಿಲ್ಲೆಯಲ್ಲಿ 22038 ಜನ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಸಭೆಯಲ್ಲಿ ಜಿ.ಪಂ ಸಿಇಓ ಶಶಿಧರ ಕುರೇರ, ಉಪ ಕಾರ್ಯದರ್ಶಿ ಎನ್. ವಾಯ್.ಬಸರಿಗಿಡದ, ಜಿಲ್ಲಾ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾದ ಶಂಕರಪ್ಪ ನೇಗಲಿ, ಜಯಶ್ರೀ ತಿಮ್ಮಾಪೂರ, ಶಿವಪ್ಪ ಕೋನೇರಿ, ರಫೀಕ್ ಬೈರಕದಾರ, ರವೀಂದ್ರ ಯಡಹಳ್ಳಿ, ಸದಸ್ಯರಾದ ಮಾಗುಂಡಪ್ಪ ಬೂದಿಹಾಳ, ಯಮನಪ್ಪ ಹೆಬ್ಬಳ್ಳಿ, ನೂರಂದಗೌಡ ಕಲಗೋಡಿ, ಮಹಾಂತೇಶ ಹನಮನಾಳ, ಅನವೀರಯ್ಯಾ ಪ್ಯಾಟಿಮಠ, ಮಹಾಂತೇಶ ಮಾಚಕನೂರ, ಬಸವಂತಪ್ಪ ಪಾಟೀಲ, ನೇಮಣ್ಣ ಸಾವಂತನವರ, ಎಸ್.ಎನ್. ರಾಂಪೂರ, ಬಾಸ್ಕರ ಬಡಿಗೇರ, ಉಸ್ಮಾನಸಾಬ್, ವಾಸು ಕಡಪಟ್ಟಿ, ವಿಜಯಕುಮಾರ ಶಿರೂರ ಸೇರಿದಂತೆ ಯೋಜನೆ ಅನುಷ್ಠಾನ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕಮಲನಗರನಲ್ಲಿ ರೈಲು ನಿಲ್ಲಿಸುವ ವ್ಯವಸ್ಥೆ ಮಾಡಿ



**ಕಮಲನಗರ ರೈಲು ನಿಲ್ದಾಣದಲ್ಲಿ ನಿಲ್ಲಿಸಬೇಕಾದ ರೈಲುಗಳು:**

1) ನಾಂದೇಡ್–ಬೆಂಗಳೂರು ಎಕ್ಸ್‌ಪ್ರೆಸ್ ರೈಲುಗಳು.(16593,16594)
2) ಮುಂಬೈ ಸಿಎಸ್‌ಟಿಎಂ–ಬೀದರ್ ಎಕ್ಸ್‌ಪ್ರೆಸ್ ರೈಲು. (22143, 22144)
3) ಔರಂಗಾಬಾದ್–ಹೈದ್ರಾಬಾದ್. ಎಕ್ಸ್‌ಪ್ರೆಸ್ ರೈಲು. (17254, 17253)
4) ಪುಣೆ–ಹೈದರಾಬಾದ್ ಎಕ್ಸ್‌ಪ್ರೆಸ್ ರೈಲು. (17014, 17013)
5) ಔರಂಗಾಬಾದ್–ರೇಣಿಗುಂಟ ಎಕ್ಸ್‌ಪ್ರೆಸ್ ರೈಲು.
6) ಲೋಕಮಾನ್ಯ ತಿಲಕ್ ಮುಂಬೈ–ಬೀದರ್ ಎಕ್ಸ್‌ಪ್ರೆಸ್ ರೈಲು.
7) ಸಾಯಿನಗರ ಶಿರಡಿ ಎಕ್ಸ್‌ಪ್ರೆಸ್ ರೈಲುಗಳು. (17001, 17205, 17206, 17207, 17002)

**ಮಲ್ಲಮ್ಮ ನುಡಿ ವಾರ್ತೆ**

**ಕಮಲನಗರ:** ನೂತನ ತಾಲ್ಲೂಕು ಹೋರಾಟ ಸಮಿತಿ ಕಮಲನಗರ ವತಿಯಿಂದ ದಕ್ಷಿಣ ಮಧ್ಯ ರೈಲ್ವೆಯ ಡಿ.ಆರ್.ಎಂ. ರಾದ ಡಾ. ಆರ್. ಗೋಪಾಲಕೃಷ್ಣನ ಅವರಿಗೆ ಬುಧವಾರ ಮನವಿ ಪತ್ರ ಕೊಟ್ಟು ಕಮಲನಗರ ರೈಲು ನಿಲ್ದಾಣದಲ್ಲಿ ಎಲ್ಲಾ ಎಕ್ಸ್‌ಪ್ರೆಸ್ ರೈಲು ನಿಲ್ಲಿಸುವಂತೆ ಮನವಿ ಮಾಡಿದರು.ಈ ಸಂದರ್ಭದಲ್ಲಿ ಮಾತನಾಡಿದ,ಎಸ್.ಎನ್.ಶಿವಣಕರ ನಾಂದೇಡ್–ಬೆಂಗಳೂರು ಎಕ್ಸ್‌ಪ್ರೆಸ್ ರೈಲಿಗೆ ಆರಂಭವಾದ ದಿನದಿಂದ ಇಲ್ಲಿವರೆಗೆ ಕಮಲನಗರ ರೈಲು ನಿಲ್ದಾಣದಲ್ಲಿ ನಿಲುಗಡೆ ನೀಡಲಾಗಿತು. ಆದರೆ ದುರದೃಷ್ಟವಶಾತ್ ಇತ್ತೀಚೆಗೆ ಈ ರೈಲಿನ ನಿಲುಗಡೆಯನ್ನು ಹಿಂತೆಗೆದುಕೊಳ್ಳಲಾಗಿದೆ, ಇದು ಕಮಲನಗರ ನಿವಾಸಿಗಳಿಗೆ ಹೆಚ್ಚಿನ ಅನಾನುಕೂಲತೆಯನ್ನುಂಟು ಮಾಡಿದೆ.

ಕಮಲನಗರವು ಕರ್ನಾಟಕ–ಮಹಾರಾಷ್ಟ್ರಗಡಿಯಲ್ಲಿದೆ ಮತ್ತು ಇದು ಕಮಲನಗರ ಹಾಗೂ ಔರಾದ ಎರಡು ತಾಲೂಕುಗಳಲ್ಲಿ ಬರುವ 178 ಹಳ್ಳಿಗಳ ಜನ ಈ ನಿಲ್ದಾಣವನ್ನು ಅವಲಂಬಿಸಿದ್ದಾರೆ.ಹಾಗಾಗಿ ತಾವು ನಮ್ಮ ಮನವಿ ಪತ್ರವನ್ನು ಪರಿಗಣಿಸಿ ನಮ್ಮ ಸಮಸ್ಯೆ ಗೆ ಪರಿಹಾರ ಕೊಡುವಿರೆಂದು ವಿನಂತಿಸಿದರು.ಈ ಸಂದರ್ಭದಲ್ಲಿ ನೂತನ ತಾಲ್ಲೂಕು ಹೋರಾಟ ಸಮಿತಿ ಕಮಲನಗರನ ಅಧ್ಯಕ್ಷರಾದ ಬಾಲಾಜಿ ತೆಲಂಗೆ, ಶ್ರೀರಂಗ ಪರಿಹಾರ, ಸಾಯಿನಾಥ ಕಾಂಬ್ಳೆ, ಮಂಜುನಾಥ ಸ್ವಾಮಿ, ಅವಿನಾಶ ಶಿವನಕರ, ರವಿ ಮದನೂರ, ಶಿವಾನಂದ ವಡ್ಡೆ, ಮಹೇಶ ಸಜ್ಜನಶೆಟ್ಟಿ, ಸೇರಿದಂತೆ ಕಮಲನಗರ ಪಟ್ಟಣ ಮತ್ತು ತಾಲೂಕಿನ ಜನರು ಇದ್ದರು.

# ಪ್ರತಿಭಾವಂತ ಮಕ್ಕಳಿಗೆ ವರದಾನವಾದ ಪ್ರವೇಶ ಪರೀಕ್ಷೆ ಇಂದು ಡೈಮಂಡ್ ಕಾಲೇಜ್ :ಶಿಷ್ಯ ವೇತನ ಪ್ರವೇಶ ಪರೀಕ್ಷೆ

**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಪಟ್ಟಣದ ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆ ಅಡಿಯಲ್ಲಿ ನಡೆಯುತ್ತಿರುವ ಬೀದರ, ಭಾಲ್ಕಿ, ಬಸವಕಲ್ಯಾಣ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ 2026–27ನೇ ಶೈಕ್ಷಣಿಕ ಸಾಲಿಗಾಗಿ ಪಿಯುಸಿ ಪ್ರಥಮ ವರ್ಷದ ವಿಜ್ಞಾನ ವಿಭಾಗಕ್ಕೆ ಪ್ರವೇಶ ಪಡೆಯಲು ರಿಯಾಯತಿ ಶಿಷ್ಯವೇತನ ಪ್ರವೇಶ ಪರೀಕ್ಷೆ ಡಿ.25 ಮತ್ತು 28 ಕ್ಕೆ ಮುಂಜಾನೆ 10.30 ರಿಂದ ಮದ್ಯಾಹ್ನ 12.30 ಗಂಟೆ ವರೆಗೆ ನಡೆಸಲಾಗುತ್ತಿದೆ.ಈ ಕುರಿತು ಪ್ರಕಟಣೆ ಹೊರಡಿಸಿರುವ ಡೈಮಂಡ್ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಸ್ ಕೆ ಮಸ್ತಾನ ವಲಿ ಅವರು, ಗ್ರಾಮೀಣ ಭಾಗದ ಬಡ ರೈತಾಪಿ ಕುಟುಂಬದ ಮಕ್ಕಳಿಗಾಗಿ ರೂ.1.5





ಕೋ.ರಿಯಾಯತಿ ಶಿಷ್ಯವೇತನ ಪ್ರವೇಶ ಪರೀಕ್ಷೆ ಏರ್ಪಡಿಸಲಾಗಿದೆ.1ರಿಂದ 25 ರ‍್ಯಾಂಕ್ ಪಡೆದವರಿಗೆ ಸಂಪೂರ್ಣ ಉಚಿತ ಶುಲ್ಕದೊಂದಿಗೆ ಪಿಯು ವರ್ಗಕ್ಕೆ ಪ್ರವೇಶ ನೀಡಲಾಗುವುದು.

26 ರಿಂದ 100 ರ‍್ಯಾಂಕ್ ಪಡೆದವರಿಗೆ ಶೇ.75 ಶುಲ್ಕ, 101 ರಿಂದ 250 ರ‍್ಯಾಂಕ್ ಪಡೆದವರಿಗೆ ಶೇ.50 ಶುಲ್ಕ,251 ರಿಂದ 500 ರ‍್ಯಾಂಕ್ ಪಡೆದವರಿಗೆ ಶೇ.25 ಶುಲ್ಕ,501 ರಿಂದ 750 ರ‍್ಯಾಂಕ್ ಪಡೆದವರಿಗೆ ಶೇ.10 ರಷ್ಟು ಕಾಲೇಜಿನ ಒಟ್ಟು ಶುಲ್ಕದಲ್ಲಿ ವಿನಾಯಿತಿ ನೀಡಲಾಗುವುದು .ಪ್ರತಿ ವರ್ಷ ನಮ್ಮ ಸಂಸ್ಥೆಯಲ್ಲಿ ಅಧ್ಯೆಯನ ಮಾಡಿದ ನೂರಾರು ವಿದ್ಯಾರ್ಥಿಗಳು ಸರ್ಕಾರಿ ಕೋಟಾದಡಿ ಮೆಡಿಕಲ್, ಡೆಂಟಲ್, ಇಂಜಿನಿಯರಿಂಗ್ ಕೋರ್ಸ್ಗೆ ಪ್ರವೇಶ ಪಡೆದಿದ್ದಾರೆ ಎಂದು ಅಧ್ಯಕ್ಷ ಮಸ್ತಾನವಲಿ ತಿಳಿಸಿದ್ದಾರೆ.

ಡೈಮಂಡ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೈ.ಮಾಧವರಾವ ಅವರು, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದ 10ನೇ ತರಗತಿಯಲ್ಲಿ ಅಧ್ಯೆಯನಗೈಯುತ್ತಿರುವ ವಿದ್ಯಾರ್ಥಿಗಳಿಗೆ ಕೆ ಸೆಟ್,

ನೀಟ್, ಜೆಇಇ ಪರೀಕ್ಷೆ ಎದುರಿಸಲು ಆತ್ಮಸ್ಥೈರ್ಯ ತುಂಬಲು ಡೈಮಂಡ್ ಶಿಕ್ಷಣ ಸಂಸ್ಥೆ ಈ ಒಂದು ನೂತನ ಸುವರ್ಣಾವಕಾಶ ಕಲ್ಪಿಸಲಾಗಿದೆ.ವಿಶೇಷವಾಗಿ ವಿದ್ಯಾರ್ಥಿಗಳಿಗೆ ಸಂಸ್ಕಾರಭರಿತ ಗುಣಮಟ್ಟದ ಶಿಕ್ಷಣ ನೀಡುವ ಸದುದ್ದೇಶದಿಂದ ರಿಯಾಯತಿ ಶಿಷ್ಯ ವೇತನ ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದೆ.10ನೇ ತರಗತಿಯಲ್ಲಿ ಅಧ್ಯೆಯನ ಮಾಡುತ್ತಿರುವ ಮಕ್ಕಳಿಗೆ ಭೌತಶಾಸ್ತ್ರ(20 ಪ್ರಶ್ನೆ), ರಸಾಯನಶಾಸ್ತ್ರ(20), ಜೀವಶಾಸ್ತ್ರ(20) ಮತ್ತು ಗಣಿತ ವಿಷಯ (40)ಪ್ರಶ್ನೆ ಒಟ್ಟು 100 ಪ್ರಶ್ನೆಗಳ ಪರೀಕ್ಷೆ ತೆಗೆದುಕೊಳ್ಳಲಾಗುತ್ತದೆ.

ಡಿ.25 ಮತ್ತು 28 ರಂದು ಬೀದರ, ಭಾಲ್ಕಿ ಮತ್ತು ಬಸವಕಲ್ಯಾಣದ ಡೈಮಂಡ್ ಕಾಲೇಜುಗಳ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಹತ್ತನೆವರ್ಗದ ವಿದ್ಯಾರ್ಥಿ, ಪಾಲಕರು ಶಿಷ್ಯ ವೇತನ ಪ್ರವೇಶ ಪರೀಕ್ಷೆಯ ಲಾಭ ಪಡೆದುಕೊಳ್ಳಬೇಕು ಎಂದು ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಅಶ್ವಿನ್ ಭೋಸ್ಲೆ ತಿಳಿಸಿದ್ದಾರೆ.

# ಡಿ,27ರಂದು ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯ

ರಾಯಚೂರು: ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ನೋಡಲ್ ಆಫೀಸರ್ 220 ಕೆವಿ ಸ್ವೀಕರಣ ಕೇಂದ್ರ ಕೆಪಿಟಿಸಿಎಲ್ ರಾಯಚೂರು ಅವರ ಮೂರನೇ ತ್ರೈಮಾಸಿಕ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಪ್ರಯುಕ್ತ ಡಿಸೆಂಬರ್ 27ರ ಬೆಳಿಗ್ಗೆ 10 ರಿಂದ ಸಂಜೆ 06 ಗಂಟೆವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

ಅಂದು ಬೆಳಿಗ್ಗೆ 10ರಿಂದ ಸಿಇಓ ಆಫೀಸ್, ಶ್ರೀರಾಮ ನಗರ, ಉದಯ ನಗರ, ಆಜಾದ್ ನಗರ, ಸ್ಟೇಶನ್ ಏರಿಯಾ, ಇಂದಿರಾ ನಗರ, ಅಶೋಕ್ ಡಿಪೋ, ಗೋಲ್ ಮಾರ್ಕೆಟ್, ಚಾರಾ ಬಜಾರ್, ಮಚ್ಚಿಬಜಾರ್, ಕಮೇಲಾ, ಅರಬ್ ಮೊಲ್ಲಾ, ಆಟೋ ನಗರ, ಸಿಯಾತಲಾಬ್, ಗಂಜ್ ಸರ್ಕಲ್, ಗೋಶಾಲ ರೋಡ್, ಡಿಸ್ಟ್ರಿಕ್ಟ್ ಕೋರ್ಟ್, ಜಿಲ್ಲಾ ಪಂಚಾಯತ್ ಆಫೀಸ್, ಟಿಫಾನೀಸ್, ಬಸವೇಶ್ವರ ಸರ್ಕಲ್, ಫಾರೆಸ್ಟ್ ಆಫೀಸ್, ಫೈರ್ ಸ್ಟೇಶನ್, ವೆರ್ನ್ನರಿ ಆಸ್ಪತ್ರೆ, ಕಾಂಗ್ರೆಸ್ ಆಫೀಸ್, ಮಂಚಲಾಪುರ ಕ್ರಾಸ್, ಹೊಸ ಶಿವಂ ಆಸ್ಪತ್ರೆ, ಕ್ಲಾರಿಟಿ ಆಸ್ಪತ್ರೆ, ಭಂಡಾರಿ ಆಸ್ಪತ್ರೆ, ಸುದ್ದಿಮೂಲ, ಹಿಂದಿವರ್ಧಮಾನ, ಬಿಎಸ್‌ಎನ್‌ಎಲ್ ಕಚೇರಿ, ಹೊಂಡಾ ಶೋರೂಮ್, ಅಹ್ಮದ್ ಫಂಕ್ಷನ್ ಹಾಲ್, ಸುಣ್ಣಭಟ್ಟಿ, ಎಸ್‌ಆರ್‌ಎಸ್ ಲಾಡ್ಜ್, ರೈಲ್ವೆ ಸ್ಟೇಷನ್, ಆಫೀರ್ಸ್ ಕಾಲೋನಿ, ಆಶಾಪುರ ರಸ್ತೆ, ಗುಡ್ ಶೆಡ್ ರಸ್ತೆ, ಐಡಿಎಸ್‌ಎಮ್‌ಟಿ ಲೇಔಟ್, ಪವನ್ ಲೇಔಟ್, ಗ್ಯಾನ್ ಮಂದಿರ, ಆಫಿರ್ಸ್ ಕಾಲೋನಿ, ಮೆಥಡಿಸ್ಟ್ ಚರ್ಚ್, ಜಂಡಕಟ್ಟ, ನವರಂಗ ದರ್ವಾಜ, ಟಿಪ್ಪು ಸುಲ್ತಾನ್ ರೋಡ್, ಡಿ.ಸಿ. ಆಫೀಸ್ ಮುಂದುಗಡೆ, ಹಾಜಿ ಕಾಲೋನಿ, ಕೋಟ್‌ತಲಾರ್, ಹೊಸ ಸಿಎಮ್‌ಸಿ ಕಚೇರಿ, ಡ್ಯಾಡಿ ಕಾಲೋನಿ, ಆಶ್ರಫೀಯಾ ಕಾಲೋನಿ, ಕಾಕತೀಯ ಕಾಲೋನಿ, ಶಾಂತಿ ಕಾಲೋನಿ, ಡಾಲರ್ಸ್ ಕಾಲೋನಿ, ಪಿಸಿಬಿ ಕಾಲೋನಿ, ಪಾರ್ವತಿ ಕಾಲೋನಿ, ರಾಘವೇಂದ್ರ ಕಾಲೋನಿ, ಸಾರಾ ಟೀರ್ಸ್ ಕಾಲೋನಿ, ಒಳ ಚರಂಡಿ ಸಂಸ್ಕರಣ ಘಟಕ ಮಂಚಲಾಪೂರ ರೋಡ್, ಬಸವೇಶ್ವರ ಕಾಲೋನಿ, ಬಂದೇನವಾಜ್ ಕಾಲೋನಿ, ಭಾರತಿ ನಗರ, ಚೆಕ್ಪೋಸ್ಟ್, ಎನ್‌ಜಿಓ ಕಾಲೋನಿ, ಗೌಸಿಯಾ ಕಾಲೋನಿ, ಎಸ್.ಟಿ ನಿಜಾಮುದ್ದೀನ್ ಕಾಲೋನಿ, ದೇವರಾಜ್ ಅರಸ್ ಕಾಲೋನಿ. ಗಾಂಧಿ ಲೇಔಟ್, ಅಶೋಕ್ ಕುಮಾರ್ ಲೇಔಟ್, ಲಿಂಗಸುಗೂರು ರಸ್ತೆ, ವಿದ್ಯುತ್ ವ್ಯತ್ಯಯವಾಗಲಿದೆ.

# ಮುಖಂಡರ ಜೊತೆ ಡಿಸಿ ಸಭೆ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ

**ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ :**

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪ ಚುನಾವಣೆಗೆ ಸಂಬಂಧಿಸಿದಂತೆ ಮತದಾರ ಪಟ್ಟಿಯ ಸಂಕ್ಷಿಪ್ತ ಪರಿಷ್ಕರಣೆ ಕಾರ್ಯ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ಆಗಿರುವ ಜಿಲ್ಲಾ ಚುನಾವಣಾಧಿಕಾರಿ ಸಂಗಪ್ಪ ಹೇಳಿದರು. ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಬುಧವಾರ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಹಾಗೂ ಮತಗಟ್ಟೆಗಳ ತರ್ಕಬದ್ಧ ಪುನರ್ ಸಂಘಟಿಸುವ ಕುರಿತು ವಿವಿಧ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ರಾಜಕೀಯ ಪಕ್ಷದ ಮುಖಂಡರು ಬಾಗಲಕೋಟೆ ವಿಧಾನಸಭಾ ಮತಕ್ಷೇತ್ರದ ಉಪಚುನಾವಣೆಗೆ ಹಿನ್ನಲೆಯಲ್ಲಿ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ಹಕ್ಕು ಮತ್ತು ಆಕ್ಷೇಪಣೆಗಳು ಇದ್ದಲ್ಲಿ ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು. 2026 ಜನವರಿ 1 ರಂದು ಅರ್ಹತಾ ದಿನಾಂಕವನ್ನಾದರಿಸಿ ಮತದಾರರ ಪಟ್ಟಿಯಲ್ಲಿ ಹೊಸದಾಗಿ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ತಿದ್ದುಪಡಿ, ವರ್ಗಾವಣೆ ಕಾರ್ಯ ಸಹ ನಡೆಯಲಿದೆ. 2026 ಜನವರಿ, 3 ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು 2026 ಜನವರಿ 3 ರಿಂದ 24 ವರೆಗೆ ಕಾಲಾವಕಾಶ ನೀಡಲಾಗಿದೆ. 2026 ಫೆಬ್ರವರಿ 7 ರಂದು ಹಕ್ಕು ಮತ್ತು ಆಕ್ಷೇಪಗಳ ವಿಲೇವಾರಿ ಮಾಡಿ ಫೆಬ್ರವರಿ 24 ರಂದು ಅಂತಿ ಮತದಾರರ ಪಟ್ಟಿ ಪ್ರಕಟಿಸಲಾಗುತ್ತಿ ಎಂದು ತಿಳಿಸಿದರು.



ಮತಗಟ್ಟೆಗಳನ್ನು ತರ್ಕಬದ್ದವಾಗಿ ಪುನರ್ ಸಂಘಟಿಸುವ ಕುರಿತು ಮಾತನಾಡಿದನ ಜಿಲ್ಲಾಧಿಕಾರಿಗಳು ಬಾಗಲಕೋಟೆ ಮತಕ್ಷೇತ್ರಕ್ಕೆ ಸಂಬಂಧಿಸಿದ 1200ಕ್ಕೂ ಹೆಚ್ಚಿಗೆ ಮತದಾರರನ್ನು ಹೊಂದಿರುವ 51 ಮತಗಟ್ಟೆಗಳು ಇದ್ದು, ಅದರಲ್ಲಿ ಬಾಗಲಕೋಟೆ ನಗರದಲ್ಲಿ 35, 6 ಹುನಗುಂದ ತಾಲೂಕಿನಲ್ಲಿ, 10 ಬಾಗಲಕೋಟೆ ಗ್ರಾಮೀಣ ಪ್ರದೇಶದಲ್ಲಿ ಇರುತ್ತವೆ. ಇವುಗಳನ್ನು ತರ್ಕಬದ್ದವಾಗಿ ಪುನರ್ ಸಂಘಟಿಸಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಮಾತನಾಡಿದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಮರಣ ಹೊಂದಿದವರ ಹೆಸರುಗಳನ್ನು ತೆಗೆದುಹಾಕಲು ಹಾಗೂ ಸಾರ್ವಜನಿಕರಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಸ್ವೀಪ್ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ತಿಳಿಸಿದರು. ಕೆಲವೊಂದು ಮತಗಟ್ಟೆಗಳು 2 ಕಿ.ಮೀಕ್ಕಿಂತ ಹೆಚ್ಚಿಗೆ ಇದ್ದು, ಅವುಗಳ ಬದಲಾಗಿ ಹತ್ತಿರವಿರುವ ಸರಕಾರಿ ಕಟ್ಟಡಗಳಲ್ಲಿ ಬೂತ್ ಸ್ಥಾಪಿಸಲು ತಿಳಿಸಿದರು. ಈ ಬಗ್ಗೆ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವಸ್ವಾಮಿ ಸೇರಿದಂತೆ ವಿವಿಧ ರಾಜಕೀಯ ಮುಖಂಡರಾದ ಶ್ರೀನಿವಾಸ ಬಳ್ಳಾರಿ, ವಾಯ್.ಆರ್.ಮಾದರ, ಶಿವಾನಂದ ಟವಳಿ, ಯಲ್ಲಪ್ಪ ಸನಕ್ಯಾನವರ, ಕೃಷ್ಣಾ ಪಾಟೀಲ, ಎಂ.ಬಿ.ಸಿದಗೋನಿ, ಅಬ್ದುಲ ಬೆಣ್ಣೂರ, ಶ್ರೀಧರ ನಾಗರಬೆಟ್ಟ, ಅರ್ಜುನ ಹೊಸಮನಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಶಿರನಹಳ್ಳಿ ಗ್ರಾಮದಲ್ಲಿ ಸಂಗೊಳ್ಳಿ ರಾಯಣ್ಣ ಅವರ ಕಂಚಿನ ಪ್ರತಿಮೆ ಅನಾವರಣ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ಮಾಡಿದರು ನಂತರ ಕಾರ್ಯಕ್ರಮದಲ್ಲಿ ಮಾತನಾಡಿ ತಾಲೂಕಿನ ಯುವಕರು ಸಂಪೂರ್ಣವಾಗಿ ಶಿಕ್ಷಣವಂತರಾಗಿರಿ. ಜೀವನದಲ್ಲಿ ಮುಂದಿನ ಭವಿಷ್ಯಕ್ಕೆ ಜೀವನದ ಆಲೋಚನೆ ಮಾಡಬೇಕು ನಾನು ಶಾಸಕರಾಗಿದ್ದಾಗ ಸಮಯದಲ್ಲಿ ಶಾಸಕರ ಕೊಠಡಿಯನ್ನು ವಿದ್ಯಾಭ್ಯಾಸಕ್ಕೆ ನೀಡಿದ್ದೆ ಅದು ನನಗೆ ಹೆಮ್ಮೆಯ ವಿಚಾರ ಎಂದರು. ಈ ಸಂದರ್ಭದಲ್ಲಿ ಗೌಡಗೆರೆ ಮಠದ ನಟರಾಜ್ ಸ್ವಾಮೀಜಿಗಳು, ಮಾದಳ್ಳಿ ಉಕ್ಕಿನ ಕಂತೆ ಮಠದ ಸಾಂಬಾಸದ ಶಿವ ಸ್ವಾಮೀಜಿಗಳು , ಸಂಗೊಳ್ಳಿ ರಾಯಣ್ಣ ಯುವ ಗರ್ಜನೆ ರಾಜ್ಯ ಅಧ್ಯಕ್ಷ ರಾಜಶೇಖರ್, ಕಾವೇರಿ ಸ್ಪೆಷಲಿಸ್ಟ್ ಆಸ್ಪತ್ರೆಯ ವ್ಯವಸ್ಥಾಪಕರಾದ ಡಾ. ಲೋಹಿತ್, ರಾಜ್ಯ ಅಹಿಂದ ಅಧ್ಯಕ್ಷರಾದ ಶಿವ ಶಂಕರ್, ಜಿಲ್ಲಾ ಕುರುಬ ಸಮುದಾಯದ ಉಪಾಧ್ಯಕ್ಷರಾದ ಬಸವರಾಜ ಗೌಡ, ಮಾಜಿ ಜಿಪಂ ಸದಸ್ಯರಾದ ಅಮಿತ್ ದೇವರೆಟ್ಟಿ, ಸುರೇಂದ್ರ ಇನ್ನಿತರರು ಹಾಜರಿದ್ದರು.

## ರೈತರ ಸಮಸ್ಯೆಗಳಿಗೆ ರಾಜಕೀಯ ಇಚ್ಛಾಶಕ್ತಿ ಅಗತ್ಯ: ಲಕ್ಷಣ ದಸ್ತಿ



**ಬೀದರ್:** ವಿಶ್ವ ರೈತ ದಿನಾಚರಣೆಯ ಅಂಗವಾಗಿ ಕಾರಂಜ ಮುಳುಗಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿ ಹಾಗೂ ಬೀದರ್ ಜಿಲ್ಲಾ ಸಮಗ್ರ ಅಭಿವೃದ್ಧಿ ಜಂಟಿ ಕ್ರಿಯಾ ಸಮಿತಿ, ಬೀದರ್ ಇವರ ಸಂಯುಕ್ತ ಆಶ್ರಯದಲ್ಲಿ ದುಂಡು ಮೇಜಿನ ಸಭೆ ಆಯೋಜಿಸಲಾಗಿತ್ತು.

ಸಭೆಯಲ್ಲಿ ಚಿಂತಕರು, ಹಿರಿಯ ಹೋರಾಟಗಾರರು ಹಾಗೂ ಕಲ್ಯಾಣ ರ್ನಾಟಕ ಹೋರಾಟ ಸಮಿತಿ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಲಕ್ಷಣ ದಸ್ತಿ ಮಾತನಾಡಿ, ಬೀದರ್ ಜಿಲ್ಲೆಯ ಜ್ವಲಂತ ಸಮಸ್ಯೆಗಳಲ್ಲಿ ಕಾರಂಜ ಯೋಜನೆಯಡಿ ಭೂಮಿ ಕಳೆದುಕೊಂಡ ರೈತರಿಗೆ ಇನ್ನೂ ಸರಿಯಾದ ಪರಿಹಾರ ದೊರಕದಿರುವುದು ಅತ್ಯಂತ ಗಂಭೀರ ವಿಷಯ ಎಂದು ಹೇಳಿದರು. 2024ರ ಬೆಳಗಾವಿ ಚಳಿಗಾಲ ಅಧಿವೇಶನದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ ಅವರ ಉಪಸ್ಥಿತಿಯಲ್ಲಿ ಕಲಬುರಗಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸುವ ನರ್ಣಯ ಕೈಗೊಳ್ಳಲಾಗಿತ್ತು. ಮೂರು ತಿಂಗಳೊಳಗೆ ವರದಿ ಸಲ್ಲಿಸಬೇಕಿದ್ದರೂ ವಿಳಂಬವಾಗಿದೆ. ಆದರೂ ಡಿಸೆಂಬರ್ ಅಂತ್ಯದೊಳಗೆ ವರದಿ ರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಪ್ರಾದೇಶಿಕ ಆಯುಕ್ತರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು. ಈ ವರದಿ ಸಲ್ಲಿಕೆಯಾದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವರು ಇದನ್ನು ಸವಾಲಾಗಿ ತೆಗೆದುಕೊಂಡು ಹೊಸ ರ್ಷದ ಆರಂಭದಲ್ಲಿಯೇ ರೈತರಿಗೆ ಸಿಹಿ ಸುದ್ದಿ ನೀಡಬೇಕು ಎಂದು ಅವರು ಒತ್ತಾಯಿಸಿದರು.

ಸಭೆಯಲ್ಲಿ BSSK ಸಕ್ಕರೆ ಕರ್ಖಾನೆಯ ಪುನರಾರಂಭ, ಬೆಳೆಗಳಿಗೆ ವೈಜ್ಞಾನಿಕ ಬೆಂಬಲ ಬೆಲೆ ನಿಗದಿ ಹಾಗೂ ರೈತರು ಪಕ್ಷಾತೀತವಾಗಿ ಒಂದಾಗುವ ಅಗತ್ಯವಿದೆ ಎಂಬ ಮೂರು ಪ್ರಮುಖ ನರ್ಣಯಗಳನ್ನು ಮಂಡಿಸಿ ಎಲ್ಲ ರೈತರು ಕೈ ಎತ್ತಿ ಅಂಗೀಕರಿಸಿದರು.

ಹಿರಿಯ ನ್ಯಾಯವಾದಿ ಹಾಗೂ ರೈತ ಹೋರಾಟಗಾರ ಶ್ರೀ ಬಾಬು ಹೊನ್ನ ನಾಯಕ ಮಾತನಾಡಿ, ಜನವರಿ 16ರಂದು ನಡೆಯುವ ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರ ಮಟ್ಟದ ಕರ್ಯಕ್ರಮದಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ರೈತರಿಗೆ ಮಾಸಿಕ ಗೌರವಧನ ನೀಡುವ ವಿಷಯದಲ್ಲೂ ಧ್ವನಿ ಎತ್ತುವ ಅಗತ್ಯವಿದೆ ಎಂದರು.

ಕಾರಂಜ ಮುಳುಗಡೆ ಸಂತ್ರಸ್ತರ ಹಿತ ರಕ್ಷಣಾ ಸಮಿತಿ ಅಧ್ಯಕ್ಷ ಶ್ರೀ ಚಂದ್ರಶೇಖರ್ ಪಾಟೀಲ್ ಮಾತನಾಡಿ, ಬರುವ ರ್ಷದ ಮೊದಲ ತಿಂಗಳಲ್ಲೇ ರ್ಕಾರ ಸೂಕ್ತ ಪರಿಹಾರ ನೀಡದಿದ್ದರೆ ಹೋರಾಟ ಪುನರಾರಂಭವಾಗಲಿದೆ ಎಂದು ಎಚ್ಚರಿಸಿದರು.ರೈತ ಹೋರಾಟಗಾರರಾದ ರಾಜಪ್ಪ ಕೋಸಂ, ಡಾ. ರಾಜಶೇಖರ, ಜ್ಞಾನೋದಯ ಶಿಕ್ಷಣ ಸಂಸ್ಥೆ ಬೀದರಿನ ಅಧ್ಯಕ್ಷ ದಶರಥ ಗುರು, ರ್ನಾಟಕ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸದಸ್ಯ ವಿನಯ್ ಕುಮಾರ್ ಮಾಳಗೆ, ರ್ಧನ್ ರಾಥೋಡ್, ಸಂಗಾರೆಡ್ಡಿ ಮೊಹಮ್ಮದ್ ಸೋಲಾಪುರಿ, ಎಂ.ಡಿ. ಯೂಸುಫ್, ಲಕ್ಷ್ಮೀಬಾಯಿ ಖೌದೇ, ತೇಜಮ್ಮ ಹಿಲಾಲ್ಪುರ್, ಶಂಕರ ರಾವ್ ಮನ್ನಳ್ಳಿ, ಶಿವ ಬಗದಲ, ಮಾದಪ್ಪ ಬಸವರಾಜ ಹಿಂದಾ ಸೇರಿದಂತೆ ನೂರಕ್ಕೂ ಹೆಚ್ಚು ರೈತರು ದುಂಡು ಮೇಜಿನ ಸಭೆಯಲ್ಲಿ ಪಾಲ್ಗೊಂಡು ರ್ಚೆ ನಡೆಸಿ ಮಹತ್ವದ ನರ್ಣಯಗಳನ್ನು ಕೈಗೊಂಡರು. ಸಭೆಯನ್ನು ಹಿರಿಯ ಹೋರಾಟಗಾರ ವೀರಭದ್ರಪ್ಪ ಉಪ್ಪಿನ ಅವರು ನಿರೂಪಿಸಿ, ಸ್ವಾಗತ ಕೋರಿ ವಂದಿಸಿದರು.

## ರಿಮ್ಸ್ ಆಸ್ಪತ್ರೆಯ ವಾಹನ ಚಾಲಕನ ವಜಾಕ್ಕೆ ಒತ್ತಾಯ

**ರಾಯಚೂರು:** ಹೊರಗುತ್ತಿಗೆ ಅವಧಿ ಮುಗಿದರೂ ಅನಧಿಕೃತವಾಗಿ ಕರ್ತವ್ಯ ನಿರ್ವಹಿಸುತ್ತಿರುವ ರಿಮ್ಸ್ ಶ್ರದ್ಧಾಂಜಲಿ ವಾಹನ ಚಾಲಕನನ್ನು ಸೇವೆಯಿಂದ ತಕ್ಷಣ ವಜಾಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಾಮಾಜಿಕಹೋರಾಟಗಾರಅಂಬಾಜಿರಾವುಮೈದರ್ಕರ್ ಒತ್ತಾಯಿಸಿದರು.

ಅವರಿಂದು ನಗರದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ,ರಾಯಚೂರು ವೈದ್ಯಕೀಯ ವಿಜ್ಞಾನಗಳ ಸ್ವಾಯತ್ತತೆ ಸಂಸ್ಥೆ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಮೃತದೇಹಸಾಗಣೆಗೆಬಳಸಲಾಗುವಶ್ರದ್ಧಾಂಜಲಿವಾಹನವುಸಾರ್ವಜನಿಕರಿಗೆ ಉಚಿತ ಸೇವೆ ನೀಡಬೇಕಾದ ಅತ್ಯಂತ ಸಂವೇದನಾಶೀಲ ಸೇವೆಯಾಗಿದೆ. ಆದರೆ ದುರದೃಷ್ಟವಶಾತ್, ಈ ವಾಹನದ ಚಾಲಕನಾದ ಅಬ್ದುಲ್ ಮತೀನ್ ಎಂಬ ವ್ಯಕ್ತಿ ಈ ಸೇವೆಯನ್ನು ದುರುಪಯೋಗಪಡಿಸಿಕೊಂಡು, ಸಾರ್ವಜನಿಕರಿಂದ ಅಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾನೆಂದು ಆರೋಪಿಸಿದರು. ಈತನು ಎ.ಆರ್.ಸಿ ಸಂಸ್ಥೆ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದನು. ಆಗಸ್ಟ್ 30 ರಂದು ಸದರಿ ಗುತ್ತಿಗೆ ಅವಧಿ ಸಂಪೂರ್ಣ ಮುಕ್ತಾಯಗೊಂಡಿದೆ.ಗುತ್ತಿಗೆ ನವೀಕರಣವಾಗುವವರೆಗೆ ಕೆಲಸ ನಿರ್ವಹಿಸಬಾರದು ಎಂದು ಸಂಸ್ಥೆಯೇ ಸ್ಪಷ್ಟ ಸೂಚನೆ ನೀಡಿದ್ದರೂ ಸಹ,ಈತನು ಯಾವುದೇ ಅಧಿಕೃತ ಆದೇಶವಿಲ್ಲದೆ ಇಂದಿಗೂ ಕರ್ತವ್ಯ ನಿರ್ವಹಿಸುತ್ತಿರುವುದು ಕಾನೂನುಬಾಹಿರವಾಗಿದೆ ಎಂದರು.

# ಶಾಮನೂರು ಶಿವಶಂಕರಪ್ಪಗೆ ನುಡಿ ನಮನ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**



ಬೆಂಗಳೂರಿನಲ್ಲಿ 1000 ವಿದ್ಯಾರ್ಥಿನಿಯರಿಗೆ ಹಾಸ್ಟೆಲ್ ನಿರ್ಮಿಸಬೇಕು ಎಂಬುದು ಡಾ. ಶಾಮನೂರು ಶಿವಶಂಕರಪ್ಪ ಆಶಯವಾಗಿತ್ತು, ಈ ಕನಸು ನನಸು ಮಾಡಲು ನಾವು ಬದ್ಧ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಸಚಿವ ಈಶ್ವರ ಬಿ ಖಂಡ್ರೆ ಹೇಳಿದ್ದಾರೆ.

ಅಖಿಲಭಾರತವೀರಶೈವಲಿಂಗಾಯತ ಮಹಾಸಭಾ ವತಿಯಿಂದ ಬೆಂಗಳೂರಿನ ತರಳಬಾಳು ಭವನದಲ್ಲಿ ಆಯೋಜಿಸಿದ್ದ ಡಾ. ಶಾಮನೂರು ಶಿವಶಂಕರಪ್ಪ ನುಡಿನಮನದಲ್ಲಿ ಮಾತನಾಡಿದ ಅವರು, ಇದಕ್ಕಾಗಿ 2 ಎಕರೆ ಜಮೀನು ಖರೀದಿಸಲಾಗಿದ್ದು, ರೂಪುರೇಶೆ ಸಿದ್ಧವಾಗಿದೆ ಎಂದರು.

ಮೂರು ಅವಧಿಗೆ ಸತತ ಹದಿಮೂರೂವರೆ ವರ್ಷ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರಾಗಿ ಅವರು ಜನರಿಂದ,ಜನರಿಗಾಗಿ,ಜನರಿಗೋಸ್ಕರ ಬದುಕಿ, ಪ್ರೀತಿಯ ಅಪ್ಪಾಜಿಯಾಗಿದ್ದರು. ಅವರ ಜೀವನೋತ್ಸಾಹ ಎಲ್ಲರಿಗೂ ಮಾದರಿ ಎಂದರು.

ಆಡಳಿತ ಪಕ್ಷದಲ್ಲೇ ಇರಲಿ, ವಿರೋಧ ಪಕ್ಷದಲ್ಲೇ ಇರಲಿ, ಯಾರಿಗೂ ಅಂಜದ ಅಳುಕದೆ ಸಮಾಜದ ಹಿತ ಕಾಯುವ ವಿಚಾರದಲ್ಲಿ ನಿರ್ಭಯವಾಗಿ, ನಿಷ್ಠುರವಾಗಿ ಮಾತನಾಡುತ್ತಿದ್ದರು. ತಮ್ಮ ತಂದೆ ಡಾ. ಭೀಮಣ್ಣ ಖಂಡ್ರೆ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ಮಹಾಸಭಾದ ಅಭಿವೃದ್ಧಿಗೆ ಶ್ರಮಿಸಿದ್ದರು ಎಂದರು.

ಸಂಸ್ಥಾನಗಳು ಹುಟ್ಟುತ್ತವೆ ಅಳಿಯುತ್ತವೆ. ಮನುಷ್ಯ ಹುಟ್ಟುತ್ತಾನೆ ಸಾಯುತ್ತಾನೆ. ಆದರೆ ಹುಟ್ಟು ಸಾವಿನ ನಡುವಿನ ಅವಧಿಯಲ್ಲಿ ಮಾಡಿದ ಕಾರ್ಯ ಶಾಶ್ವತವಾಗಿರುತ್ತದೆ. ಇಂತಹ ಸಾಧಕರಲ್ಲಿ ಶಿವಶಂಕರಪ್ಪ ಅವರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತಾರೆ ಎಂದರು.

ತುಮಕೂರು ಸಿದ್ದಗಂಗಾಮಠದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಮಾತನಾಡಿ, ಶಾಮನೂರು ಶಿವಶಂಕರಪ್ಪ ಅವರಲ್ಲಿ ಧನ ಶ್ರೀಮಂತಿಕೆಯ ಜೊತೆಗೆ ಹೃದಯ ಶ್ರೀಮಂತಿಕೆ ದೊಡ್ಡದಾಗಿತ್ತು. ಸಾಮಾನ್ಯ ವ್ಯಾಪಾರಿಗಳ ಕುಟುಂಬದಲ್ಲಿ ಹುಟ್ಟಿ, ಉದ್ಯಮಿಯಾಗಿ, ಶಾಸಕರಾಗಿ, ಸಂಸದರಾಗಿ, ಸಚಿವರಾಗಿ ಅವರು ಈ ನಾಡಿಗೆ ನೀಡಿರುವ ಕೊಡುಗೆ ಅಪಾರವಾದ್ದು ಎಂದರು.

ಸತ್ತಾಗ ಉಸಿರುವುದಿಲ್ಲ ಆದರೆ ಹೆಸರು ಉಳಿಯಬೇಕು ಎಂದು ಹೇಳಿದ ಅವರು, ಬಸವಣ್ಣನವರ ಮಾತಿನಂತೆ ಬಾಗಿದ ತಲೆ, ಮುಗಿದ ಕೈಗೆ ಅನುರೂಪರಾಗಿದ್ದ ಶಿವಶಂಕರಪ್ಪ ಅವರು ಸಿದ್ಧಿಯೊಂದಿಗೆ ಸಾಧನೆ ಮಾಡಿದ ಪರಿಶ್ರಮಿ. ನಿರಂತರ ಪರಿಶ್ರಮದಿಂದ ಅವರು ಶಿಕ್ಷಣ, ಉದ್ಯಮ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿದು, ದಾವಣಗೆರೆಯನ್ನು ವಿಶ್ವ ಭೂಪಟದಲ್ಲಿ ಗುರುತಿಸುವಂತೆ ಮಾಡಿದರು ಎಂದರು.

ಸೂತ್ತೂರು ಸಂಸ್ಥಾನದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಮಾತನಾಡಿ ಶಿವಶಂಕರಪ್ಪ ಅವರು ಒಂದು ಸಮುದಾಯದ ಪ್ರಾತಿನಿಧಿಕ ವ್ಯಕ್ತಿಯಾಗಿ ಬದುಕಿದವರು, ತಮ್ಮ ಪಾಲಿಗೆ ಬಂದ ಕಾಯಕವನ್ನು ಸಮರ್ಥವಾಗಿ ನಿರ್ವಹಿಸಿದ ಮೇರು ವ್ಯಕ್ತಿಯಾಗಿದ್ದರು ಎಂದು ಸ್ಮರಿಸಿದರು.

ಕೈಗಾರಿಕಾ ನಗರವನ್ನು ಜ್ಞಾನಕಾಶಿಯಾಗಿ ಪರಿವರ್ತಿಸಿದ ಕೀರ್ತಿ ಶಾಮನೂರು ಅವರಿಗೆ ಸಲ್ಲುತ್ತದೆ. ಎಲ್ಲರನ್ನೂ ಪ್ರೀತಿಸುತ್ತಿದ್ದ ಅವರು ಅಜಾತಶತ್ರುವಾಗಿದ್ದರು. ಪಕ್ಷಭೇದ ಮರೆತು ಎಲ್ಲರೂ ಅವರನ್ನು ಗೌರವದಿಂದ ಕಾಣುತ್ತಿದ್ದರು ಎಂದರು.

ಸಿರಿಗೆರೆ ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶರಣ ಪ್ರಕಾಶ್ ಪಾಟೀಲ್, ರಾಣಿ ಸತೀಶ್, ಚರಂತಿಮಠ, ಪ್ರಭಾಕರ ಕೋರೆ, ಲೀಲಾದೇವಿ ಆರ್. ಪ್ರಸಾದ್, ಮೊದಲಾದವರು ನುಡಿನಮನ ಸಲ್ಲಿಸಿದರು.

## ಅಟಲ್ ಮಿಸ್ ಇಂಡಿಯಾ ಸ್ಪರ್ಧೆ–2025

• **ಮಲ್ಲಮ್ಮ ನುಡಿ ವಾರ್ತೆ ಭುವನೇಶ್ವರ**



ಇಲ್ಲಿನ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ಸಂಸ್ಥೆಯು ಆಯೋಜಿಸಿದ್ದ ಕೆಐಐಟಿ ನಾನ್ಷಿಪಾರಿ ಲಿಟಲ್ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಬೆಂಗಳೂರಿನ ಸಮೃದ್ಧಿ ತ್ರಿಪಾಠಿ ವಿಜೇತರಾಗಿದ್ದಾರೆ.

ಮೊದಲ ಮತ್ತು ಎರಡನೇ ರನ್ನರ್–ಅಪ್ ಆಗಿ ಮಧ್ಯಪ್ರದೇಶದ ಪ್ರಾಂಜಲ್ ಶರ್ಮಾ ಮತ್ತು ತೆಲಂಗಾಣದ ಪಿ. ಪ್ರಾರ್ಥಿನಿ ಸ್ಥಾನ ಪಡೆದಿದ್ದಾರೆ. ಈ ಹಿಂದೆ ನಡೆದ ಸ್ಪರ್ಧೆಗಳಲ್ಲಿ ಕರ್ನಾಟಕದವರು ವಿಜೇತರಾಗಿ ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ.

ಕೆಐಐಟಿ ನಾನ್ಷಿಪಾರಿ ಲಿಟಲ್ ಮಿಸ್ ಇಂಡಿಯಾ ಸ್ಪರ್ಧೆಯು ರಾಷ್ಟ್ರಮಟ್ಟದ ಪ್ರತಿಭಾ ಪ್ರದರ್ಶನ ಮತ್ತು ಸೌಂದರ್ಯ ಸ್ಪರ್ಧೆಯಾಗಿದ್ದು ಈ ಬಾರಿ 25 ನೇ ಆವೃತ್ತಿಯ ಪ್ರದರ್ಶನವಾಗಿದ್ದು ವಿಶೇಷವಾಗಿತ್ತು.

ಫೋಟೋಶೂಟ್, ಅತ್ಯುತ್ತಮ ವೇಷಭೂಷಣ, ಆಕರ್ಷಕವಾದ ನಡಿಗೆ ಮತ್ತು ಅತ್ಯುತ್ತಮ ಭಂಗಿ, ಅತ್ಯುತ್ತಮ ಪರ್ಸನಾಲಿಟಿ ಹೀಗೇ ಹಲವು ವಿಭಾಗಗಳಲ್ಲಿ ಸ್ಪರ್ಧೆ ನಡೆದಿತ್ತು. ಡಿಸೆಂಬರ್ 21 ರಿಂದ 23 ರವರೆಗೆ ಸ್ಪರ್ಧೆಯ ಸೆಮಿ ಫೈನಲ್ ಮತ್ತು ಫೈನಲ್ ಹಂತದ ಚಟುವಟಿಕೆಗಳು ನಡೆದಿದ್ದವು. ಸೆಮಿ ಫೈನಲ್ ಮತ್ತು ಫೈನಲ್‌ಗೂ ಮೊದಲು ದೇಶದಾದ್ಯಂತ ಮೂರು ತಿಂಗಳು ಆಡಿಷನ್ ನಡೆದಿತ್ತು. ಆಡಿಷನ್‌ನಲ್ಲಿ ಆಯ್ಕೆಯಾದವರಿಗೆ ಸೆಮಿಫೈನಲ್‌ನಲ್ಲಿ ಸ್ಪರ್ಧಿಸಲು ಅವಕಾಶ ನೀಡಲಾಗುತ್ತದೆ. ಮೊದಲ ವಿನ್ನರ್‌ಗೆ ರೂ. 28 ಲಕ್ಷವರೆಗೆ ಬಹುಮಾನ ನೀಡಲಾಯಿತು. ಇದರಲ್ಲಿ ರೂ.10 ಲಕ್ಷ ನಗದು ಹಾಗೂ ಕೆಐಐಟಿ ವಿಶ್ವವಿದ್ಯಾಲಯದಲ್ಲಿ ಯಾವುದೇ ವಿಷಯ ಅಧ್ಯಯನಕ್ಕೆ ಶೇ 100 ರಷ್ಟು ಶೈಕ್ಷಣಿಕ ಶುಲ್ಕ ವಿನಾಯಿತಿ ಸೇರಿದೆ. ಮೊದಲನೇ ರನ್ನರ್ ಅಪ್‌ಗೆ ರೂ. 14 ಲಕ್ಷವರೆಗೆ ಗೂ ಎರಡನೇ ರನ್ನರ್ ಅಪ್ ಗೆ ರೂ. 12 ಲಕ್ಷವರೆಗೆ ಬಹುಮಾನ ನೀಡಲಾಯಿತು. ಇತರ ಹಲವು ಸ್ಪರ್ಧೆಗಳಿಗೆ ವಿಶೇಷ ವಿಭಾಗದಲ್ಲಿ ಬಹುಮಾನ ನೀಡಲಾಯಿತು. ಸಮೃದ್ಧಿ ತ್ರಿಪಾಠಿ ಅವರು, ಮಿಸ್ ಊರ್ವಶಿ ವಿಭಾಗದಲ್ಲಿ ಬಹುಮಾನವನ್ನೂ ಪಡೆದರು.

## ನ್ಯಾಯಸಮ್ಮತ ಚುನಾವಣೆಗೆ ಒತ್ತಾಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**



ಬಳ್ಳಾರಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಇರುವ ಪತ್ರಿಕಾಭವನದಲ್ಲಿ ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿದ ಮೂಲ ಸತೀಶ್ ಅವರು, ಬಳ್ಳಾರಿ ನಗರದ ಹಳೆಯ ಕೋರ್ಟ್ ರಸ್ತೆಯಲ್ಲಿರುವ ಆರ್ಯ ಈಡಿಗ ಗೌನ ಮಹಾಜನ ಸಭೆ (ನೋಂದಣಿ ಸಂಖ್ಯೆ 3/1927–28, ದಿನಾಂಕ 06–07–1927) ಸಂಘಗಳ ಅಧಿನಿಯಮ 1860ರ ಪ್ರಕಾರ ನೋಂದಾಯಿತವಾಗಿದ್ದು, ನಂತರ ದಿನಾಂಕ 20–08–2004 ರಂದು ಕರ್ನಾಟಕ ಸಂಘಗಳ ಅಧಿನಿಯಮ 1960ರ ಕಲಂ 9 ಮತ್ತು 10ರ ಅಡಿಯಲ್ಲಿ ಬೈಲಾಗಳ ತಿದ್ದುಪಡಿಯೊಂದಿಗೆ ಪುನರ್‌ನೋಂದಣಿ ಹೊಂದಿದೆ ಎಂದು ತಿಳಿಸಿದರು.

ನಾವುಗಳು ಸದರಿ ಸಂಘದ ಆಜೀವ ಸದಸ್ಯರಾಗಿದ್ದು, ಕೆಲವರು ಈ ಹಿಂದೆ ಕಾರ್ಯಕಾರಿ ಸದಸ್ಯರು, ಖಜಾಂಚಿಗಳು ಹಾಗೂ ಮಹಾ ಪ್ರಧಾನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದ್ದೇವೆ. ಸಂಘದ ಬೈಲಾ ನಿಯಮಗಳ ಪ್ರಕಾರ ಪ್ರತಿ ಮೂರು ವರ್ಷಗಳಿಗೊಮ್ಮೆ ವಾರ್ಷಿಕ ಮಹಾಜನ ಸಭೆ ಕರೆದು, ಕಾರ್ಯಕಾರಿ ಸಮಿತಿ ಹಾಗೂ ಪದಾಧಿಕಾರಿಗಳನ್ನು ಚುನಾವಣಾ ಪ್ರಕ್ರಿಯೆಯ ಮೂಲಕ ಆಯ್ಕೆ ಮಾಡಬೇಕು. ಆದರೆ ಕಳೆದ 5–6 ವರ್ಷಗಳಿಂದ ಈ ನಿಯಮಗಳನ್ನು ನಿರ್ಲಕ್ಷಿಸಿ, ಕೆಲ ಸ್ಥಾಪಿತ ಹಿತಾಸಕ್ತಿಗಳು ತಮ್ಮ ಇಚ್ಛೆಯಂತೆ ಸದಸ್ಯರನ್ನು ಆಯ್ಕೆ ಮಾಡುತ್ತಿರುವುದು ಖಂಡನೀಯವಾಗಿದೆ ಎಂದು ಅವರು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ ದಿನಾಂಕ 08–12–2025 ರಂದು ಮಾನ್ಯ ಮುಖ್ಯಮಂತ್ರಿಗಳು, ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ನಿಬಂಧಕರು, ಜಂಟಿ ನಿಬಂಧಕರು, ಉಪ ನಿಬಂಧಕರು ಹಾಗೂ ಸಂಘಗಳ ನೋಂದಣಿ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಗಿದ್ದು, ದಿನಾಂಕ 22–09–2024 ರಂದು ಅವಧಿ ಮುಕ್ತಾಯಗೊಂಡಿರುವ ಕಾರ್ಯಕಾರಿ ಸಮಿತಿ ಮತ್ತು ಪದಾಧಿಕಾರಿಗಳ ಬದಲಿಗೆ, ಬೈಲಾ ನಿಯಮದಂತೆ ಪ್ರಜಾಪ್ರಭುತ್ವಾತ್ಮಕ ಚುನಾವಣೆಯನ್ನು ನಡೆಸಬೇಕೆಂದು ಆಗ್ರಹಿಸಲಾಗಿದೆ. ಜೊತೆಗೆ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಕ ಮಾಡಿ, ನ್ಯಾಯಸಮ್ಮತ ಚುನಾವಣೆಯನ್ನು ಜರುಗಿಸಬೇಕೆಂದೂ ಮನವಿ ಮಾಡಲಾಗಿದೆ.

## ಅನ್ನದ ಮಹತ್ವ ಸಾರಿದ್ದ ಒಕ್ಕಲಿಗ ಮುದ್ದಣ್ಣ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**



ಒಕ್ಕಲಿಗ ಮುದ್ದಣ್ಣ ಅನ್ನದ ಮಹತ್ವ ಸಾರಿದ್ದರು ಎಂದು ಬಸವಕಲ್ಯಾಣದ ನೀಲಾಂಬಿಕಾ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು ಉಪನ್ಯಾಸಕಿ ಡಾ. ಸವಿತಾ ಯರನಳ್ಳೆ ಹೇಳಿದರು.

ಲಿಂಗಾಯತ ಮಹಾ ಮಠದ ವತಿಯಿಂದ 270ನೇ ಮಾಸಿಕ ಶರಣ ಸಂಗಮ ಹಾಗೂ ರೈತ ದಿನಾಚರಣೆ ನಿಮಿತ್ತ ಮಂಗಳವಾರ ಆಯೋಜಿಸಿದ್ದ ಒಕ್ಕಲಿಗ ಮುದ್ದಣ್ಣನವರ ವಚನ ಚಿಂತನೆ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು. ಹೊನ್ನಿನಿಂದ ಹೊಟ್ಟೆ ತುಂಬದು. ಹೊಟ್ಟೆ ತುಂಬಲು ಅನ್ನವೇ ಬೇಕು. ಕಾರಣ, ಚಿನ್ನಕ್ಕಿಂತ ಅನ್ನ ಮಿಗಿಲು ಎಂದು ಹೇಳುತ್ತಿದ್ದರು ಎಂದು ತಿಳಿಸಿದರು. ದೇಹದ ಹಸಿವು ತಣಿಸಲು ಒಕ್ಕಲುತನ ಹಾಗೂ ಅಂತರಂಗದ ಹಸಿವು ತಣಿಸಲು ಆಧ್ಯಾತ್ಮ ಸಾಧನೆ ಅವಶ್ಯವೆಂದು ಪ್ರತಿಪಾದಿಸಿದ್ದರು ಎಂದು ಹೇಳಿದರು. ಕೃಷಿಯನ್ನು ಕಾಯಕವಾಗಿಸಿಕೊಂಡಿದ್ದ 12ನೇ ಶತಮಾನದ ಶರಣ ಒಕ್ಕಲಿಗ ಮುದ್ದಣ್ಣ, ಮನುಕುಲವನ್ನು ಪೋಷಿಸುವವನೇ ಅನ್ನದಾತ ಎಂದು ಬಣ್ಣಿಸುತ್ತಿದ್ದರು. ಹೆಚ್ಚಿನ ತೆರಿಗೆ ಕಟ್ಟಲಾರೆನೆಂದು ರಾಜಸತ್ತೆ ವಿರುದ್ಧ ಪ್ರತಿಭಟಿಸಿದ ಮೊದಲ ರೈತ ಅವರಾಗಿದ್ದರು ಎಂದು ತಿಳಿಸಿದರು.ಕೃಷಿ ಪಾರಿಭಾಷಿಕ ಪದಗಳನ್ನು ಬಳಸಿ ವಚನಗಳನ್ನು ರಚಿಸಿದ್ದರು. 'ಕಾಮ ಭೀಮ ಜೀವನದೊಡೆಯ' ಅವರ ವಚನಾಂಕಿತ. ಅವರ 12 ವಚನಗಳು ಮಾತ್ರ ಲಭಿಸಿದ್ದು, ಅವುಗಳಲ್ಲಿ ಆಧ್ಯಾತ್ಮದ ಅರಿವು ತುಂಬಿ ತುಳುಕುತ್ತಿದೆ ಎಂದು ಹೇಳಿದರು.

ಉದ್ಘಾಟನೆ ನೆರವೇರಿಸಿದ ಕೆ.ಎಸ್.ಸಿ.ಎ. ರಾಯಚೂರು ವಲಯ ಸಂಚಾಲಕ ಕುಶಾಲರಾವ್ ಪಾಟೀಲ ಮಾತನಾಡಿ, ಮನುಷ್ಯನಿಗೆ ಮಣ್ಣಿನ ಸಂಬಂಧವಿರಬೇಕು. ಇಂದಿನ ಕಲುಷಿತ ವಾತಾವರಣದಲ್ಲಿ ಸ್ವತಃ ರೈತನಾದರೆ ಮಾತ್ರ ಆರೋಗ್ಯವಾಗಿರಲು ಸಾಧ್ಯ ಎಂದು ತಿಳಿಸಿದರು.

ಮುದ್ದಣ್ಣನವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ರಾಸಾಯನಿಕ ಮುಕ್ತ ಬೆಳೆ ಬೆಳೆಯಲು ಪಣ ತೊಡಬೇಕು ಎಂದರು.

ಅಕ್ಕ ಅನ್ನಪೂರ್ಣತಾಯಿ ನಾಡು ಕಂಡ ಅಪ್ರತಿಮ ಬಸವ ತತ್ವ ಪ್ರವಚನಕಾರರು. ಅವರಿಂದ ಬದುಕು ರೂಪಿಸಿಕೊಳ್ಳಲು ಪ್ರೇರಣೆ ದೊರೆತಿದೆ ಎಂದು ಹೇಳಿದರು.

ಸಾನಿಧ್ಯ ವಹಿಸಿದ್ದ ಲಿಂಗಾಯತ ಮಹಾ ಮಠದ ಪ್ರಭುದೇವ ಸ್ವಾಮೀಜಿ ಮಾತನಾಡಿ, ಭೌತಿಕ ಕೃಷಿ ಮತ್ತು ಆಧ್ಯಾತ್ಮಿಕ ಕೃಷಿ ಎಂಬ ಎರಡು ಬಗೆಯ ಕೃಷಿಗಳನ್ನು ಬಸವಾದಿ ಶರಣರು ಪ್ರತಿಪಾದಿಸಿದ್ದಾರೆ. ಇದರಲ್ಲಿ ಕೃಷಿಯೇ ಸರ್ವ ಶ್ರೇಷ್ಠ ಕಾಯಕ ಎಂದು ನುಡಿದರು.ಒಕ್ಕಲಿಗ ಬಿತ್ತಿದರೆ ಜಗವೆಲ್ಲ ಉಣ್ಣುತ್ತದೆ. ಇಲ್ಲದಿದ್ದರೆ ಹಾಹಾಕಾರ. ಭೌತಿಕ, ಸುಖ, ಶಾಂತಿಗೆ ರೈತನ ಉತ್ಪಾದನೆ ಬೇಕು. ಆದರೆ, ಭೌತಿಕ ಸುಖ ಶಾಶ್ವತವಲ್ಲ. ಶಾಶ್ವತ ಸುಖ ಸಂಪಾದಿಸಲು ಆಧ್ಯಾತ್ಮಿಕ ಕೃಷಿಯತ್ತ ಮುಖ ಮಾಡಬೇಕು ಎಂದು ತಿಳಿಸಿದರು.

## ಕೇಸ್ ಹಿಂಪಡೆಯಲು ಮನವಿ: ಸಚಿವ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು**



ಕನ್ನಡ ನಾಡು ನುಡಿ ಜಲ ನೆಲ ರಕ್ಷಣೆಗೆ ಟೊಂಕ ಕಟ್ಟಿ ನಿಂತ ಹೋರಾಟಗಾರರ ಮೇಲಿನ ಕೇಸ್ ಗಳನ್ನು ಹಿಂಪಡೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಪತ್ರ ಬರೆದು ಸರ್ಕಾರದ ಗಮನ ಸೆಳೆದು ಕೇಸ್ ಗಳನ್ನು ಹಿಂಪಡೆಯಲು ಮನವರಿಕೆ ಮಾಡಲಾಗುವುದು ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ವಿಜಯಸೇನೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ವತಿಯಿಂದ ಅಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಬೆಂಗಳೂರು ಕನ್ನಡ ಹಬ್ಬದಲ್ಲಿ ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಹಾಗೂ ಕೆ ಪಿ ಸಿ ಸಿ ಸಂಯೋಜಕರು ಉಮೇಶ್ ಬೊರೇಗೌಡ್ರು, ಸಂಸ್ಥಾಪಕ ರಾಜ್ಯಾಧ್ಯಕ್ಷ ದೀಪಕ್ ಹೆಚ್ ಎನ್ ರವರು ಭಾಗವಹಿಸಿ ಜ್ಯೋತಿ ಬೆಳಗಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಲವುಕಿರು ತೆರೆ ನಟರಿಂದ ಮನೋರಂಜನೆ ಹಾಗೂ ಸಂಗೀತ ಕಾರ್ಯಕ್ರಮ ಜರುಗಿದವು ಹಾಗೂ

ವಿಶೇಷವಾಗಿ ಕನ್ನಡ ಪ್ರೇಮಿ ದಾಸಪ್ಪ ಹಾಗೂ ಪರಿಸರ ಪ್ರೇಮಿ ಸೌಮ್ಯರವರಿಗೆ ಕದಂಬ ಪ್ರಶಸ್ತಿ ಹಾಗೂ ವೀರ ಕನ್ನಡಿಗ ಪ್ರಶಸ್ತಿಯನ್ನು ಬೆಳಗಾವಿಯ ಕುರುಬರಹಟ್ಟಿಯ 14 ಯುವಕರಿಗೆ ನೀಡಲಾಯಿತು ಈ ಸಂದರ್ಭದಲ್ಲಿ ಬೆಳಗಾವಿಯ ಜಿಲ್ಲಾಧ್ಯಕ್ಷ ಸುರೇಶ್ ಇಟಗಿ ಉಪಸ್ಥಿತರಿದ್ದರು.

ಈ ಸಂಧರ್ಭದಲ್ಲಿ ಕೆಪಿಸಿಸಿ ಕಾರ್ಮಿಕ ಘಟಕದ ರಾಜ್ಯ ಜಂಟಿ ಕಾರ್ಯದರ್ಶಿ ಎಂಕೆ ನಿಸಾರ್ ಖಾನ್, ಹೆಗ್ಗನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ವಿದ್ಯಾಭೂಷಣ್ ಇಂಟರ್ನ್ಯಾಷನಲ್ ಸ್ಕೂಲ್ ಸಂಸ್ಥಾಪಕ, ಕಾಂಗ್ರೆಸ್ ಮುಖಂಡರಾದ ಬ ನಾ ರವಿ, ಮಂಡ್ಯ ಮಲ್ಲೇಶ್ ಗೌಡ, ಬಸವರಾಜ್, ಸತೀಶ್ ಚಂದ್ರ, ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿ ಸನ್ಮಾನ ಸ್ವೀಕರಿಸಿದರು.

ವಿಜಯಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ದೀಪಕ್ ಹೆಚ್ ಎನ್, ರಾಜ್ಯ ಉಪಾಧ್ಯಕ್ಷ ಸಚ್ಚಿದಾನಂದ, ಬೆಂಗಳೂರು ನಗರ, ಜಿಲ್ಲಾಧ್ಯಕ್ಷ ವಾಸುದೇವ್ ಎಸ್, ಬೆ.ನಗರ ಜಿಲ್ಲೆ ಪ್ರಧಾನ ಕಾರ್ಯದರ್ಶಿ ಜಗದೀಶ್, ಉಪಾಧ್ಯಕ್ಷ ಪ್ರಶಾಂತ್ ಟಿಸಿ ,ವಿನಯ್, ರಾಜ್ಯ ಯುವಘಟಕದ ಅಧ್ಯಕ್ಷ ಮಹೇಶ್ ಎಸ್ ಅರ್, ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಗಿಡ್ಡೇನಹಳ್ಳಿ ಶಶಿಕುಮಾರ್, ಉಪಾಧ್ಯಕ್ಷ ಕಿರಣ್ ,ಪ್ರಧಾನ ಕಾರ್ಯದರ್ಶಿ ರೋಹನ್ ಶೆಟ್ಟಿ, ಪ್ರಚಾರ ಸಮಿತಿ ಅಧ್ಯಕ್ಷರಾದ ರೇಣುಕಾ ಪ್ರಸಾದ್ ಮಹಿಳಾ ಘಟಕದ ರಾಜ್ಯಾಧ್ಯಕ್ಷ ಗಂಗರಾಜಮ್ಮ, ಪುನೀತ್ ಸಂಜು ಜಯಂತ್, ಪಧಾದಿಕಾರಿಗಳು ಇದ್ದರು. ಇದ್ದರು.






Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)